ಬದಲಾವಣೆಗೆ ತೊಂದರೆ ಉಂಟಾದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯು ಹೊರಡಿಸಿರುವ ಅಧಿಸೂಚನೆ ದಿ:18.8.2003ರಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ತರಲಾಗಿರುವ ಕಾರ್ಯಕ್ರಮಗಳನ್ನು ಪುನರ್‌ಪರಿಶೀಲಿಸಲಾಗುವುದು.

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ ಮೂರು ಘಂಟೆಯವರೆಗೂ ಮುಂದೂಡಲ್ಪಟ್ಟಿದೆ.

ಸದನವು ಪುನಃ ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಶ್ರೀ ಕೃಷ್ಣ) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

3. ಅಧ್ಯಕ್ಷರ ತೀರ್ಪು :

ವಿಷಯ: ಸದನದಲ್ಲಿ ಮಾನ್ಯ ಸದಸ್ಯರುಗಳ ಮೊಬೈಲ್ ಫೋನ್‌ಗಳನ್ನು ನಿಷೇದಿಸಿರುವುದು.

ಅಧ್ಯಕ್ಷರು : ನಾನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದೇನೆಂದರೆ, ಅನೇಕ ಸದಸ್ಯರುಗಳು ಮೊಬೈಲ್ ಫೋನ್‌ಗಳನ್ನು ಸದನದೊಳಗೆ ತರುವ ಪರಿಪಾಠ ಇಟ್ಟುಕೊಂಡಿದ್ದು, ಇದರಿಂದಾಗಿ ಸದನದ ಕಲಾಪಕ್ಕೆ ಧಕ್ಕೆಯುಂಟಾಗುವುದರಿಂದ ಯಾವುದೇ ಮಾನ್ಯ ಸದಸ್ಯರು ಮೊಬೈಲ್ ಫೋನ್ ಗಳನ್ನು ಸದನದೊಳಗೆ ತರಬಾರದೆಂದು ವಿನಂತಿಸಿಕೊಳ್ಳುತ್ತೇನೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ಊ) ವಿಷಯ: ತೆಂಗಿನ ಮರಗಳಿಗೆ ಹಬ್ಬಿರುವ ನುಸಿ ಪೀಡೆ ಭಾದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ತೆಂಗಿನ ಮರಗಳಿಗೆ ಹಬ್ಬಿರುವ ನುಸಿಪೀಡೆ ಬಾಧೆ ಕುರಿತಂತೆ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ತಿಳಿಸಿದ್ದೀರಿ. ಈಗ ಈ ಕುರಿತಾದ ಚರ್ಚೆಗೆ ತಾವು ಅವಕಾಶ ಕಲ್ಪಿಸಿಕೊಡಬೇಕು.

ಋ) ವಿಷಯ : ಕೂಲಿಗಾಗಿ ಕಾಳು ಯೋಜನೆಯಲ್ಲಿನ ಅಕ್ಕಿ ಹಾಳಾಗುತ್ತಿರುವ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಕೂಲಿಗಾಗಿ ಕಾಳು ಯೋಜನೆಗೆ ಮೀಸಲಿಟ್ಟ ಅಕ್ಕಿ ಹಾಳಾಗುತ್ತಿರು ಹಾಗೂ ಯೋಜನೆ ಸ್ಥಗಿತಗೊಂಡಿರುವ ಬಗ್ಗೆ ನಾನು ಮಾನ್ಯ ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಗಮನ ಸೆಳೆಯಬೇಕಾಗಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಲ್ಲಿ ಸುಮಾರು 20,000 ಮೆಟ್ರಿಕ್ ಟನ್ ಗಳಷ್ಟು... .. ಇದು ಬಹಳ ಪ್ರಮುಖವಾದ ವಿಚಾರವಾಗಿರುವುದರಿಂದ ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಡಬೇಕು.

ಅಧ್ಯಕ್ಷರು : ತಮಗೆಲ್ಲರಿಗೂ ವಿಷಯುಗಳನ್ನು ಪ್ರಸ್ತಾಪಿಸಲು ನಾಳೆ ಅವಕಾಶ ಮಾಡಿಕೊಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಈಗ ಮಾನ್ಯ ವಿರೋಧ ಪಕ್ಷದ ನಾಯಕರು 2004–05ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಚರ್ಚೆ ಪ್ರಾರಂಭಿಸಬೇಕು.

5. ವಿತ್ತೀಯ ಕಾರ್ಯಕಲಾಪಗಳು

2004–05ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಚರ್ಚೆ

† **ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಸನ್ಮಾನ್ಯ ಅಧ್ಯಕ್ಷರೆ, ಆಯವ್ಯಯ ಅಂದಾಜುಗಳ ಮೇಲೆ ಮಾತನಾಡುವಾಗ 'ವಿರೋಧ ಪಕ್ಷದ ನಾಯಕ'

ಎನ್ನುವಂತಹ ಸ್ಥಾನಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹತ್ವ ಕೊಟ್ಟ ಬಳಿಕವೂ ಸಹ, ಹಣಕಾಸು ಸಚಿವರೆ, ಎಷ್ಟು ಮಂದಿ ಅಧಿಕಾರಿಗಳು ಗ್ಯಾಲರಿಗೆ ಬಂದು ಕುಳಿತಿದ್ದಾರೆಂಬುದನ್ನು ತಾವು ಅತ್ತ ಕಡೆ ತಿರುಗಿ ನೋಡಬೇಕು. ಅವರಿಗೆ ಪುರುಸೊತ್ತಿಲ್ಲ! ಆರು ತಿಂಗಳ ಕಾಲ ರೆಸ್ಟ್ ತೆಗೆದುಕೊಂಡರು. ಫೆಬ್ರವರಿಯಿಂದ, ಚುನಾವಣಾ ಪ್ರಕ್ರಿಯೆ ಪ್ರಾರಂಭವಾದಾಗಿನಿಂದ ಸುಮಾರು ಆರು ತಿಂಗಳುಗಳ ಕಾಲ ಈ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಜರುಗದೆ ಎಲ್ಲವೂ ಸ್ಥಗಿತವಾಗಿದೆ. ಅಧಿಕಾರಿಗಳು ಕುಂಭಕರ್ಣ ನಿದ್ದೆಯಲ್ಲಿದ್ದರು, ಅದೇ ರೀತಿ ಸರ್ಕಾರವೂ ಇತ್ತು. ಇವೊತ್ತ ಈ ನಾಡಿನ ಜನರ ಅಭಿವೃದ್ಧಿ ಕಡೆಗಾದರೂ ಗಮನಹರಿಸೋಣವೆಂಬ ಕಳಕಳಿಯೂ ಅಧಿಕಾರಿ ವರ್ಗದವರಿಗೆ ಇಲ್ಲವೆಂದರೆ ಬಹಳ ನೋವುಂಟಾಗುತ್ತದೆ. ಸನ್ಮಾನ್ಯ ಸಿದ್ಧರಾಮಯ್ಯನವರು ಅಥವಾ ಇನ್ಯಾರೇ ಅಧಿಕಾರ ನಡೆಸಲಿ, ಸರ್ಕಾರಕ್ಕೊಂದು ಗೌರವ ಬರಬೇಕಾದರೆ ನಮ್ಮ ಅಧಿಕಾರಿ ವರ್ಗದವರು ಹೇಗೆ ನಡೆದುಕೊಳ್ಳುತ್ತಾರೆ, ಎಷ್ಟರಮಟ್ಟಿಗೆ ಅವರಿಗೆ ಕಳಕಳಿ ಇರುತ್ತದೆ, ಇದರ ಮೇಲೆಯೇ ಸರ್ಕಾರ ಅವಲಂಭಿತವಾಗುತ್ತದೆಂದು ನಾನು ತಿಳಿದಿದ್ದೇನೆ. ಹತ್ತಾರು ಸಲ ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಅಧ್ಯಕ್ಷರು ಹೇಳಿದ ನಂತರವೂ ಸಹ, ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಬಂದು ಕುಳಿತುಕೊಳ್ಳಬೇಕೆನ್ನುವ ಸಾಮಾನ್ಯ ಸಂಗತಿಯೂ ಅವರಿಗೆ ಇಲ್ಲವೆನ್ನುವುದಾದರೆ ಈ ಸರ್ಕಾರಕ್ಕೆ ಅಧಿಕಾರಿಗಳ ಮೇಲಿನ ಹಿಡಿತ ತಪ್ಪಿಹೋಗಿದೆ. ನಿಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ಯಾವುದೇ ಅಧಿಕಾರಿಗಳ ಮೇಲೂ ಹತೋಟಿ ಇಲ್ಲವೆಂಬುದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಈ ವಿಷಯವನ್ನು ನಾನು ಹೆಚ್ಚು ಬೆಳೆಸುವುದಕ್ಕೆ ಹೋಗದೆ ಇಷ್ಟನ್ನು ಮಾತ್ರ ಹೇಳಿ, ಮುಂದಿನ ವಿಷಯ ಪ್ರಸ್ತಾಪಿಸಲು ಇಷ್ಟಪಡುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಅಧಿಕಾರಿಗಳನ್ನು ಕರೆಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪರವಾಗಿಲ್ಲ, ನನಗೇನೂ ಚಿಂತೆ ಇಲ್ಲ ಆದರೆ, ಹೇಳುವುದು ನನ್ನ ಕರ್ತವ್ಯವಾದ್ದರಿಂದ ಹೇಳಿದ್ದೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ಹಣಕಾಸು ಸಚಿವರ ಬಗ್ಗೆ ನನಗೆ ತುಂಬಾ ಗೌರವವಿದೆ. ಹಿಂದೆ ಹೆಚ್.ಡಿ. ದೇವೇಗೌಡ, ಜೆ.ಹೆಚ್. ಪಟೇಲರ ಕಾಲದಲ್ಲಿ ಆಯವ್ಯಯ ಅಂದಾಜು ಪತ್ರ ಮಂಡಿಸಿ ನಾಡಿನ ಜನರ ಬಗ್ಗೆ ಕಳಕಳಿ ತೋರಿಸಿ ಕೆಲಸ ಮಾಡಿದಂತಹ ಸನ್ಮಾನ್ಯ ಸಿದ್ಧರಾಮಯ್ಯನವರ ಕೈ ಈಗ ಕಟ್ಟಿದೆ! ಆ ಸ್ವಾತಂತ್ರ್ಯ ಇವೊತ್ತು ನಿಮಗಿಲ್ಲ. ನನಗೆ ನೆನಪಿರುವಂತೆ ಆಯವ್ಯಯ ಅಂದಾಜು ಪತ್ರ ಗಾತ್ರದಲ್ಲಿ ಬಹಳ ದೊಡ್ಡದು. ಆದರೆ, ಈ ನಾಡಿನ ಐದೂವರೆ ಕೋಟಿ ಜನರಿಗೆ 'ಶೂನ್ಯ'ವೆಂದು ನಾನು ಹೇಳದೆ, ಇದರಿಂದ ಯಾವುದೇ ರೀತಿಯಲ್ಲಿ ಈ ನಾಡಿನ ಪ್ರಗತಿ ಸಾಧಿಸಬಹುದು, ಇಲ್ಲಿರುವ 224 ಶಾಸಕರು ಬಹಳ ಗೌರವದಿಂದ ತಂತಮ್ಮ ಕ್ಷೇತ್ರಗಳಲ್ಲಿ ಓಡಾಡಬಹುದೆನ್ನುವಂತಹ ಅಂಶಗಳು ಇದರಲ್ಲೇನಾದರೂ ಇರಬಹುದೆಂದು ನನಗನ್ನಿಸುತ್ತಿಲ್ಲ. ಇದು ಕೇವಲ ಎಂಟು ತಿಂಗಳುಗಳಿಗಾಗಿರುವ ಆಯವ್ಯಯವಾಗಿದೆ. ಸಾಮಾನ್ಯವಾಗಿ ವರ್ಷದ ಮಾರ್ಚಿ ತಿಂಗಳಿನಲ್ಲಿ ಆಯವ್ಯಯ ಅಂದಾಜನ್ನು ಮಂಡಿಸಿ, ಆಯವ್ಯಯದಲ್ಲಿ ಅಲೋಕೇಶನ್‌ಗಳೆಲ್ಲವೂ ಆದ ಬಳಿಕ ಇಲಾಖೆಗಳ ಕೆಲಸ-ಕಾರ್ಯಗಳು ಈ ದಿವಸಗಳಲ್ಲಿ ಪ್ರಾರಂಭವಾಗಬೇಕಿರುತ್ತದೆ. ಇಂತಹ ದಿವಸಗಳಲ್ಲಿ ನಮ್ಮ ರಾಜ್ಯದಲ್ಲಿ ಯಾವ ಪರಿಸ್ಥಿತಿ ಇದೆ. ಮಾನ್ಯ ಸಿದ್ಧರಾಮಯ್ಯನವರಿಗೆ ಒಂದು

ಅಭಿನಂದನೆ ಸಲ್ಲಿಸುವುದೇನೆಂದರೆ, ನಿಮ್ಮ ಅಯವ್ಯಯ ಅಂದಾಜು ಪತ್ರದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಬಹಳ ಸ್ಪಷ್ಟವಾಗಿ ಮುಚ್ಚುಮರೆ ಇಲ್ಲದೆ ತಿಳಿಸಿದ್ದೀರಿ. ಪ್ರಾರಂಭದಲ್ಲಿ ನಾನು ಒಂದು ವಿಷಯದಲ್ಲಿ ಒತ್ತಾಯಿಸುವುದೇನೆಂದರೆ, ಸಾಧ್ಯವಾದರೆ ಇವೊತ್ತು ಅಥವಾ ನಾಳೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಕುರಿತು ಒಂದು ಶ್ವೇತಪತ್ರ ಹೊರಡಿಸಬೇಕು. ತಾವು ವಿರೋಧ ಪಕ್ಷದಲ್ಲಿದ್ದಾಗ, ರಾಜ್ಯದ ಉದ್ದಗಲಕ್ಕೂ ಓಡಾಡಿರುವಂತಹ ಸಂದರ್ಭದಲ್ಲಿ, ತಾವು ಏನು ಮಾಡಿದ್ದಿರಿ, ವಾಸ್ತವಿಕ ಸ್ಥಿತಿ ಹಾಗೆಯೇ ಇದೆ. ಅದನ್ನು ಈ ರಾಜ್ಯದ ಜನತೆಗೆ ಇವೊತ್ತಿನ ಹಣಕಾಸು ಸ್ಥಿತಿ–ಗತಿ ಬಗ್ಗೆ ಒಂದು ಶ್ವೇತಪತ್ರ ಹೊರಡಿಸುವ ಮೂಲಕ ತಿಳಿಸುತ್ತೀರೆಂದು ತಿಳಿದಿದ್ದೆ. ತಾವು ಈಗಲಾದರೂ ಆ ಕೆಲಸ ಮಾಡಿದರೆ ನೀವು ಎಷ್ಟು ತಿಂಗಳಲ್ಲಿ ಏನು ಸಾಧಿಸುತ್ತೀರೆನ್ನುವುದು ಅರ್ಥವಾಗಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ನಾನು ನೊಂದು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಏನೆಂದರೆ, ಮೊನ್ನೆ ದಿವಸ ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆಯಿಂದ ಈ ರಾಜ್ಯದ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರು ಹಠಾತ್ತನೆ ನಿರ್ಗಮಿಸಿದರು. ಸ್ವತಃ ಆ ಪಕ್ಷದ ಅಧ್ಯಕ್ಷರಾದ ಜನಾರ್ದನ ಪೂಜಾರಿಯವರು ಸಭೆಯಲ್ಲಿ ಪ್ರಸ್ತಾಪಿಸುತ್ತಾ "ಸಿದ್ದರಾಮಯ್ಯನವರ ಆಯವ್ಯಯ ಮುಂಗಡ ಪತ್ರದಲ್ಲಿ ಹಿಂದಿನ ಸರ್ಕಾರದ ವಿರುದ್ಧ ಟೀಕೆ–ಟಿಪ್ಪಣಿಗಳನ್ನು ಮಾಡುವುದಕ್ಕೆ ಹೇಗೆ ಅವಕಾಶ ಮಾಡಿಕೊಟ್ಟಿರಿ? ಮುಖ್ಯಮಂತ್ರಿಗಳು ಇದನ್ನು ನೋಡಿಯೂ ಮೌನವಾಗಿ ಏಕೆ ಇದ್ದಿರಿ?ನಿನ್ನೆ ಮಂಡಿಸಿದಂಥ ಆಯವ್ಯಯ ಮುಂಗಡ ಪತ್ರದಲ್ಲಿ ಸಿದ್ದರಾಮಯ್ಯನವರು ತಮ್ಮ ಪಕ್ಷದ ಕಾರ್ಯಕ್ರಮಗಳನ್ನೇ ಹೆಚ್ಚಾಗಿ ಪ್ರತಿಬಿಂಬಿಸಿದ್ದಾರೆ. ಆದರೆ ಕೃಷ್ಣ ಸರ್ಕಾರದ ಸಾಧನೆಗಳನ್ನು ಟೀಕಾಸ್ತ್ರವನ್ನಾಗಿ ಮಾಡಿಕೊಂಡಿದ್ದಾರೆ ಎಂಬ ಆಕ್ರೋಶ ಕಾಂಗ್ರೆಸ್‌ನ ಅಧ್ಯಕ್ಷ ಜನಾರ್ದನ ಪೂಜಾರಿಯವರು ವ್ಯಕ್ತಪಡಿಸಿದರು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಯವರು) ಅದನ್ನು ಅವರು ಡಿನೈ ಮಾಡಿದ್ದಾರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿನೈ ಮಾಡಿದ್ದರೆ ಇರಲಿ, ಅದು ವಾಡಿಕೆ. ತಾವು ಇದನ್ನು ಹೇಗೆ ತೆಗೆದುಕೊಳ್ಳಬೇಕೋ ಹಾಗೆ ತೆಗೆದುಕೊಳ್ಳುತ್ತೀರಿ ಎಂದು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ರಾಜಕಾರಣಿಗಳಿಗೆ ಯಾವಾಗ ಏನು ಹೇಳುತ್ತೇವೆ, ಯಾವ ರೀತಿ ಅದನ್ನು ತಿರುಚಿ ಮಾತನಾಡಬಹುದು, ಇದರ ಬಗ್ಗೆ ನಾವು ಪರಿಣಿತರಿದ್ದೇವೆ, ಸ್ವಾತಂತ್ರ್ಯ ಬಂದು 57 ವರ್ಷದಲ್ಲಿ ನಮಗೆ ಇದಕ್ಕೇನು ಕೊರತೆ ಇಲ್ಲ. ನಾನು ಏಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ, ಸಿದ್ಧರಾಮಯ್ಯನವರು ಮಂಡಿಸಿರುವ ಈ ಆಯವ್ಯಯ, ಮೊನ್ನೆ ಶಾಸಕಾಂಗ ಪಕ್ಷದಲ್ಲಿ ನಡೆದಿರುವಂಥ ಚರ್ಚೆ, ಇದು ಏನು ಕಾಣುತ್ತದೆಂದರೆ ಆ ಕಡೆ ಈ ಕಡೆ ಕುಳಿತಿರುವ ನಮಗೆಲ್ಲಾ ಇನ್ನೊಂದು ವರ್ಷ ಅಕಸ್ಮಾತ್ ಈ ಸರ್ಕಾರ ಮುಂದುವರೆದರೆ ಕಷ್ಟವಾಗಬಹುದು, ಅಂದರೆ ಚುನಾವಣೆಗೆ ಸಿದ್ಧರಾಗಿ ಎನ್ನುವ ಸಂದೇಶ ಇದು. ಏಕೆಂದರೆ, ಬಹಳ ಸ್ಪಷ್ಟವಾಗಿ ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಆಡಳಿತ ಪಕ್ಷದ ನಮ್ಮ ಸ್ನೇಹಿತರು ಹೇಗೆ ಮಾಡುತ್ತಿರೋ ನನಗೆ ಗೊತ್ತಿಲ್ಲ. ಈ ಕಡೆ ಇರತಕ್ಕ ನನ್ನ ವಿರೋಧ ಪಕ್ಷದ ಎಲ್ಲಾ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತೇನೆ. ಅಪರೂಪಕ್ಕೆ ಹತ್ತಾರು ವರ್ಷಗಳು ದುಡಿದು ಜನರ ಆಶೀರ್ವಾದದಿಂದ ಶಾಸಕರಾಗಿ ಬಂದಿದ್ದೀರಿ, ನಾಳೆ 6ನೇ ತಾರೀಖು ಈ ಸದನ

ಮುಗಿದ ಮೇಲೆ ನಿಮ್ಮ ಕ್ಷೇತ್ರಕ್ಕೆ ಹೋದರೆ ಕ್ಷೇತ್ರದಲ್ಲಿರುವಂಥ ಆರು ತಿಂಗಳಿನಿಂದ ಸ್ಥಗಿತವಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ, ಮೂರು ವರ್ಷದಿಂದ ಬರಗಾಲದಿಂದ ತತ್ತರಿಸಿಹೋಗಿ ಮತ್ತೊಮ್ಮೆ ಬರಗಾಲಕ್ಕೆ ಕಾಲಿಡುತ್ತಿದ್ದೇವ್ವೋ ಎಂಬ ವಾತಾವರಣ ಮೂಡುತ್ತಿರುವ ಈ ಸಂದರ್ಭದಲ್ಲಿ ಒಬ್ಬ ತಾಲ್ಲೂಕು ಪಂಚಾಯಿತಿ ಸದಸ್ಯ ಒಬ್ಬ ಜಿಲ್ಲಾ ಪಂಚಾಯಿತಿ ಸದಸ್ಯ ಆ ಸಮಸ್ಯೆಗಳಿಗೆ ತನ್ನ ಕ್ಷೇತ್ರದಲ್ಲಿ ಏನಾದರೂ ಅಲ್ಪಸ್ವಲ್ಪ ಅನುಕೂಲವನ್ನು ಮಾಡಿಕೊಡಬಹುದು, ಆ ಕೆಲಸವನ್ನೂ ಮಾಡಲು ಆಗದೆ ಇರುವಂಥ ಉಸಿರುಕಟ್ಟುವಂಥ ಸ್ಥಿತಿಯಲ್ಲಿ ಈ ಬಜೆಟ್ ಇದೆ. ಏಕೆಂದರೆ ಸಿದ್ಧರಾಮಯ್ಯನವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಆ ಪಕ್ಷದ ಮುಖಂಡರಿಗೆ ಚೆನ್ನಾಗಿ ಗೊತ್ತಿದೆ, ಇದನ್ನು ಹೇಗಾದರೂ ಮಾಡಿ ಆದಷ್ಟು ಬೇಗ ನಾವೇ ಸ್ವತಂತ್ರ್ಯವಾಗಿ ಏಕೆ ಅಲ್ಲಿ ಕುಳಿತುಕೊಳ್ಳಬಾರದು ಎಂಬ ಚಿಂತೆ ಅವರಿಗಿದ್ದರೆ, ಮತ್ತೊಬ್ಬರಿಗೆ ನಾವೇನು ಮಾಡಬೇಕು ಎಂಬ ಚಿಂತೆ ಮಾಡುವಂಥ ಮಾತು. ನಾನು ಒಂದು ಮಾತನ್ನು ಮಾನ್ಯ ಹಣಕಾಸಿನ ಸಚಿವರು ತಪ್ಪನ್ನು ತಿಳಿದುಕೊಳ್ಳದಿದ್ದರೆ ಹೇಳುತ್ತೇನೆ, ರಾಜ್ಯದ ಉದ್ದಗಲಕ್ಕೆ ಯಾವುದೇ ಪ್ರದೇಶಕ್ಕೆ ಹೋಗಲಿ, ಪಕ್ಷಭೇದವಾಗಿ ನಾನು ಹೇಳುತ್ತಿದ್ದೇನೆ, ಸಾಮಾನ್ಯ ಜನ ಮಾತನಾಡುತ್ತಿರುವುದು, ಸರ್ಕಾರ ಎಷ್ಟು ದಿನ ನಡೆಯುತ್ತದೆ, ಒಂದಷ್ಟು ವ್ಯವಸ್ಥೆಯನ್ನು ಮಾಡಿಕೊಂಡು ಮುಂದಿನ ಚುನಾವಣೆಗೆ ದುಡ್ಡುಕಾಸಿನ ಸಿದ್ಧತೆಯನ್ನು ಮಾಡಿಕೊಂಡು ಚುನಾವಣೆಗೆ ಹೋಗುವ ಸಿದ್ಧತೆ, ಈ ಮಾತನ್ನು ಕೇಳಿದಾಗ ನನಗೆ ಅದಕ್ಕೆ ಉತ್ತರವನ್ನು ಹೇಗೆ ಕೊಡಬೇಕು ಎಂದು ಅನ್ನಿಸುತ್ತಿಲ್ಲ. ಈ ಭಾವನೆ ಪ್ರಾರಂಭದಲ್ಲೇ ಎರಡೇ ತಿಂಗಳಿನಲ್ಲಿ ರಾಜ್ಯದ ಜನರಲ್ಲಿ ಮನೆಮಾತಾಗಿದೆ ಎನ್ನುವುದಾದರೆ ನಿಮ್ಮ ನಡವಳಿಕೆ, ಸರ್ಕಾರ ನಡೆಸುವಂಥ ಸಂದರ್ಭದಲ್ಲಿ ಆದಂಥ ಪರಿಸ್ಥಿತಿಗಳು, ನಡೆದಂಥ ಘಟನಾವಳಿಗಳು, ನಮ್ಮ ಸರ್ಕಾರಿ ನೌಕರರಿಗಂತೂ ಯಾರ ಮಾತನ್ನು ಕೇಳಬೇಕು, ಯಾರ ಮಾತನ್ನು ಕೇಳಬಾರದು, ಮುಂದೆ ಹೇಗೆ ಕೆಲಸ ಮಾಡುವಂಥದ್ದು ಈ ರೀತಿ ಗೊಂದಲದಲ್ಲಿ ಸಿಕ್ಕಿರುವಂಥ ಈ ಸಂದರ್ಭದಲ್ಲಿ ನಾನು ಹಣಕಾಸು ಸಚಿವರಲ್ಲಿ ನೀವು ಇರುವಷ್ಟು ದಿವಸ ಒಂದೇ ಒಂದು ವಿನಂತಿಯನ್ನು ಮಾಡುತ್ತೇನೆ. ಕೊನೆಯ ಪಕ್ಷ ಹಿಂದೆ ನಮ್ಮೆಲ್ಲಾ ಶಾಸಕರಿಗೆ ಪ್ರಾದೇಶಿಕ ಅಭಿವೃದ್ಧಿಗೆ ಎಂದು 40 ಲಕ್ಷ ರೂ. ಗಳನ್ನು ಕೊಟ್ಟಿದ್ದರು, ನಾವು ಕೊನೆಯ ಪಕ್ಷ ಆರು ತಿಂಗಳು ಇಲ್ಲವೇ ಒಂದು ವರ್ಷ ಇರುತ್ತೇವ್ವೋ ಅದು ನಿಮ್ಮ ಮೇಲೆ ಡಿಪೆಂಡ್ ಆಗಿದೆ ನಾವು ಐದು ವರ್ಷ ಕುಳಿತುಕೊಳ್ಳಲು ರೆಡಿ ಇದ್ದೇವೆ. ಇದರ ಅರ್ಥ ಬಹಳ ಸ್ಪಷ್ಟವಾಗಿ ಈ ನಾಡಿನ ಜನತೆಗೆ ಇಲ್ಲಿಂದ ಸಂದೇಶ ಹೋಗಬೇಕು, ಜನರ ಆದೇಶದಂತೆ ಐದು ವರ್ಷ ಕಾಲ ವಿರೋಧ ಪಕ್ಷದಲ್ಲಿ ಪ್ರಾಮಾಣಿಕವಾಗಿ ಕುಳಿತು ನಮ್ಮ ಕೆಲಸವನ್ನು ಮಾಡಲು ನಾವು ಸಿದ್ಧರಿದ್ದೇವೆ, ಆದರೆ ತಾವು ಐದು ವರ್ಷ ಬಡಿದಾಡದೆ ಕಚ್ಚಾಡದೆ ರಾಜ್ಯದ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇವೆಂದು ಸಂಕಲ್ಪ ಮಾಡಿದರೆ ಅದಕ್ಕಿಂತ ದೊಡ್ಡ ಉಪಕಾರವಿಲ್ಲ. ಆದರೆ ಅದನ್ನು ಮಾಡುತ್ತೀರಿ ಎನ್ನುವಂಥ ವಿಶ್ವಾಸ ಕಾಣುತ್ತಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ನಾನು ಒಂದೇ ಒಂದನ್ನು ಹೇಳುತ್ತೇನೆ, ನೀವು ಹೊಡೆದಾಡುವ ಒಂದು ವಿಷಯವನ್ನು ಮಾತ್ರ ಹೇಳಿಬಿಟ್ಟಿರಿ, ಗಂಡ–ಹೆಂಡಿರೆ ಜಗಳವಾಡುತ್ತಾರೆ, ಆದರೆ ರಾತ್ರಿ ಮಲಗುವಾಗ ಒಂದಾಗುತ್ತಾರೆ, ಆದ್ದರಿಂದ ನಾವು ಎಷ್ಟೇ ಜಗಳವಾಡಿದರೂ ರಾತ್ರಿ ಒಂದಾಗುತ್ತೇವೆ, ತಾವು ಭಯ ಪಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಳ್ಳೆಯದಾಯಿತು. ನಾನು ಏನು ಹೇಳುತ್ತಿದ್ದೇನೆಂದರೆ, ಹಣಕಾಸು ಪರಿಸ್ಥಿತಿ ಹದಗೆಟ್ಟಿರುವ ಈ ಸಂದರ್ಭದಲ್ಲಿ ಈ ಭಾಗದಲ್ಲಿ ಕುಳಿತಿರುವಂಥ ಶಾಸಕರುಗಳು

ಮುಂದೆ ಬರುವಂಥ ದಿವಸಗಳಲ್ಲಿ ನಮ್ಮ ಪರಿಸ್ಥಿತಿಗಳು ಏನು ಎಂಬ ಬಗ್ಗೆ ಚಿಂತೆ ಮಾಡುತ್ತಿದ್ದೇವೆ. ಯಾವ ಪರಿಸ್ಥಿತಿ ಸ್ವಾಮಿ ನಮ್ಮದು? ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಕುಳಿತಿರುವಾಗ ಆ ಕಡೆ ಈ ಕಡೆಯ ಶಾಸಕರುಗಳು ಸಾಲಾಗಿ ನಿಂತಿರುವುದನ್ನು ನೋಡಿದೆ, ಏನು ಕೊಡುತ್ತಿದ್ದೀರ ಎಂದು ಕರೆದು ಕೇಳಿದೆ, ಪ್ರೈಮರಿ ಶಾಲೆಯ ಒಬ್ಬ ಶಿಕ್ಷಕರನ್ನು ಇಲ್ಲಿಂದ ಅಲ್ಲಿಗೆ ವರ್ಗಾವಣೆ ಮಾಡುವುದು, ಅಲ್ಲೆಲ್ಲೊ ಕೊಳವೆ ಬಾವಿಯಲ್ಲಿ ನೀರಿಲ್ಲ, ಕುಡಿಯುವ ನೀರಿಗೆ ತೊಂದರೆಯಾಗಿದೆ ಎಂದು ಕೇಳುವಂಥದ್ದು, ಅಂದರೆ ಎರಡೂ ಸಮಿಶ್ರ ಸರ್ಕಾರಕ್ಕೆ ಇಷ್ಟು ದಿನವಾದರೂ ಒಬ್ಬ ಕಾನೂನು ಸಚಿವರು, ಒಬ್ಬ ಗ್ರಾಮೀಣಾಭಿವೃದ್ಧಿ ಸಚಿವರು, ಒಬ್ಬ ಪ್ರಾಥಮಿಕ ಶಿಕ್ಷಣವನ್ನು ನೋಡಿಕೊಳ್ಳುವಂಥ ಸಚಿವರು, ಇಲ್ಲ ಇವತ್ತು ನೀವು ಇರಲಿಲ್ಲ. ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಒಳ್ಳೆಯ ಮಾತುಗಳನ್ನು ಹೇಳಿದರು. ನಮ್ಮ ಸದಸ್ಯರಿಗೆ ಉತ್ತರವನ್ನು ಕೊಡುವಂಥ ಕಾಲದಲ್ಲಿ, ಕಳೆದ ಆರು ತಿಂಗಳಿನಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳು ಚುನಾವಣೆ ಮತ್ತು ಬೇರೆ ಬೇರೆ ಕಾರಣಗಳು, ಅಧಿಕಾರಿಗಳ ನಿರ್ಲಕ್ಷ್ಯದಿಂದ ಸ್ಥಗಿತವಾಗಿದೆಯೆಂಬ ಮಾತನ್ನು ಅವರೆ ಹೇಳಿದರು, ನಾನು ಹೇಳಿದ್ದಲ್ಲ, ಅಂದರೆ ಆರು ತಿಂಗಳಿನಲ್ಲಿ ಈ ರಾಜ್ಯವೇನು ಅಭಿವೃದ್ಧಿಯನ್ನು ಕಾಣಲಿಲ್ಲ. ಬರುವಂಥ ಎಂಟು ತಿಂಗಳಿನಲ್ಲಿ ಅದನ್ನೂ ಕಾಂಪೆನ್‌ಸೇಟ್ ಮಾಡಿ ಕೆಲಸ ಮಾಡಲು ಬೇಕಾದಂಥ ಅವಕಾಶಗಳನ್ನು ನೀವು ಮಾಡಿಕೊಡುವುದಿಲ್ಲವೆನ್ನುವುದಾದರೆ ನಮ್ಮ ಶಾಸಕರು ಎಲ್ಲೋ ಹೋದಾಗ ಒಂದು ಬೋರ್‌ವೆಲ್, ಸಣ್ಣ ಪುಟ್ಟ ರಸ್ತೆ, ಹರಿಜನ ಕಾಲೋನಿಗೆ ಏನೋ ಒಂದು ಕಾರ್ಯಕ್ರಮ ಹೇಳಿದರೆ ತಕ್ಷಣ ಇರಿ 25 ಸಾವಿರ ರೂಪಾಯಿಗಳನ್ನು ಕೊಡುತ್ತೇನೆ, ಕೆಲಸ ಮಾಡಿ ಎಂದು ಹೇಳಲೂ ಕೈಯನ್ನು ಬಲಪಡಿಸದಿರುವ ಮಟ್ಟಕ್ಕೆ ನೀವು ಯೋಚನೆ ಮಾಡುತ್ತಿದ್ದೀರಿ ಎಂದರೆ, ಎಲ್ಲೋ ಒಂದು ಕಡೆ ನನಗೆ ಅನುಮಾನ ಏನೆಂದರೆ, ನೀವು ಒಳ್ಳೆಯವರು, ಶುದ್ಧವಾಗಿದ್ದೀರಿ, ಆದರೆ ನಿಮಗೆ ಏನಾಗಿದೆಯೆಂದರೆ ಆದಷ್ಟು ಬೇಗ ಚುನಾವಣೆಗೆ ಹೋಗಬೇಕು ಎಂಬ ತರಾತುರಿಯಲ್ಲಿ ಶಾಸಕರ ಕೈ ಬಲಪಡಿಸಿದರೆ, ಅವರಿಗೆ ಒಳ್ಳೆಯ ಹೆಸರು ಬಂದರೆ, ಹೇಗೋ ಏನೋ, ಏಕೆಂದರೆ ಇದೊಂದು ಅಪವಿತ್ರ ಮೈತ್ರಿ, ಜನಾದೇಶಕ್ಕೆ ವಿರುದ್ಧವಾಗಿರುವ ಮೈತ್ರಿ, ನಾವು ಅಧಿಕಾರಕ್ಕೆ ಬಂದರೆ, ನೆಲಗಳ್ಳರ ಬಗ್ಗೆ ಸ್ಪೆಶಲ್ ಕೋರ್ಟ್‌ನ್ನು ಮಾಡಿ ಅವರನ್ನು ಜೈಲಿಗೆಕಳಿಸುತ್ತೇವೆ ಎಂದು ಸಂಕಲ್ಪ ಮಾಡಿದಂಥ ಜೆ.ಡಿ.ಎಸ್. ನವರೇ, ಎಲ್ಲಿ ಹೋಯಿತು ನಿಮ್ಮ ಘೋಷಣೆ? ಈ ರಾಜ್ಯದ ಜನ ನೀವು ಕೊಟ್ಟಂಥ ಭರವಸೆಗಳನ್ನು ನಂಬಿಕೊಂಡು ಅಧಿಕಾರವನ್ನು ಕೊಟ್ಟರೆ ಈ ರೀತಿ ನೀವು ವರ್ತನೆ ಮಾಡಬಹುದು ಎನ್ನುವುದಾದರೆ ಕೊನೆಯ ಪಕ್ಷ ಯಾರೇ ಅಧಿಕಾರವನ್ನು ನಡೆಸಲಿ, ಅವರ್‍ಇರಬಹುದು, ಇವರು ಇರಬಹುದು, ಅದು ಬೇರೆ ವಿಷಯ, is it not your duty? ಎಷ್ಟು ಸೀಟು ಯಾರ್‍ಯಾರಿಗೆ ಬಂದಿದೆ ಎಂಬ ಬಗ್ಗೆ ನಾನು ಚರ್ಚೆ ಮಾಡಲು ಹೋಗುವುದಿಲ್ಲ. ನಮಗೇನೂ ಬಹುಮತ ಬಂದಿಲ್ಲ. ಮ್ಯಾಂಡೇಟ್ ಸಿಕ್ಕಿಲ್ಲ ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳಬೇಕು, ಈ ಸಾರಿ ಮ್ಯಾಂಡೇಟ್ ಕಾಂಗ್ರೆಸ್‌ಗೂ ಇಲ್ಲ. ಜೆ.ಡಿ.ಎಸ್.ಗೂ ಇಲ್ಲ, ಜೆ.ಡಿ.ಯೂ ಗೂ ಇಲ್ಲ, ಬಿ.ಜೆ.ಪಿ. ಗೂ ಇಲ್ಲ, ನಾವು single largest ಪಕ್ಷವಾಗಿ ಹೊರಕ್ಕೆ ಬಂದಿದ್ದೇವೆ, ನಾವು ಪ್ರತಿಪಕ್ಷವಾಗಿ ಕುಳಿತುಕೊಂಡು ಐದು ವರ್ಷ ಕೆಲಸ ಮಾಡಲು ಸಿದ್ಧರಾಗಿದ್ದೇವೆ, ನಾನು ನಿಮ್ಮನ್ನು ಕೇಳುತ್ತಿಲ್ಲ ಮಾನ್ಯ ಸಿದ್ಧರಾಮಯ್ಯನವರೇ ತಾವೇ ಹೇಳಿದಿರಿ, ನನ್ನ ಜೀವನದಲ್ಲಿ ಮೊದಲ ಬಾರಿಗೆ ಮೊನ್ನೆ ರಾಜ್ಯಸಭಾ ಚುನಾವಣೆಯ ಸಮುಖದಲ್ಲಿ ನಾನು ಕಾಂಗ್ರೆಸ್‌ಗೆ ಓಟನ್ನು ಹಾಕಿದೆ ಎಂದು, ಕುರ್ಚಿಗಾಗಿ, ಅಧಿಕಾರಕ್ಕಾಗಿ,

ಎಲ್ಲಿಯವರೆಗೆ ನಾವು ತಯಾರಿದ್ದೆವು ಎಂದರೆ, ನಿಮ್ಮ ಸರ್ಕಾರವೇ ಅಲ್ಲಿ ಅಸ್ತಿತ್ವಕ್ಕೆ ಬಂದಿದ್ದರೆ, ಜೆ.ಡಿ.ಎಸ್.ನವರೇ ಮುಖ್ಯಮಂತ್ರಿಯಾಗಿದ್ದರೆ, ಕಾಂಗ್ರೆಸ್‌ನ ಹೊರ ಬೆಂಬಲವನ್ನು ಪಡೆದಿದ್ದರೆ, ನಾವು ಸಂತೋಷಪಡುತ್ತಿದ್ದೆವು. ಅದನ್ನು ಮಾಡುವುದರ ಬದಲಿಗೆ ಯಾವ ರಾಜ್ಯದ ಜನ ಈ ಕಾಂಗ್ರೆಸ್ ಪಕ್ಷದ ದುರಾಡಳಿತದಿಂದ ಬೇಸತ್ತು ತಿರಸ್ಕಾರ ಮಾಡಿದರೊ, ಯಾವ ನಾಡಿನ ಜನ 31 ಜನ ಸಚಿವರನ್ನು ಸೋಲಿಸಿ ಅವರು ಅಧಿಕಾರಕ್ಕೆ ಬರಬಾರದು ಎಂದು ಹೇಳಿದರೊ, ನಮ್ಮ ಕಾಂಗ್ರೆಸ್‌ನ ಸ್ನೇಹಿತರನ್ನು ಕೇಳುತ್ತೇನೆ, ಡೆಮಾಕ್ರಸಿಯಲ್ಲಿ ನಾಲ್ಕಾರು ವರ್ಷ ವಿರೋಧ ಪಕ್ಷದಲ್ಲಿ ಕುಳಿತರೆ ಅಪರಾಧವೇನು? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಇರುವಷ್ಟೇ ಮಹತ್ವ ಕೆಲಸ ಮಾಡಬೇಕೆಂದರೆ ವಿರೋಧ ಪಕ್ಷಕ್ಕೆ ಇಲ್ಲವೇನು? ಈ ವ್ಯವಸ್ಥೆಯಲ್ಲಿ ಈ ಎರಡೂ ಅತ್ಯಂತ ಪ್ರಮುಖ ಸ್ಥಾನ ಹೊಂದಿದೆ ತಾನೆ? ಆದರೆ ಜನ ತಿರಸ್ಕಾರ ಮಾಡಿದಂಥ ಒಂದು ರಾಜಕೀಯ ಪಕ್ಷ, ಕುರ್ಚಿಯ ಹುಚ್ಚು ಹಿಡಿದಿರುವಂಥ ಇನ್ನೊಂದು ಪಕ್ಷದ ಜೊತೆ ಸೇರಿಕೊಂಡು ಅವರು ನಮ್ಮ ಬಗ್ಗೆ ಏನು ಹೇಳಿದ್ದಾರೆ ಎಂಬ ಬಗ್ಗೆ ಚಿಂತನೆ ಮಾಡದೆ ಇವತ್ತು ಸಮ್ಮಿಶ್ರ ಸರ್ಕಾರವೆಂದು ಹೇಳಿಕೊಂಡು ನೀವು ಮುಂದೆ ಹೊರಟಿದ್ದೀರಲ್ಲಾ, ಒಂದು ಮಗುವಿಗೆ ಸೀರಿಯಸ್, ಆಸ್ಪತೆಗೆ ಕರೆದುಕೊಂಡು ಹೋಗುತ್ತೇವೆ, ಡಾಕ್ಟರ್ ನೋಡುತ್ತಾರೆ, ಇನ್‌ಟೆನ್‌ಸೀವ್ ಕೇರ್‌ನಲ್ಲಿದೆ, ಉಸಿರಾಟದ ತೊಂದರೆ ಇದೆಯೆಂದು ಡಾಕ್ಟರ್‌ರವರು ಹೇಳುತ್ತಾರೆ, ಬದುಕುತ್ತದೋ ಗ್ಯಾರೆಂಟಿ ಹೇಳಿ ಎಂದರೆ, ಇಲ್ಲ ನಾನು ಯಾವುದೇ ಗ್ಯಾರೆಂಟಿ ಕೊಡಲು ಆಗುವುದಿಲ್ಲ. ನಾಲ್ಕು ದಿವಸ ಕಾಯಿರಿ ನೋಡೋಣ. ಆ ಸ್ಥಿತಿ ಇವತ್ತು ಪ್ರಾರಂಭದಲ್ಲಿ ಒಂದು ರೀತಿ ಬಾಲಗ್ರಹ ನಿಮಗೆ ಹಿಡಿದು ಈ ರೀತಿ ವರ್ತನೆ ಮಾಡುತ್ತಿದ್ದೀರಲ್ಲಾ, ಬೇಕಾದ ಭಿನ್ನಾಭಿಪ್ರಾಯವಿರಬಹುದು, ನಾವು ಸಮ್ಮಿಶ್ರ ಸರ್ಕಾರವನ್ನು ವಿರೋಧ ಮಾಡುತ್ತಿಲ್ಲ, ಕೇಂದ್ರದಲ್ಲಿ ನಾವೂ ಮಾಡಿದ್ದೇವೆ, ಮುಂದೆ ಬರುವ ದಿವಸಗಳಲ್ಲಿ ನಾವು ಇದೇ ರೀತಿ ವರ್ತನೆ ಮಾಡಿದರೆ ಯಾವುದೇ ಪಕ್ಷಕ್ಕೆ ಬಹುಮತ ಬರದೆ ಯವ್ಯಾವುದೊ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಂಡು ಆಡಳಿತ ನಡೆಸತಕ್ಕ ಪರಿಸ್ಥಿತಿ ಬರಬಹುದು. ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳಲ್ಲಿ ಅದು ನಮ್ಮ ಕಾಂಗ್ರೆಸ್ ಸ್ನೇಹಿತರ ಕೊಡುಗೆ, ಅದರ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ. ಆದರೆ ಇವತ್ತು ನೀವೇಕೆ ಈ ಅಪರಾಧವನ್ನು ಮಾಡಿದಿರಿ ಎಂಬ ಬಗ್ಗೆ ಮಾತ್ರ ನನಗೆ ಇನ್ನು ಉತ್ತರ ಸಿಕ್ಕಿಲ್ಲ. ಬಹುಶಃ ಆ ಉತ್ತರವನ್ನು ನೀವು ಕೊಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ನಾನು ಎರಡು ಮಾತನ್ನು ಹೇಳುತ್ತೇನೆ. ಮೊದಲನೆಯದಾಗಿ, ನಿಜಕ್ಕೂ ನೀವು ಪ್ರಾಮಾಣಿಕರಿದ್ದರೆ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳ ನೆಲಗಳ್ಳತನದ ಹಗರಣ, ಬೆಂಗಳೂರಿನ ಸುತ್ತಮುತ್ತ ಆಗಿರುವ ಹಗರಣ. ನಾವು ಒಂದು ದೊಡ್ಡ ಪಟ್ಟಿಯನ್ನು ಕೊಡುತ್ತೇವೆ, ಇಲ್ಲಿರುವ ನಾವೆಲ್ಲರೂ ತೀರ್ಮಾನ ಮಾಡಿದ್ದೇವೆ, 6ನೇ ತಾರೀಖಿನವರೆಗೆ ವಿಧಾನ ಮಂಡಲದ ಅಧಿವೇಶನವನ್ನು ವಿಸ್ತರಣೆ ಮಾಡುತ್ತೇವೆಂದು ಮಾನ್ಯ ಅಧ್ಯಕ್ಷರು ಒಪ್ಪಿಕೊಂಡಿದ್ದಾರೆ, ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ, ಒಂದು ದಿನ ಪೂರ್ಣ ಹಣಕಾಸಿನ ಸಚಿವರು ನಾವು ಚರ್ಚೆ ಮಾಡೋಣ. ಎಳೆಎಳೆಯಾಗಿ, ಅಂಕಿಅಂಶದೊಂದಿಗೆ ನಾವು ನಿಮಗೆ ಕೊಡುತ್ತೇವೆ. ಆ ವಿವರವನ್ನು ನೋಡಿದಾಗ ನಾವು ಇಂಥವರ ಜೊತೆಗೆ ಆಡಳಿತ ಮಾಡುತ್ತಿದ್ದೇವೆಯೇ ಎಂದು ಗಾಬರಿಯಾಗುವ ಪರಿಸ್ಥಿತಿ ನಿಮಗೆ ಬರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಸ್ಥಿತಿ ಏನು? ಮಳೆ ಬಂತು ಸಂತೋಷ ಪಟ್ಟಿದ್ದೇವೆ, ವರುಣ ದೇವನ ಕೃಪೆಯಿಂದ, ತಮ್ಮಲ್ಲಿದ್ದ ಸರ್ವಸ್ವವನ್ನು ಸಾಲ ಸೋಲ ಮಾಡಿ ಬಿತ್ತನೆ ಮಾಡಿ ಗೊಬ್ಬರ

ಹಾಕಿ ಏನು ಮಾಡಬಹುದೋ ಆ ಎಲ್ಲಾ ಶ್ರಮವನ್ನು ಹಾಕಿದ್ದಾನೆ, ಮೂರು ವರ್ಷದ ಬರಗಾಲ, ಇವತ್ತು ಈ ರಾಜ್ಯದಲ್ಲಿ 84 ತಾಲ್ಲೂಕಿನಲ್ಲಿ ಸಾಮಾನ್ಯವಾದುದ್ದಕ್ಕಿಂತ ಕಡಿಮೆ ಮಳೆಯಾಗಿದೆ. 26 ತಾಲ್ಲೂಕುಗಳಲ್ಲಿ ಶೇಕಡ 20 ರಷ್ಟು ಕೊರತೆ ಇದೆ. 55 ತಾಲ್ಲೂಕುಗಳಲ್ಲಿ ಶೇಕಡ 60ಕ್ಕಿಂತ ಕಡಿಮೆ ಮಳೆಯಾಗಿದೆ. ಅನೇಕ ಜಿಲ್ಲೆಗಳಲ್ಲಿ ಸರಾಸರಿಗಿಂತ ಮಳೆ ಕಡಿಮೆಯಾಗಿದೆ. ಕಳೆದ ಮೂರ್ನಾಕು ವಾರದಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಹನಿ ಕೂಡ ಮಳೆಯಾಗಿಲ್ಲ. ನೀರಾವರಿ ಇರುವಂತಹ ರೈತ ಹೇಗೆ ಬದುಕುತ್ತಾನೋ ಗೊತ್ತಿಲ್ಲ ಸ್ವಾಮಿ. ನೀವು ಅಂಕಿ ಅಂಶ ತರಿಸಿ. ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೂ ಸಹ ಸುಮಾರು 17-18 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾವೇರಿ ಜಿಲ್ಲೆಗೆ ನಾನೇ ಹೋಗಿ ಕೆಲವು ಕುಟುಂಬಗಳನ್ನು ನೋಡಿದಾಗ, ಈ ಸ್ಥಿತಿ ಇವತ್ತು ಯಾವ ರೈತ ಸಮುದಾಯಕ್ಕೂ ಕೂಡ ಬರಬಾರದು ಎಂದು ನಾನು ಅಂದುಕೊಂಡು ಕಣ್ಣೀರಿಟ್ಟು ಬಂದಿದ್ದೇನೆ. ಮಳೆಯಾಶ್ರಯ ಮತ್ತು ಕೆರೆಯಾಶ್ರಯದಲ್ಲಿ ಇರುವಂತಹ ರೈತನ ಪರಿಸ್ಥಿತಿ ನೋಡಿದರೆ, ಅವನು ಹೇಗೆ ಬದುಕಿದ್ದಾನೆ ಎನ್ನುವಂಥಾದ್ದೇ ಇವತ್ತು ಯಕ್ಷ ಪ್ರಶ್ನೆಯಾಗಿದೆ. ಸನ್ಮಾನ್ಯ ದೇವೇಗೌಡರ ಬಗ್ಗೆ ನನಗೆ ತುಂಬಾ ಗೌರವ ಇದೆ. ಅವರು ರೈತರ ಬಗ್ಗೆ ಹೋರಾಟ ಮಾಡಿಕೊಂಡು ಬಂದಂತಹವರಾಗಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಮಾನ್ಯ ದೇವೇಗೌಡರು ಬಹಳ ಆಕ್ರೋಶದಿಂದ ಮಾತನಾಡುತ್ತಿದ್ದರು. ಏಕೋ ಏನೋ ನಾನೂ ಅದೇ ಟೈಮ್‌ನಲ್ಲಿ ಟಿ.ವಿ. ಹಾಕ್ಕೊಂಡು ಕುಳಿತಿದ್ದೆ. ಒಬ್ಬ ಮಾಜಿ ಪ್ರಧಾನಿಯವರು ರೈತರ ಬಗ್ಗೆ ತೋರಿಸಿದಂತಹ ಕಳಕಳಿ ಮೆಚ್ಚುವಂತಾದ್ದು. ಬಹುಶಃ ನಮ್ಮೆಲ್ಲರಿಗಿಂತ ಜಾಸ್ತಿ ಕಳಕಳಿ ಅವರಿಗೆ ಇದೆ. ಆದರೆ ಮಾನ್ಯ ದೇವೇಗೌಡರ ಇನ್ನೊಂದು ಬಲಗೈ ಎಂದು ಕರೆಸಿಕೊಳ್ಳುವಂತಹ ನಮ್ಮ ಹಣಕಾಸಿನ ಸಚಿವರಾದ ಮಾನ್ಯ ಸಿದ್ಧರಾಮಯ್ಯನವರನ್ನು ನಾನು ಕೇಳುತ್ತೇನೆ, ಯಾವ ಕೇಂದ್ರದಲ್ಲಿ ಈ ದೇಶದ ರೈತನ ಪರಿಸ್ಥಿತಿ ಹದಗೆಟ್ಟಿದೆ, ರೈತನ ಸಾಲ ಮನ್ನಾ ಆಗಬೇಕು ಎಂಬ ವಾದ ಮಂಡನೆ ಆಗುತ್ತಿದೆಯೋ, ನಿಮ್ಮ ನಾಯಕರು ಹೋರಾಟ ಮಾಡುತ್ತಿದ್ದಾರೋ, ಕಳೆದ ಮೂರು ವರ್ಷಗಳಿಂದ ಸತತ ಬರಗಾಲ ಇರತಕ್ಕಂಥ ಈ ನಾಡಿನ ಜನಕ್ಕೆ ಮತ್ತೊಂದು ಬರಗಾಲ ಸಮೀಪಿಸುತ್ತಿರುವಂತಹ ಈ ಸಂದರ್ಭದಲ್ಲಿ, ರಾಜ್ಯದ ಬೇರೆ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗೊತ್ತುತ್ತೇನೆ ಯಡಿಯೂರಪ್ಪನವರೇ, ಒಂದು ಸಾರಿ ರೈತ ಮಾಡಿರುವಂತಹ ಎಲ್ಲಾ ಸಾಲವನ್ನು ಸಂಪೂರ್ಣವಾಗಿ ನಾನು ಮನ್ನಾ ಮಾಡಿ, ಮತ್ತೊಮ್ಮೆ ಅವರು ಈ ಭೂಮಿ ತಾಯಿಯ ಸೇವೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ ಎಂದು ನೀವು ಹೇಳಿದ್ದರೆ, ಮಾನ್ಯ ಸಿದ್ಧರಾಮಯ್ಯನವರೇ, ನಾವು ನಿಮ್ಮ ಬೆನ್ನು ತಟ್ಟುತ್ತಿದ್ದೆವು. ನಿಮಗೆ ಬೆಂಬಲವನ್ನು ಯಾರು ಕೊಡದಿದ್ದರೂ ಸಹ, 'ನಿಮ್ಮ ಜೊತೆಗೆ ನಾವಿದ್ದೇವೆ' ಎಂದು ಬೇಕಾದರೆ ನಿಮ್ಮ ಬೆಂಬಲಕ್ಕೆ ನಿಲ್ಲುತ್ತಿದ್ದೆವು. ಆ ಕೆಲಸವನ್ನು ನೀವು ಏಕೆ ಮಾಡಲಿಲ್ಲ? ನಿಮಗೆ ಯಾರ [illegible] ಇತ್ತು? ಅದನ್ನೇ ತಾನೇ ತಾವು ಹೇಳಿದ್ದು, ನಾನು ಬರುತ್ತೇನೆ, ಉದ್ದಕ್ಕೂ ರೈತರ ಬಗ್ಗೆ ನೀವು [illegible]ಲಾಪ ಮಾಡಿದ್ದೀರಿ, ಉಳಿತಾಯ ಬಜೆಟ್ ಎಂದು ಹೇಳಿದ್ದೀರಿ, ನಮ್ಮ ಮೀಡಿಯಾ ಸ್ನೇಹಿತರು ಈ ಬಜೆಟ್ ಮಂಡನೆಯಾದ ಮೇಲೆ ಬರೆದಿರುವಂತಹ ವರದಿಗಳನ್ನು ನೋಡಿದಾಗ, ರಾಜ್ಯದ ರೈತರು 'ಇನ್ನು ಮುಗಿಯಿತಪ್ಪ, ನಾವು ಈ ಸಂಕೋಲೆಯಿಂದ ತಪ್ಪಿಸಿಕೊಂಡೆವು, ನಾವಿನ್ನು ಆನಂದವಾಗಿ ಸಮೃದ್ಧಿಯಿಂದ ಇರಬಹುದು, ನಮ್ಮ ಸಿದ್ಧರಾಮಯ್ಯನವರು ನಮ್ಮ ಒಂದು ಕೈಯನ್ನು ಹಿಡಿದುಕೊಂಡಿದ್ದಾರೆ, ನಮ್ಮ ಮುಖ್ಯಮಂತ್ರಿಗಳು ನಮ್ಮ ಇನ್ನೊಂದು ಕೈ ಹಿಡಿದುಕೊಳ್ಳುತ್ತಾರೆ, ನಮಗೆ ಇನ್ನೇನು ತೊಂದರೆ ಇಲ್ಲ' ಎಂಬ ಭಾವನೆ

ಮೂಡಿದಂತಹ ಸಂದರ್ಭದಲ್ಲಿ, ಬಜೆಟನ್ನು ಸರಿಯಾಗಿ ಓದಿ ಪರಿಶೀಲನೆ ಮಾಡುವಂತಹ ಪ್ರಯತ್ನ ಮಾಡಿದರೆ, ಬಹುಶಃ ಈ ರೈತ ಸಮೂಹಕ್ಕೆ ಒಂದು ರೀತಿಯ ಅನ್ಯಾಯವಾಗಲಿಲ್ಲವೇ ಎಂದು ಮನದಟ್ಟಾಗುತ್ತದೆ. ಹಣಕಾಸಿನ ಸಚಿವರೇ, ಈ ರಾಜ್ಯದ ರೈತನ ಮಕ್ಕಳ ಬಗ್ಗೆ ನಾನು ಚಿಂತನೆ ಮಾಡುತ್ತಿದ್ದೇನೆ. ಡಬ್ಬಲ್ ಡಿಗ್ರಿ ಮಾಡಿರುವಂತಹ ನಿರುದ್ಯೋಗಿಗಳು ಶಾಸಕರ ಮನೆ ಬಾಗಿಲಿಗೆ ಬಂದು, ಏನಾದರೂ ಒಂದು ಉದ್ಯೋಗ ಕೊಡಿಸಿ, ಹಳ್ಳಿಯಲ್ಲಿರುವ ನಮ್ಮ ಕುಟುಂಬದಲ್ಲಿ 4–5 ಜನ ಮಕ್ಕಳಿದ್ದೇವೆ, ನಮ್ಮ ಮನೆಯ ಕುಟುಂಬವನ್ನು ನಡೆಸುವುದಕ್ಕಾಗುತ್ತಿಲ್ಲ ಎಂದು ಕೇಳುತ್ತಿದ್ದಾರೆ. ಒಬ್ಬ ಡಬ್ಬಲ್ ಡಿಗ್ರಿಯವರಿಗೆ ಈ ಸ್ಥಿತಿಯಾದರೆ ಹೇಗೆ? ಅವರಿಗೆ ನೀವು ಏನು ಹೇಳಿದ್ರಿ? 18 ರಿಂದ 28 ವರ್ಷ ವಯಸ್ಸಿನ ನಿರುದ್ಯೋಗಿ ಯುವಕರಿಗೆ 500 ರೂಪಾಯಿಗಳ ಭತ್ಯೆ ಕೊಡುತ್ತೇವೆ ಎಂದು ಹೇಳಿದ್ದಿರಿ, ಜೂನ್ ಮೊದಲನೇ ವಾರದ ಮೊದಲನೇ ಕ್ಯಾಬಿನೆಟ್‌ನಲ್ಲಿ ಈ ತೀರ್ಮಾನವನ್ನು ತೆಗೆದುಕೊಂಡು, ಅದನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದಿರಿ. ಈ ರಾಜ್ಯದ ನಿರುದ್ಯೋಗಿ ಯುವಕರು ಚುನಾವಣೆಗೆ ಮಾನ್ಯ, ಕೇರಿ–ಕೇರಿ, ಹಳ್ಳಿ–ಹಳ್ಳಿಗೆ ಹೋಗಿ, ಆಡಳಿತ ಪಕ್ಷದಲ್ಲಿ ಇದ್ದಂತಹವರು ಈ ಮಾತನ್ನು ಹೇಳಿದಾಗ ನಂಬದೇ ಇರುವುದಕ್ಕೆ ಆಗುತ್ತದೆಯೇ? ಅವರು ನಂಬಿದರು, ನಂಬಿ ತಮಗೆ ಓಟು ಕೊಟ್ಟರು, ಆದರೆ ಇವತ್ತು ಬೇಕಾದ್ದು ಆಗಲಿ, ಒಂದು ಸಾರಿ ಆಡಳಿತ ನಡೆಸಿದಂತಹ ಒಂದು ಪಕ್ಷ ಈ ರೀತಿ ನಾಡಿನ ಜನತೆಗೆ ಭರವಸೆಯನ್ನು ಕೊಟ್ಟ ಮೇಲೆ, ಅದನ್ನು ಈಡೇರಿಸಬೇಕು ಎಂದು ನಿಮಗೆ ಅನ್ನಿಸಲಿಲ್ಲವೇ? ಇದು ಬಹಳ ಸ್ಪಷ್ಟವಾಗಿದೆ. ನಮ್ಮ ಮೊದಲನೇ ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳುವ ಮೊದಲನೇ ತೀರ್ಮಾನ, ಈ ರಾಜ್ಯದ 5 ಲಕ್ಷ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಗುವವರೆಗೆ 500 ರೂಪಾಯಿಗಳ ಭತ್ಯೆ ಕೊಡುತ್ತೇವೆ, ಭಿಕ್ಷೆ ಅಲ್ಲ ಅದು, ಅವನ ಕೈಗೆ ಕೆಲಸ ಕೊಡುವಂತಹ ಯೋಗ್ಯತೆ ನಮಗೆ ಇಲ್ಲ, ಕೊನೆಯ ಪಕ್ಷ ನಿಮ್ಮ ಅಪ್ಪ ಅಮ್ಮಂದಿರಿಗೆ ನೀವು ಭಾರವಾಗಬೇಡಪ್ಪ ಯಾವುದೋ ಒಂದು ಇಂಟರ್‌ವ್ಯೂ ಬಂದಾಗ, ಬೆಂಗಳೂರಿಗೆ ಬರುವುದಕ್ಕೋ ಅಥವಾ ಇನ್ನೆಲ್ಲಿಗೆ ಬರುವುದಕ್ಕೋ ನೂರೋ, ಇನ್ನೂರೋ, ಖರ್ಚಾದರೆ, ಅದನ್ನು ನಾವು ಭರಿಸುತ್ತೇವಪ್ಪ, ಎನ್ನುವ ಈ ಮಾತನ್ನು ನೀವು ಹೇಳಿ, ಭರವಸೆ ಕೊಟ್ಟು, ಅಧಿಕಾರಕ್ಕೆ ಬಂದು, ಇವತ್ತು ಅದರ ಬಗ್ಗೆ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಏನೂ ಮಾತನಾಡುತ್ತಿಲ್ಲ ಎನ್ನುವುದಾದರೆ, ಇದು ಈ ನಾಡಿನ ಜನತೆಗೆ ಮಾಡುತ್ತಿರುವಂತಹ ದ್ರೋಹವಲ್ಲವೇ? ವಂಚನೆ ಅಲ್ಲವೇ? ನಾನು ನಿಮಗೊಂದು ಮಾತು ಹೇಳುತ್ತೇನೆ. ಈ ಅಧಿವೇಶನ ಮುಗಿದ ಮೇಲೆ ಎರಡು ಪ್ರಮುಖ ವಿಷಯಗಳು, ಒಂದು ನಿರುದ್ಯೋಗಿ ಯುವಕರಿಗೆ 500 ರೂಪಾಯಿಗಳ ಭತ್ಯೆ ಕೊಡುವುದನ್ನು ಘೋಷಣೆ ಮಾಡಬೇಕು ಎನ್ನುವಂಥಾದ್ದು, ಎರಡನೆಯದು, ಸುಮಾರು 2 ಸಾವಿರ ಕೋಟಿ ರೂಪಾಯಿಗಳಿಗೂ ಮೀರಿರುವಂತಹ ಭೂ ಹಗರಣ ಮಾಡಿರುವಂತಹ, ಯಾವನೇ ಇರಲಿ, ಅವನು ಯಾವುದೇ ಪಕ್ಷದವನಾಗಿರಲಿ, ಇವತ್ತು ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ, ಅದಕ್ಕೆ ಸ್ಪೆಷಲ್ ಕೋರ್ಟ್ ಮಾಡಿ ತನಿಖೆ ಮಾಡಿಸಿ ಜೈಲಿಗೆ ಕಳುಹಿಸುತ್ತೇವೆ ಎಂದು ನೀವು ಹೇಳಿದ್ರಲ್ಲಾ, ನೀವು ಈ ಭರವಸೆಯನ್ನು ಈಡೇರಿಸದೇ ಇದ್ದರೆ, ಬಹುಶಃ ರಾಜ್ಯದ ಉದ್ದಗಲಕ್ಕೆ ನಿಮ್ಮನ್ನು ಹರಾಜು ಹಾಕುವುದಕ್ಕೋಸ್ಕರ, ಕರ್ನಾಟಕ ರಾಜ್ಯದ 224 ಕ್ಷೇತ್ರಕ್ಕೆ ಸಿದ್ದರಾಮಯ್ಯನಂತಹವರು, ಸನ್ಮಾನ್ಯ

ದೇವೇಗೌಡರಂತಹವರು, ಒಂದು ಕ್ಷಣ ಈ ಕೆಲಸ ಮಾಡಲಿಕ್ಕೆ ಆಗದಿದ್ದರೆ ಅಧಿಕಾರದಲ್ಲಿ ಮುಂದುವರೆಯಬಾರದು, ಅಗತ್ಯ ಬಂದರೆ ಅದೇನಾಗುತ್ತದೋ ನೋಡೋಣ. ಆದರೆ ಹೋರಾಟ ಮಾಡದಿದ್ದರೆ ಪ್ರತಿಪಕ್ಷದಲ್ಲಿ ಕುಳಿತುಕೊಂಡು ಈ ರಾಜ್ಯದ ಐದೂವರೆ ಕೋಟಿ ಜನತೆಗೆ ನಾವು ದ್ರೋಹ ಮಾಡಿದಂತಾಗುತ್ತದೆ. ಇದಕ್ಕೆ ಮಾನಸಿಕವಾಗಿ ನೀವು ತಯಾರಾಗಿರಿ, ನಮ್ಮ ಆಡಳಿತ ಪಕ್ಷದ ಕೆಲವು ಸ್ನೇಹಿತರು ನಮ್ಮ ಜೊತೆಗೆ ಬರುವವರಿದ್ದಾರೆ, ಯಾವುದೋ ಕಾರಣಕ್ಕಾಗಿ ಅವರು ಇವತ್ತು ಅಲ್ಲಿ ಕುಳಿತಿರಬಹುದು, ಎಲ್ಲರನ್ನೂ ಕರೆದುಕೊಂಡು ಒಂದು ಹೋರಾಟಕ್ಕೆ ನಾವು ಧುಮುಕುವಂತಾದ್ದು ನಮ್ಮ ಆದ್ಯ ಕರ್ತವ್ಯವೆಂದು ತಾವು ತಿಳಿದುಕೊಂಡಿದ್ದೇವೆ. ಆಗದಿರುವಂತಹ ವಿಷಯಗಳಿಗೆ ನಾವು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಆಗದಿರುವಂತಹದ್ದನ್ನು ನೀವು ಮಾಡಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ......

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಹೇಳುತ್ತಿರುವುದರ ಅರ್ಥವೇನು? ನೀವು ಅವರನ್ನು ಬಿಟ್ಟು ನಮ್ಮ ಸಪೋರ್ಟ್ ತೆಗೆದುಕೊಂಡು ಮುಖ್ಯಮಂತ್ರಿ ಆಗಿ ಎಂದೋ ಅಥವಾ ಇನ್ನೇನು?

ಶ್ರೀ ಬಿ.ಎಸ್. ಯಡಿಯೂರಪ್ಪ : ಅದೃಷ್ಟ ಇದ್ದರೆ ಏಕೆ ಆಗಬಾರದು? ಯಾರು ಮುಖ್ಯಮಂತ್ರಿ ......

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಒಂದೇ ಒಂದು ನಿಮಿಷ ಯೀಲ್ಡ್ ಆಗುವುದಾದರೆ, ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇಡಿ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಸ್ವಲ್ಪ ಯೀಲ್ಡ್ ಆಗಿ, ಚರ್ಚೆ ಎರಡೂ ಕಡೆಯ ಪರವಾಗಿ ಆಗುತ್ತಿರಬೇಕು. ಒಂದೇ ಕಡೆ ಆದರೆ ಅಷ್ಟೊಂದು ಚೆನ್ನಾಗಿರುವುದಿಲ್ಲ. ಅದು ನಿಜ, ನಾವು ನಮ್ಮ ಮ್ಯಾನಿಫೆಸ್ಟೋದಲ್ಲಿ ಆ ರೀತಿ ಹೇಳಿದ್ದೇವೆ. ಸ್ವಾಮಿ, ನೀವು ಮೊದಲಿಗೆ ಕೇಂದ್ರದಲ್ಲಿ ಎನ್.ಡಿ.ಎ. ಸರ್ಕಾರ ಮಾಡಿದಾಗ, ರಾಮಮಂದಿರ ಕಟ್ಟುತ್ತೇವೆ ಎಂದು ಹೇಳಿ ಭರವಸೆ ಕೊಟ್ಟಿದ್ರಲ್ಲಾ, ನೀವು ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದಿರಿ? ಅದನ್ನು ನೀವು ಹೇಳಿ. ನೀವು ಗಾಜಿನ ಮನೆಯಲ್ಲಿ ಇದ್ದುಕೊಂಡು ಇನ್ನೊಂದು ಮನೆಗೆ ಕಲ್ಲು ಹೊಡೆಯುವುದಕ್ಕೆ ಹೋದರೆ ಇದ್ಯಾವ ನ್ಯಾಯ?

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ಅವರು ಯಾವ ಪಕ್ಷದಿಂದ ಮಾತನಾಡುತ್ತಿದ್ದಾರೆ?

(ಗೊಂದಲ)

ಶ್ರೀ ಸಿ.ಟಿ. ರವಿ : 500 ರೂಪಾಯಿಗಳ ಭತ್ಯೆ ಕೊಡುವುದಕ್ಕೆ ನಾವ್ಯಾರೂ ಅಡ್ಡಿಯಲ್ಲ. ರಾಮಮಂದಿರ ಕಟ್ಟುವುದಕ್ಕೆ ನಾವೂ ಕೂಡ ಅಡ್ಡಿಯಲ್ಲ ಎಂದು ನೀವು ಹೇಳಿಬಿಡಿ. ನಾವು ನಾಳೆಯೇ ಹೋಗಿ ಕಟ್ಟೋಣ ಬಿಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : .... ನೀವು ಮಾತನಾಡಬೇಕಾದರೆ ಮಾತನಾಡಿ. ಯಾರು ಬೇಡವೆನ್ನುತ್ತಾರೆ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಒಂದು ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆ ಎಂದು ನೀವು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಹೇಳಿದ್ದಿರಿ. ಆದರೆ ನಂತರ ನೀವು ಆ ಬಗ್ಗೆ ಏನು ಮಾಡಿದ್ರಿ?

(ಗೊಂದಲ)

ಮಾನ್ಯ ಸದಸ್ಯರು : ಮಾನ್ಯ ವಿರೋಧ ಪಕ್ಷದ ನಾಯಕರು ದಯವಿಟ್ಟು ಇದಕ್ಕೆ ಉತ್ತರ ಹೇಳಬೇಕು. ಒಂದು ಕೋಟಿ ಉದ್ಯೋಗಗಳನ್ನು ನಾವು ಸೃಷ್ಟಿಸುತ್ತೇವೆ ಎಂದು ಹೇಳಿ, ನೀವು ಒಂದು ಉದ್ಯೋಗವನ್ನೂ ಕೂಡ ಸೃಷ್ಟಿ ಮಾಡಲಿಲ್ಲ. ಕೇಂದ್ರ ಸರ್ಕಾರದಲ್ಲಿ ನೀವು ಆಡಳಿತ ಮಾಡಿದಾಗ ಇರುವ ಕಾರ್ಖಾನೆಗಳನ್ನೂ ಕೂಡ ಸಂಪೂರ್ಣವಾಗಿ ಮುಚ್ಚಿದಿರಿ.....

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ದಯಮಾಡಿ ತಾವು ಕುಳಿತುಕೊಂಡು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಕಾಂಗ್ರೆಸ್ಸಿನ ಹೊಸಬರಿಗೆ ಮತ್ತು ಗೊತ್ತಿದ್ದೂ ಗೊತ್ತಿಲ್ಲದಂತೆ, ಕಣ್ಣಿದ್ದೂ ಕಣ್ಣು ಕಾಣದವರಂತೆ ಮಾತನಾಡುವವರಿಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾವು ಬದುಕಿರುವವರೆಗೆ ನಮ್ಮ ಉದ್ದೇಶ, ಯಾವ ಕಾರಣಕ್ಕೂ ಈ ದೇಶದ ಬಹುಸಂಖ್ಯಾತ ಹಿಂದೂಗಳಿಗೆ ಕೊಟ್ಟಿರುವ ಭರವಸೆಯಿಂದ ನಾವು ಹಿಂದೆ ಸರಿಯುವುದಿಲ್ಲ.

3.40 ಪಿಎಂ

ಅದರ ಅರ್ಥ, ನಮ್ಮ ಕಾಂಗ್ರೆಸ್‌ನ ಸ್ನೇಹಿತರಿಗೆ ಹೇಳುತ್ತೇನೆ, ಪ್ರಭು ಶ್ರೀರಾಮಚಂದ್ರನ ಜನ್ಮ ಸ್ಥಾನ ಆಯೋಧ್ಯೆಯಲ್ಲಿ ರಾಮ ಮಂದಿರದ ಪೂಜೆ ನಿಂತಾಗ ರಾಜೀವ್ ಗಾಂಧಿಯವರು ಪ್ರಧಾನಿಯಾಗಿದ್ದಾಗ ಕೋರ್ಟಿನ ಆದೇಶದ ಮೇರೆಗೆ ಮುಜರಾಯಿ ಇಲಾಖೆಯಿಂದ ಆ ಪೂಜಾರಿಯನ್ನು ನೇಮಕ ಮಾಡಿದ್ದರು ಎಂಬುದು ನಿಮಗೆ ಗೊತ್ತಿದ್ದರೆ ಸಾಕು. ಅಲ್ಲಿ ಕಟ್ಟ ಕಟ್ಟಬೇಕೆಂದು ಹೇಳಿದಾಗ ಶಿಲಾನ್ಯಾಸ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದರು ಎಂಬುದನ್ನು ತಾವು ಮರೆಯಬಾರಧು. ಮೂರನೆಯದು ಇಲ್ಲಿ ಹೇಗೆ ನಮ್ಮ ಸಿದ್ದರಾಮಯ್ಯನವರ ಕೈ ಕಟ್ಟಿದೆಯೋ ಹಾಗೆ ಅಲ್ಲಿಯೂ ಸಹ ಎನ್.ಡಿ.ಎ. ಸರ್ಕಾರ ಇದ್ದುದ್ದರಿಂದ.....

ಮಾನ್ಯ ಸದಸ್ಯರು : ಸಿದ್ದರಾಮಯ್ಯನವರ ನಾಯಕತ್ವದಲ್ಲಿ ಹಾಗೂ ಮಾನ್ಯ ಧರ್ಮ ಸಿಂಗ್‌ರವರ ನಾಯಕತ್ವದಲ್ಲಿ ಮಳೆ ಬಂದು ಸುಭದ್ರವಾಗಿದೆ. ಕೈ ಏನೂ ಕಟ್ಟಿಲ್ಲ. easy ಆಗಿ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಸ್ನೇಹಿತರು ನೀವೆಲ್ಲಾ ಹೀಗೆ ಮಾಡಿದರೆ ಹೇಗೆ?

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ, ನನ್ನ ಮುಂದೆ ಕೂತು ಕೊಂಡಿದ್ದಾರೆ. ಪಾಪ ಕೈ ಕಟ್ಟಿಲ್ಲ, ಕೈ ಕಟ್ಟಿದ್ದಾರೆ, ಕೈ ಕಟ್ಟಿದ್ದಾರೆ ಎಂದು ಸುಳ್ಳು ತಾನೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಕಸ್ಮಾತ್ ಸಿದ್ದರಾಮಯ್ಯನವರ ಮನಸ್ಸಿನಲ್ಲಿ ಈ ರಾಜ್ಯದ ರೈತರು ಸಾಲ ಮನ್ನಾ ಮಾಡಬೇಕೆಂದು ಇದ್ದರೂ ಸಹ, ರೈತರ ಮಗನಾಗಿ ಇವರು ಆ ಕೆಲಸ ಮಾಡುವುದಕ್ಕಾಗದೆ ಕೈ ಕಟ್ಟುವ ಒಂದು ಪರಿಸ್ಥಿತಿ ಬಂದಿದೆ ಹಾಗೆಯೇ ನಾವು ಕೇಂದ್ರದಲ್ಲಿದ್ದಾಗ ನಮ್ಮ ಎನ್‌ಡಿಎ ಮತ್ತು ನಮ್ಮ ಮಿತ್ರ ಪಕ್ಷಗಳೆಲ್ಲಾ ಇದ್ದವರಿಗೆ ದೇಶದ ಜ್ವಲಂತ ಸಮಸ್ಯೆಗಳ ಬಗ್ಗೆ

ಅವರು ನಮ್ಮ ಜೊತೆ ಹೊಂದಾಣಿಕೆ ಮಾಡಿಕೊಂಡು ಬಂದಾಗ, ನಮಗೆ ಬಹುಮತ ಇಲ್ಲದೆ ಇದ್ದಾಗ ನಾವು ಅದಕ್ಕೆ ಒತ್ತಾಯ ಮಾಡುವುದಕ್ಕೆ ಹೋಗಲಿಲ್ಲ. ನಮ್ಮ ವಿಚಾರದಲ್ಲಿ ಏನೂ ಬದಲಾವಣೆ ಇಲ್ಲ.

ಮಾನ್ಯ ಸದಸ್ಯರು : ನಮ್ಮದೂ ಅದೇ ಪರಿಸ್ಥಿತಿ ನಾವೂ ಎಂದೂ ರಾಜ್ಯದ ರೈತರ ಹಿತ ಕಾಪಾಡುವುದರಲ್ಲಿ ಹಿಂದೆ ಹೋಗಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಆ ಕಡೆ ಕುಳಿತಿರುವಂತಹ ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ನೀವು ಯಾರ ಹೆಗಲ ಮೇಲೆ ಕೂತಿದ್ದೀರಿ ಎನ್ನುವುದು ಗೊತ್ತಿದೆ. ಈ ನಾಡನ್ನು ಆಳಿದಂತಹ ನೀವು, ಇಷ್ಟು ವರ್ಷ ಅಧಿಕಾರ ನಡೆಸಿದಂತಹ ನೀವು 31 ಜನ ಸಚಿವರನ್ನು ಕಳೆದುಕೊಂಡು, ಚುನಾವಣೆಯಲ್ಲಿ ಸೋಲಿಸಿಕೊಂಡು ಇವತ್ತು ಈ ತರಹ ಹೀನಾಯ ಸ್ಥಿತಿಗೆ ಬಂದು, ಸಿದ್ದರಾಮಯ್ಯನವರ ಪಾರ್ಟಿ ಬೆಂಬಲದೊಂದಿಗೆ, ಎಲ್ಲಿ ಬಿಜೆಪಿಯವರು ಬಂದರೆ ನಾವು ಜೈಲಿಗೆ ಹೋಗಬೇಕಾಗುತ್ತದೆ ಎನ್ನುವ ಭಯದಿಂದ, ಅನೇಕ ಹಗರಣಗಳು ಎಲ್ಲಿ ಬಯಲಾಗುತ್ತದೋ ಎನ್ನುವ ಭಯದಿಂದ ಅವರ ಜೊತೆ ನೀವು ಸೇರಿಕೊಂಡು ಇಷ್ಟು ಮಾತನಾಡುತ್ತೀರಿ ಎಂದರೆ, ನಿಮಗೆ ಬಹುಮತ ಎಲ್ಲಿದೆ?

ಮಾನ್ಯ ಸದಸ್ಯರು : ಜೆಡಿಎಸ್‌ರವರ ಜೊತೆ ಸೇರಿ ಅವರಿಗೆ ಸಹಕಾರ ಕೊಡುತ್ತೇವೆ ಅವರೇ ಬಂದು ಮಂತ್ರಿಮಂಡಳ ರಚನೆ ಮಾಡಲಿ ಎಂದು ಹೇಳಿದಿರಿ, ಮತ್ತೆ ನಾವು ಭಾಗಿಯಾಗುತ್ತೇವೆಂದು ಹೇಳಿದಿರಿ, ಎರಡೆರಡು ತರಹ ನೀವು ಹೇಳಲಿಲ್ಲವಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಮಾತು ಹೇಳುತ್ತೇನೆ. ಈ ನಾಡಿನ ಐದೂವರೆ ಕೋಟಿ ಜನರ ಆಶೀರ್ವಾದ ಇವತ್ತಲ್ಲ ನಾಳೆ ನಮಗೆ ಸಿಕ್ಕಿದರೆ, ಪ್ರಜಾ ತಂತ್ರ ವಯವಸ್ಥೆಯಲ್ಲಿ ಮಾಲೀಕರು ಮತದಾರರು. ಅವರ ತೀರ್ಪು ಇದು. ಅವಕಾಶ ಸಿಕ್ಕರೆ ಈ ಹಗರಣಗಳ ಜೊತೆಗೆ ನಮ್ಮ ಜೆಡಿ(ಎಸ್) ನಾಯಕರು ಕಾಂಪ್ರಮೈಸ್ ಮಾಡಿಕೊಂಡು, ಹೊಂದಾಣಿಕೆ ಮಾಡಿಕೊಂಡು ಏನು ಅಧಿಕಾರ ನಡೆಸುತ್ತಿದ್ದಾರೆ, ಆ ಕೆಲಸಕ್ಕೆ ಅವಕಾಶ ಕೊಡದೆ, ಯಾರ್‍ಯಾರು ಎಷ್ಟೇ ದೊಡ್ಡವರೇ ಇರಲಿ ಅದರ ಬಗ್ಗೆ ತನಿಖೆ ಮಾಡಿಸಿಯೇ ಮಾಡಿಸುತ್ತೇವೆ. ಆ ರೀತಿ ಅಪರಾಧ ಮಾಡಿದಂತಹವರಿಗೆ ಜೆಡಿ(ಎಸ್)ನವರು ಸ್ಪೆಷಲ್ ಕೋರ್ಟ್ ಮಾಡದೇ ಇದ್ದರೂ, ನಾವಂತೂ ಸ್ಪೆಷಲ್ ಕೋರ್ಟ್ ಮಾಡಿ ಅವರುಗಳನ್ನು ಜೈಲಿನಲ್ಲಿ ಇಡುತ್ತೇವೆ. ಇದರ ಬಗ್ಗೆ ನೀವು ಯಾವುದೇ ಅನುಮಾನವನ್ನು ಪಡಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ಯಡಿಯೂರಪ್ಪನವರೇ, 32 ಜನ ಮಂತ್ರಿಗಳು ಸೋತಿದ್ದು ನಿಜ, ನಾವು ಆ ಮಾತನ್ನು ಒಪ್ಪಿಕೊಳ್ಳುತ್ತೇವೆ. ನೀವು ಹೇಳಿದಿರಿ, ಜೆಡಿ(ಎಸ್) ಕಾಂಗ್ರೆಸ್ ಜೊತೆ ಹೊಂದಾಣಿಕೆ ಏಕೆ ಮಾಡಿಕೊಂಡಿರಿ, ಮಾಡಿ ನೀವು ಮಾಡಲಿಲ್ಲವೆಂದರೆ ಬಿಜೆಪಿಯವರು ಅಧಿಕಾರಕ್ಕೆ ಬಂದರೆ ಜೈಲಿಗೆ ಕಳುಹಿಸುತ್ತಿದ್ದೆವು ಎಂದು ಹೇಳಿದಿರಿ. ತಾವು ಒಂದು ತಿಳಿದುಕೊಳ್ಳಬೇಕು. ಕೇಂದ್ರ ಸರ್ಕಾರದಲ್ಲಿ ಐದು ವರ್ಷಗಳ ಅಧಿಕಾರ ಇತ್ತು ತಮಗೆ, ಇದೇ ತರಹದ ಅಪಾದನೆಗಳನ್ನು ಕಾಂಗ್ರೆಸ್‌ನವರು ಕೇಂದ್ರ ಸರ್ಕಾರದ ಮೇಲೆ ಮಾಡಿದ್ದರು. ಐದು ವರ್ಷಗಳಲ್ಲಿ ಎಷ್ಟು ಜನರಿಗೆ ಜೈಲಿಗೆ ಕಳುಹಿಸಿದ್ದೀರಿ? ಜೈಲಿಗೆ ಕಳುಹಿಸುತ್ತೇವೆಂದು ಮಾತನಾಡುವುದಕ್ಕೆ ಸಾಧ್ಯ ಇದೆ, ಮಾತನಾಡಬಹುದು. ಬೇಕಾದ್ದು ಮಾತನಾಡಬಹುದು, ಅದಕ್ಕೆ ಇಲ್ಲಿ ಪ್ರೊಟೆಕ್ಷನ್ ಇದೆ. ಆದರೆ

ಜೈಲಿಗೆ ಕಳುಹಿಸಬೇಕಾದರೂ ಸಹ ಕಾಯಿದೆ, ಕಾನೂನು ಇದೆ, ವಿಚಾರಣೆ ಇದೆ, ನೀವು ಆ ಕಡೆ ಕೂತು ಚೆನ್ನಾಗಿ ಕೆಲಸ ಮಾಡಿದ್ದೀರಿ. ಇಲ್ಲಿ ಕೆಲಸ ಮಾಡಿದ ಅನುಭವ ನಿಮಗೆ ಇಲ್ಲ. ಹಾಗಾಗಿ ತಾವು ಹಾಗೆ ಮಾತನಾಡಬಹುದು. ಇಲ್ಲಿಗೆ ಬಂದ ನಂತರ ನಿಮಗೆ ಗೊತ್ತಾಗುತ್ತದೆ. ಒಬ್ಬ ಮಂತ್ರಿಯಾಗಿ ಯಾವ ಪ್ರಕಾರ ಕೆಲಸ ಮಾಡಬೇಕೆಂದು ಗೊತ್ತಾಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ. ಯಾರಾದರೂ ತಪ್ಪು ಮಾಡಿದರೆ ಗುರುತು ಮಾಡುವ ಅಧಿಕಾರ ನಿಮಗೆ ಕೊಟ್ಟಿದ್ದಾರೆ. ನೀವು ತಪ್ಪು ಮಾಡಿದವರಿಗೆ ತರಾಟೆಗೆ ತೆಗೆದುಕೊಳ್ಳಬಹುದು. ಆ ಅಧಿಕಾರ ಯಾರೂ ಕಸಿದುಕೊಂಡಿಲ್ಲ. ಅಧಿಕಾರದಲ್ಲಿ ಇರಬೇಕು ಎಂದು ಅಲ್ಲ ಅಧಿಕಾರದಲ್ಲಿದ್ದರೆ ಕ್ರಮ ತೆಗೆದುಕೊಳ್ಳುವ ಹಾಗೆ ಇಲ್ಲ. As a opposition leader ಇಷ್ಟು ದೊಡ್ಡ ಸಂಖ್ಯೆಯ ಅಪೋಸಿಷನ್ ಯಾವಾಗಲೂ ಇರಲಿಲ್ಲ. 1983ರಲ್ಲಿ ಇತ್ತು ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ ಇಂತಹ ದೊಡ್ಡ ಅಪೋಸಿಷನ್ ಇತ್ತು. ಇಷ್ಟೊಂದು ದೊಡ್ಡ ಸಂಖ್ಯೆ ಇದೆ, ಆ ಸಂಖ್ಯೆಯನ್ನು ಉಪಯೋಗಿಸಿಕೊಂಡು ಯಾರ್‍ಯಾರಿಗೆ ಬಲಿ ಹಾಕಬೇಕು. ಜೈಲಿಗೆ ಕಳುಹಿಸಬೇಕು, ಕಳುಹಿಸುವುದಕ್ಕೆ ಸಾಧ್ಯ ಇದೆ.

ಶ್ರೀ ಬಿ.ಯಸ್. ಯಡಿಯೂರಪ್ಪ : ಯಾವತ್ತೋ ಒಂದು ದಿವಸ, ಇಷ್ಟು ವರ್ಷ ಅನುಭವ ಇರುವಂತಹ ದೇಶಪಾಂಡೆಯವರು ಈ ರೀತಿ ಅಪರಾಧ ಮಾಡಿದವರಿಗೆ ಕಾನೂನು ಚೌಕಟ್ಟಿನಲ್ಲಿ ಯಾವ ರೀತಿ ತನಿಖೆ ಮಾಡಿಸಬೇಕು, ಯಾವ ರೀತಿ ಶಿಕ್ಷೆ ಕೊಡಬೇಕು ಎನ್ನುವುದನ್ನು ನಿಮ್ಮಂತಹವರ ಸಲಹೆ ಮೂಲಕ, ಅನುಭವದ ಮೂಲಕ ಆ ರೀತಿ ವ್ಯವಸ್ಥಿತವಾದ ತನಿಖೆ ಮಾಡಿಸಿ ಕಾನೂನು ಚೌಕಟ್ಟಿನಲ್ಲಿ ಆ ಕೆಲಸ ಮಾಡುವುದಕ್ಕೆ ದೇವರು ಅವಕಾಶ ಕೊಟ್ಟಾಗ ಮಾಡೋಣ. ಆಗ ನಿಮ್ಮ ಸಹಾಯವನ್ನೂ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ದೇಶಪಾಂಡೆಯವರು ಹೇಳಿದ್ದು ನಿಜ. ಏಕೆಂದರೆ, ದೊಡ್ಡ ದೊಡ್ಡವರು ಅಪರಾಧ ಮಾಡಿದರೆ ಸಿಕ್ಕಿ ಹಾಕಿಕೊಳ್ಳುವುದಕ್ಕೆ ಅವಕಾಶವಿಲ್ಲ. ಚಿಕ್ಕವರು ಅಪರಾಧ ಮಾಡಿದರೆ ಮಾತ್ರ ಸಿಕ್ಕಿ ಹಾಕಿಕೊಳ್ಳುವುದು. 'ಜೇಡರ ಬಲೆಯಲ್ಲಿ ಸಣ್ಣ ಹುಳ ಬಂದಾಗ ಸಿಕ್ಕಿ ಹಾಕಿಕೊಳ್ಳುತ್ತದೆ, ದೊಡ್ಡ ಹುಳ ಬಂದು ಸಿಕ್ಕಿ ಹಾಕಿಕೊಂಡರೆ ಹರಿದು ಬೀಳುತ್ತದೆ. ಆದ್ದರಿಂದ ಕಾನೂನಿಗೆ ಕಣ್ಣು ಇಲ್ಲವೆಂದು ಹೇಳುವುದು ನಿಜವಾಗುತ್ತದೆ. ಪಾಪದವರ ಮೇಲೆ ಮಾತ್ರ ಕಾನೂನು ಕಣ್ಣು ಕಾಣುವುದು. ದೊಡ್ಡವರು ಮಾಡಿದ ತಪ್ಪಿನ ಮೇಲೆ ಕಾನೂನಿಗೆ ಕಣ್ಣು ಕಾಣುವುದಿಲ್ಲ. ಆ ಪರಿಸ್ಥಿತಿ ಇರುವಾಗ ಜೈಲಿಗೆ ಕಳುಹಿಸುವುದು ಕಷ್ಟವಾಗುತ್ತದೆ ಎಂದು ಹೇಳಿದರೆ ನಾನು ಒಪ್ಪುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಬೇರೆ ಯಾವುದೋ ಆರೋಪ ಮಾಡುವುದಕ್ಕೆ ಹೇಳಲಿಲ್ಲ. ಒಬ್ಬ ಸಬ್ ಇನ್‌ಸ್ಪೆಕ್ಟರ್ ಮಟ್ಟಣ್ಣನವರ್ ನಂತಹವರು ಒಬ್ಬರು ಇದ್ದರು, ಯುವಕ, ಯಾವುದೋ ಒಂದು ಕಾರಣಕ್ಕೆ ಭ್ರಷ್ಟಾಚಾರ ಎಲ್ಲಾ ನೋಡಿ ಅವನು ಶಾಸಕರ ಭವನದಲ್ಲಿ ಒಂದು ಪಟಾಕಿನೋ ಏನೋ ಇಟ್ಟ. ಇದನ್ನು ನಾನು ಹೇಳಲಿಲ್ಲ. ಇದನ್ನು ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ. ಕೃಷ್ಣರವರು ಪಟಾಕಿ ಇಟ್ಟವನು ಒಬ್ಬ ದೊಡ್ಡ ಲೀಡರಾ, ದೊಡ್ಡ ಹೋರಾಟಗಾರನಾ ಎಂದು ಹೇಳಿದ್ದರು. ಅದು ರೆಕಾರ್ಡ್‌ನಲ್ಲಿ ಇದೆ. ಅಂತಹವರನ್ನು ಮನೆಗೆ ಹೋಗುವವರೆಗೂ ಬಿಡಲಿಲ್ಲ. ಆ ಯುವಕ ಭ್ರಷ್ಟಾಚಾರದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ಅಪರಾಧ ಮಾಡಿದ್ದಾನೆ. ಅಪರಾಧ ಅಲ್ಲವೆಂದು ನಾನು ಹೇಳುವುದಿಲ್ಲ. ಯಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಆದರೆ ಆ ಯುವಕನಿಗೆ ಎಲ್ಲಿಯವರೆಗೆ ತೆಗೆದುಕೊಂಡು ಹೋದಿರಿ ಎಂದರೆ, ಅವನನ್ನು ಉದ್ಯೋಗದಿಂದ ಮನೆಗೆ ಕಳುಹಿಸುವವರೆಗೂ ತಾವು ಬಿಡಲಿಲ್ಲ. ಈಗ ಈ ಅಕ್ಕಿ ಹಗರಣದಲ್ಲಿ ಕೆಲವು ಅಧಿಕಾರಿಗಳು ಒಳಗಡೆ ಇದ್ದಾರೆ. ಯಾರು ಒಳಗಡೆ ಇರಬೇಕಾಗಿತ್ತು. ಯಾರು ಇದನ್ನು ಉಸ್ತುವಾರಿ ಮಾಡುತ್ತಿದ್ದ ಟಾಪ್ ಲೆವಲ್ ಅಧಿಕಾರಿ, ಸೆಕ್ರೆಟರಿ ಲೆವಲ್‌ನಲ್ಲಿ ವಾರಕ್ಕೆ ಎರಡು ದಿವಸ ನೀವು ಅಲ್ಲಿಗೆ ಹೋಗಿ ತನಿಖೆ ಮಾಡಬೇಕೆಂದು ಹೇಳಿದ್ದಿರಿ, ಜಿಲ್ಲಾ ಉಸ್ತುವಾರಿ ಸಚಿವರೂ ಇದ್ದರು, ಡೆಪ್ಯುಟಿ ಕಮಿಷನರ್ ಇದ್ದರು, ಈ ಸದನದಲ್ಲಿ ಒಂದು ಮಾತು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ, ಯಾವುದೇ ದಾಖಲೆಗಳು ಸರಿ ಇಲ್ಲ, ಅದಕ್ಕಾಗಿ ಯಾರೂ ಅಬ್ಜೆಕ್ಷನ್ ಮಾಡುತ್ತಿಲ್ಲ. ಮಂಜೂರಾದ ಹಣ 70 ಭಾಗ, 90 ಭಾಗದಷ್ಟು ಖರ್ಚಾಗಿದೆಯಾ ಎನ್ನುವಂತಹ ಪ್ರಶ್ನೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂದ ಅಕ್ಕಿಗೆ ಯುಟಲೈಸೇಷನ್ ಸರ್ಟಿಫಿಕೇಟ್ ಹದಿನೇಳು–ಹದಿನೆಂಟು ಸಾವಿರ ಕ್ವಿಂಟಾಲ್ ಅಕ್ಕಿ ಹೊರದೇಶಕ್ಕೆ ಕನ್‌ಸೈನ್‌ಮೆಂಟ್‌ಗೆ ಹೋಗಿ ಇನ್ನೊಂದು ಕನ್‌ಸೈನ್‌ಮೆಂಟ್ ಅಲ್ಲಿ ಉಳಿದಾಗ ಸಿಒಡಿಯವರಿಗೆ ಗೊತ್ತಾಯಿತು. ಯಾರೋ ಒಬ್ಬ ಅನಾಮಧೇಯ ವ್ಯಕ್ತಿ ಡಿಸಿಗೆ ಫೋನ್ ಮಾಡಿದ್ದರಿಂದ ತನಿಖೆ ಆಯಿತು. ನಾಲ್ಕು ತನಿಖೆ ಆಧಾರದ ಮೇಲೆ ಇವೆಲ್ಲಾ ಬಣ್ಣ ಬಯಲಾಗಿದೆ. ಕಳೆದ ಎರಡು ವರ್ಷಗಳಿಂದ ಪ್ರತಿನಿತ್ಯ ಇಡೀ ರಾಜ್ಯದಲ್ಲಿ ಸುದ್ದಿಯಾಗುತ್ತಿದೆ. ಇದನ್ನು ಬಿಗಿ ಮಾಡುವಂತಹ ಕೆಲಸ ಮಾಡಿದ್ದಿರಾ? ದೊಡ್ಡವರು ಜೈಲಿಗೆ ಹೋದರಾ? ಇಲ್ಲ. ಯಾವುದೋ ಅಧಿಕಾರಿ, ಯಾವುದೋ ಎಮ್‌ಎಲ್‌ಎ, ಯಾರೋ ಎಂಪಿ, ಯಾರೋ ಹೇಳಿದಂತಹ ಮಾತಿನ ಮೇಲೆ ಏನು ಕೆಲಸ ಮಾಡಿದ್ದಾನೆ, ವ್ಯತ್ಯಾಸಗಳು ಸಣ್ಣಪುಟ್ಟದು ಆಯಿತು. ಅವನು ಜೈಲಿಗೆ ಹೋದ ದೊಡ್ಡವರು ಹೋಗಲಿಲ್ಲ. ನಮ್ಮ ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆ ಕೊರತೆ ಇದೆ. ಅದನ್ನು ಸರಿಪಡಿಸುವುದಕ್ಕೆ ಯಾವುದೇ ಪ್ರಯತ್ನ ಇದುವರೆವಿಗೂ ನಮ್ಮಿಂದ ಆಗಲಿಲ್ಲವೆಂಬ ದುಃಖದ ಸಂಗತಿಯನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಿರಿಯರಾದ ಸನ್ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಇದು ನಮಗೆ ಎಲ್ಲರಿಗೂ ಕಮಿಟ್‌ಮೆಂಟ್. ಈ ಕಡೆ ಇರುವವರು ಸತ್ಯ ಹರಿಶ್ಚಂದ್ರನ ಮಕ್ಕಳು, ನೀವು ತಪ್ಪು ಮಾಡುತ್ತೀರಿ ಎಂದು ನಾನು ಆ ಮಾತು ಹೇಳುತ್ತಿಲ್ಲ. ಈ ಲೂಟಿ ಮಾಡುವವರದೇ ಒಂದು ಜಾತಿ ಅಧಿಕಾರಿ ವರ್ಗ ಯಾವಾಗ ಹೆದರುತ್ತೆ, ಚುನಾಯಿತ ಪ್ರತಿನಿಧಿಗಳು ಸರ್ಕಾರ ನಡೆಸುವವರು, ವಿರೋಧ ಪಕ್ಷಗಳವರು ನಾವು ಹೇಗೆ ಇರುತ್ತೇವೆ ಎನ್ನುವುದರ ಮೇಲೆ ಅವರು ನಡೆದುಕೊಳ್ಳುತ್ತಾರೆ. ಇವತ್ತು ಏನು ನಡೆದಿದೆ ಎನ್ನುವುದು ಯಾವುದೇ ಮುಚ್ಚು ಮರೆ ಇಲ್ಲದೆ ಎಲ್ಲರಿಗೂ ಗೊತ್ತಿದೆ. ಇದನ್ನು ಸರಿಪಡಿಸುವುದಕ್ಕೆ ನಮ್ಮ ಸಿದ್ರಾಮಯ್ಯನವರಿಗೆ, ಪಿ.ಜಿ.ಆರ್. ಸಿಂಧ್ಯರವರಿಗೆ ಮತ್ತು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಆಗುವುದಿಲ್ಲವೆಂದು ಗೊತ್ತಿದ್ದರೂ ಸಹ ಕೇವಲ ಮಂತ್ರಿಗಿರಿಗಾಗಿ ಅಲ್ಲಿ ಕೂತು ಏಕೆ ಒದ್ದಾಡುತ್ತಿದ್ದೀರಿ ಎಂಬುದು ನನಗೆ ದುಃಖವನ್ನುಂಟು ಮಾಡಿದೆ. ನೀವು ಉತ್ತರ ಕೊಡುವಾಗ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅವರು ಅಲ್ಲಿ ಹೋಗಿ ಕೂತು ಒದ್ದಾಡುತ್ತಿದ್ದೀರಿ ಎಂದು ಹೇಳುತ್ತಿದ್ದೀರಲ್ಲಾ, ಅವರನ್ನು ಎಲ್ಲಿಗೆ ಕಳುಹಿಸಬೇಕೆಂದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವತಂತ್ರವಾಗಿ ಸರ್ಕಾರ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ಸ್ವತಂತ್ರವಾಗಿ ಸರ್ಕಾರ ಮಾಡಲಿಕ್ಕೆ ನಂಬರ್ ಎಲ್ಲಿದೆ?

ಶ್ರೀ ಸಿದ್ಧ ರಾಮಯ್ಯ : ಮಾನ್ಯ ಉಪ ಮುಖ್ಯಮಂತ್ರಿ, ಹಣಕಾಸು, ಯೋಜನೆ ಅಬಕಾರಿ ಸಚಿವರು ನೀವೂ' ಯಾರನ್ನೂ ಎಲ್ಲೂ ಕಳುಹಿಸುವುದಕ್ಕಾಗುವುದಿಲ್ಲ. ಅವರನ್ನು ಎಲ್ಲೂ ಕಳುಹಿಸುವುದಕ್ಕಾಗುವುದಿಲ್ಲ. ಜನರು ಮಾತ್ರ ಯಾರ್ಯಾರು ಎಲ್ಲೆಲ್ಲಿ ಇರಬೇಕೆಂದು ಅವರು ಮಾತ್ರ ಕಳುಹಿಸುತ್ತಾರೆ. ನಿಮಗೆ ಅಲ್ಲಿ ಕೂತುಕೊಳ್ಳಬೇಕೆಂದು ಕಳುಹಿಸಿದ್ದಾರೆ, ಅವರು ಅಲ್ಲಿ ಕುಳಿತಿದ್ದಾರೆ. ನಮ್ಮನ್ನು ಇಲ್ಲಿ ಕುಳಿತು ಕೊಳ್ಳಬೇಕೆಂದು ಕಳುಹಿಸಿದ್ದಾರೆ. ನಾವು ಇಲ್ಲಿ ಕುಳಿತಿದ್ದೇವೆ. ಜನರು ಮಾತ್ರ ಕಳುಹಿಸುವುದು. ಅವರೂ ಕಳುಹಿಸುವುದಕ್ಕಾಗುವುದಿಲ್ಲ. ನೀವೂ ಕಳುಹಿಸುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ನಿಮ್ಮ ಪರವಾಗಿ ನಾನು ವಾದ ಮಾಡುವುದಕ್ಕೆ ಬಂದರೆ ನೀವು ಈ ರೀತಿ ಹೇಳುವುದು ಸರಿಯಲ್ಲ. ಮಾನ್ಯ ಯಡಿಯೂರಪ್ಪನವರೇ ನಾನು ಆಡಿದ ಮಾತನ್ನು ನಾನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಅವರು ನನ್ನನ್ನು ಎಲ್ಲಿಗೆ ಬೇಕಾದರೂ ಕಳುಹಿಸಬಹುದು. ಕಾಡಿಗೆ ಬೇಕಾದರೂ ಕಳುಹಿಸಬಹುದು, ಯಾವ ಊರಿಗೂ ಬೇಕಾದರೂ ಕಳುಹಿಸಬಹುದು. ಅವರು ನಮ್ಮ ವಕಾಲತ್ತನ್ನೇ ಬೇಡ ಎನ್ನುತ್ತಿರುವುದರಿಂದ ನೀವು ಎಲ್ಲಿಗೆ ಬೇಕಾದರೂ ಅವರನ್ನು ಕಳುಹಿಸಬಹುದು.

ಶ್ರೀ ಎಂ.ಪಿ. ಪ್ರಕಾಶ್ (...ದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದ ಮಾತನ್ನು ಹಿಂದಕ್ಕೆ ಪಡೆಯುವುದಕ್ಕೆ ನೀವು ಒಪ್ಪಬೇಡಿ. ನಾನೂ ಕೂಡ ಒಪ್ಪುವುದಿಲ್ಲ. ಮಾತನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ಒಪ್ಪುವುದಿಲ್ಲ. ನಾವು ಧರಣಿ ಮಾಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ವಾಟಾಳ್‌ನಾಗರಾಜ್‌ರವರು ನಮ್ಮ ಪರವಾಗಿಯೇ ಇರುವುದು. ಆದರೆ ಈಗ್ಯಾಕೆ ಆವರ ಕಡೆ ಹೋಗುತ್ತಿದ್ದಾರಲ್ಲಾ ಎಂದು ನಾನು ಅವರನ್ನು ಎಚ್ಚರಿಸಿದೆ ಅಷ್ಟೆ.

ಶ್ರೀ ವಾಟಾಳ್‌ನಾಗರಾಜ್ : ನೋಡಿ, ನೋಡಿ, ನಿಜ, ನಾನು ಮತ್ತು ಸಿದ್ದರಾಮಯ್ಯನವರು ಒಳ್ಳೆಯ ಸ್ನೇಹಿತರು. ಆ ವಿಚಾರ ಬೇರೆ. ಆದರೆ ರಾಜಕೀಯವಾಗಿ ನಾವುಗಳು ಬೇರೆ ಬೇರೆ ಇದ್ದೇವೆ. ನಾನು ಅವರಿಗೆ ರಕ್ಷಣೆ ಕೊಡೋಣ ಎಂದು ಹೇಳಿದರೆ ಅದನ್ನು ಮಾನ್ಯ ಸಿದ್ಧರಾಮಯ್ಯನವರು ಮರೆತು ನೀವು ಯಡಿಯೂರಪ್ಪನವರ ಪರ ಹೋಗಿ ಅಂದರೆ ಹೇಗೆ? ನಾನು ಯಡಿಯೂರಪ್ಪನವರೇ ನೀವು ಎಲ್ಲಿಗೆ ಅವರನ್ನು ಕಳುಹಿಸುತ್ತಿದ್ದೀರಿ; ಪಾಪ ಅವರ ಹಣೆಬರಹ ಆ ರೀತಿಯಾಗಿದೆ, ಕೆಟ್ಟು ಹೋಗಿದ್ದಾರೆ ಅವರು, ಪಾಪ ಅವರ ಜೊತೆಗೆ ಸೇರದೇ ಬೇರೆ ವಿಧಿಯೇ ಇಲ್ಲ ಎಂದು ನಾನು ಹೇಳುತ್ತಿದ್ದೇನೆ. ಅದನ್ನು ನೀವು ಒಪ್ಪಿಕೊಳ್ಳುವುದನ್ನು ಬಿಟ್ಟು ಇಲ್ಲ, ನಮ್ಮ ಪರಿಸ್ಥಿತಿ, ಹಣೆಬರಹ ಕೆಟ್ಟಿದೆ, ನಾವು ಕಾಂಗ್ರೆಸ್ ಜೊತೆಗೆ ಸೇರಲೇಬೇಕು. ಅದು ಬಿಟ್ಟರೆ ಬೇರೆ ವಿಧಿಯೇ ಇಲ್ಲ ಎಂದು ನೀವು ಹೇಳುವುದನ್ನು ಬಿಟ್ಟು ಅವರು ಎಲ್ಲಿಗೆ ಹೋಗ್ತಾರೆ ಎಂದರೆ ನಾವು ಎಲ್ಲಿಗೆ ಹೋಗುವುದು ಎಂದು ಕೇಳೋಣ.

ಶ್ರೀ ಎ. ಕೃಷ್ಣಪ್ಪ : ನೀವು ಹೇಳಿದ್ದು ಸತ್ಯ. ಅವರನ್ನು ಅವರ ಜೊತೆಯಲ್ಲಿಯೇ ಇಟ್ಟುಕೊಳ್ಳಬೇಕೆಂದು ಮಹಾ ಪ್ರಯತ್ನಗಳು ನಡೆದವು. ಅದು ಸಾಧ್ಯತೆ ಆಗಲಿಲ್ಲ. ಅದಕ್ಕಾಗಿ ಅವರು ಇರಬೇಕಾದ ಕಡೆ ನಿಜ ಸ್ಥಿತಿ ಎಲ್ಲಿದೆಯೋ ಅಲ್ಲಿದ್ದಾರೆ. ಸಿದ್ದರಾಮಯ್ಯನವರು ಮತ್ತು ಅವರ ಸ್ನೇಹಿತರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ ಈಗ ಒಂದು ಕೆಲಸ ಮಾಡೋಣ, ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಗೆದ್ದು ಬಂದಿರುವವರು ನೀವು ಏನೇನು ಮಾಡಿದ್ದೀರಿ ಎಂಬುದು ಅವೆಲ್ಲಾ ಅವರಿಗೆ ಗೊತ್ತಿಲ್ಲ, ಅವರ್‍ಯಾರೂ ಬೇಡ. ನೀವು ಮತ್ತು ಮುಖ್ಯಮಂತ್ರಿಗಳು ಮತ್ತು ನಾಲ್ಕೈದು ಜನ ಪ್ರಮುಖರು ಕುಳಿತುಕೊಂಡು ಆ ಚುನಾವಣಾ ಪ್ರಣಾಳಿಕೆಯಲ್ಲಿ ನೀವೇನು ಹೇಳಿದ್ದಿರಿ ಮತ್ತು ಕಾಂಗ್ರೆಸ್‌ನವರು ಏನು ಹೇಳಿದ್ದರು ಎಂಬುದನ್ನು ಒಂದು ಸಾರಿ ಒಟ್ಟಿಗೆ ಓದಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ, ಹಾಗೂ ಮೂಲಭೂತ ಅಭಿವೃದ್ಧಿ ಸೌಕರ್ಯ ಸಚಿವರು : ನಾವು ಈಗಾಗಲೇ ಓದಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಬೇಕಾದ್ದನ್ನು ಮಾತ್ರ ಓದಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ನಾವು ಓದಿರುವುದರಿಂದಲೇ ಇಬ್ಬರೂ ಸೇರಿ 'ಕಾಮನ್ ಮಿನಿಮಮ್ ಪ್ರೋಗ್ರಾಂ' ಎಂದು ಮಾಡಿರುವುದು. ಈಗ ನೀವು ಏನು ಕೇಂದ್ರದಲ್ಲಿ ಎನ್.ಡಿ.ಎ. ಸರ್ಕಾರ ಇದ್ದಾಗ ಬೇರೆ ಪಕ್ಷಗಳವರೆಲ್ಲರೂ ಇದ್ದು ಬಿ.ಜೆ.ಪಿ. ಕೈಗಳನ್ನು ಕಟ್ಟಿಹಾಕಿದರು ಎಂದು ಹೇಳಿದಿರೋ ಹಾಗೆಯೇ ನಮ್ಮಲ್ಲಿ ನಮ್ಮ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಹೇಳಿರುವುದನ್ನು ನೋಡಿಕೊಂಡು ಇಬ್ಬರೂ' ಸೇರಿ 'ಕಾಮನ್ ಮಿನಿಮಮ್ ಪ್ರೋಗ್ರಾಂ' ಮಾಡಿದಾಗ ಒಬ್ಬರಿಗೊಬ್ಬರು ಅನುಸರಿಕೊಂಡು ಹೋಗಬೇಕಾಗುತ್ತದೆ. ಆ ರೀತಿಯಲ್ಲಿಯೇ ಇದನ್ನು ಮಾಡಿದ್ದೀವಿ. ಮುಂದೆ ಜನರು ನಮಗೇ ಅಧಿಕಾರವನ್ನು ಕೊಟ್ಟರೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಶ್ರೀನಿವಾಸಗೌಡರೇ, ನಾನು ಯಾವುದನ್ನು ಓದಿ ಎಂದರೆ ನಿಮಗೆ ಗೊತ್ತೇ? ಇದು ಬುದ್ಧಿವಂತರು ಯಾವುದನ್ನು ಬೇಕೋ ಅದನ್ನು ಮಾತ್ರ ಓದುತ್ತಾರೆ. ಆದರೆ ಅವರು ಯಾವುದನ್ನು ಓದಬೇಕು ಎಂದರೆ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಅವರ ಇಷ್ಟು ವರ್ಷಗಳ ಅನುಭವದ ಮೂಸೆಯಿಂದ ಒಂದು ವಿಚಾರವನ್ನು ಅವರು ಹೇಳಿದ್ದಾರೆ. ಬಹಳ ಪ್ರಾಮಾಣಿಕ, ಸತ್ಯ ವಿಷಯವನ್ನು ಅವರು ಹೇಳಿದ್ದಾರೆ. ಅವರ ಪ್ರಣಾಳಿಕೆ ಏನು? ಜೆ.ಡಿ.ಎಸ್. ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಬಗ್ಗೆ ಹೇಳಿದ ಮಾತು ಏನೆಂದರೆ. "ಕೃಷ್ಣಾ ಸರ್ಕಾರದ ಸಾಧನೆಗಳು ಮೂರೇ ಮೂರು, ಪ್ರಚಾರದಲ್ಲಿ ಸಂಭ್ರಮ, ಭ್ರಷ್ಟಾಚಾರದಲ್ಲಿ ಅಕ್ರಮ, ಸುಳ್ಳು ಹೇಳುವುದರಲ್ಲಿ ನಿಸ್ಸೀಮ, ಕಾಂಗ್ರೆಸ್ ಸರ್ಕಾರದ ಕೊಡುಗೆ ಎಂದರೆ ಕಗ್ಗತ್ತಲ ಕರ್ನಾಟಕ. ಗ್ರಾಮೀಣ ಪ್ರದೇಶದ ಜನರಂತೂ ಕತ್ತಲ ಕೂಪದಲ್ಲಿರುವಂತಾಗಿದೆ." ಇದು ಜೆ.ಡಿ.ಎಸ್. ಮುಖಂಡರು ಹೇಳಿರುವಂಥ ಮಾತು. ಚುನಾವಣಾ ಪ್ರಣಾಳಿಕೆಯಲ್ಲಿ ಎಂ.ಪಿ. ಪ್ರಕಾಶ್‌ರವರು ಬರೆದಂಥ ಮಾತು. ಈ ಶಬ್ದಗಳು ಬೇರೆಯವರಿಗೆ ಹೊಳೆಯುವುದಕ್ಕೇ ಸಾಧ್ಯವಿಲ್ಲ. ಆದುದರಿಂದ ಎಂ.ಪಿ. ಪ್ರಕಾಶ್‌ರವರಿಗೆ ಆ ಕ್ರೆಡಿಟ್ ಹೋಗಬೇಕು.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಅದು ಕೃಷ್ಣಾರವರ ಬಗ್ಗೆ ಹೇಳಿದ್ದು, ಶ್ರೀ ಧರ್ಮಸಿಂಗ್ ರವರ ಬಗ್ಗೆ ಅಲ್ಲವೆಂದು ಕಾಣುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಕೃಷ್ಣಾ ಸರ್ಕಾರದ ಬಗ್ಗೆ ಹೇಳಿರುವುದು. ಮಾನ್ಯ ಧರ್ಮಸಿಂಗ್‌ರವರ ಬಗ್ಗೆ ಅಲ್ಲ. ಆದರೆ ಈಗ ನನ್ನ ಆರೋಪವೇನು ಗೊತ್ತೇನು? ನನ್ನ ಆರೋಪವೇನೆಂದರೆ ಈ ಮೂರು ಆರೋಪಗಳನ್ನು ನಮ್ಮ ಕಾಂಗ್ರೆಸ್ಸಿನ ಆವೊತ್ತಿನ ದಿವಸಗಳಲ್ಲಿ ಆಡಳಿತ ನಡೆಸಿದವರ ಮೇಲೆ ಏನಿದೆ ಅವುಗಳು ಈಗ ನಿಮಗೆ ಅನ್ವಯವಾಗುತ್ತಿದೆ. ಏಕೆಂದರೆ ಅಂಥವರ ಜೊತೆಗೆ ನೀವು ಈಗ ಕೈ ಜೋಡಿಸಿದ್ದೀರಿ. ಎಲ್ಲಾ ಪ್ರೆಸ್ ಕಟಿಂಗ್ಸ್‌ಗಳಲ್ಲಿ ನೀವು ಏನು ಹೇಳಿದ್ದೀರೋ ಅವೆಲ್ಲವೂ ನನ್ನ ಹತ್ತಿರ ಇದೆ. ನಿಮ್ಮೆಲ್ಲಾ ಶಾಸಕರಿಗೂ ಕಳುಹಿಸಿಕೊಡುತ್ತೇನೆ. ಕಾಂಗ್ರೆಸ್ ಬಗ್ಗೆ ಜೆ.ಡಿ.ಎಸ್. ನಾಯಕರು ಏನು ಹೇಳಿದ್ದಾರೆಂದರೆ "ಇದು ಭ್ರಷ್ಟಾಚಾರದ ಕೈ, ಇದು ದುರಾಡಳಿತದ ಕೈ, ರೈತರ ಆತ್ಮಹತ್ಯೆ ಮಾಡಿದ ಕೈ, ಬರಗಾಲ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿದ ಕೈ, ನಾಗಪ್ಪನವರ ಹತ್ಯೆ ಮಾಡಿದ ಕೈ,

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನೀವು ಎಲ್ಲವನ್ನೂ ಒಟ್ಟಿಗೆ ಹೇಳಬೇಕೆಂದಿದ್ದೇರೇನು?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಏನು ಹೇಳಿದ್ದಾರೆ ಎಂಬುದು ಅವರಿಗೆಲ್ಲಾ ಗೊತ್ತಿದೆ. ಯಾರು ಹೇಳಿದ್ದು ಎಂಬುದು ಎಲ್ಲರಿಗೂ ಗೊತ್ತು. ಪ್ರೆಸ್ ಕಟ್ಟಿಂಗ್ಸ್ ಇದೆ, ಅದನ್ನು ನಾನು ಕಳುಹಿಸಿಕೊಡುತ್ತೇನೆ. ಅವರಿಗೂ ಗೊತ್ತು ಯಾರು ಹೇಳಿದ್ದು ಎಂದು.

ಶ್ರೀ ಎಂ.ಪಿ. ಪ್ರಕಾಶ್ : ಇನ್ನೂ ಏನೇನು ಹೇಳುತ್ತೀರೋ ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಎಲ್ಲವನ್ನೂ ಒಟ್ಟಿಗೆ ಒಂದೇ ಬಾರಿ ಹೇಳಬೇಡಿ. ಇನ್‌ಸ್ಟಾಲ್‌ಮೆಂಟ್ಸ್‌ನಲ್ಲಿ ಹೇಳಿ.

ಅಧ್ಯಕ್ಷರು : ಯಡಿಯೂರಪ್ಪನವರೇ, ವಿಷಯ ಎಲ್ಲೆಲ್ಲಿಗೋ ಹೋಗುತ್ತಿದೆ. ನೀವು ಮುಖ್ಯ ಚರ್ಚೆಯ ಭಾಷಣಕ್ಕೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೌದು ಸಾರ್, ನಾನು ಆ ವಿಚಾರ ಸಧ್ಯಕ್ಕೆ ಈಗ ಕೈಬಿಟ್ಟುಬಿಡುತ್ತೇನೆ. ಥ್ಯಾಂಕ್ ಯು ಸಾರ್. ಈಗ ನಾನು ನೇರವಾಗಿ ಬಜೆಟ್‌ಗೆ ಬಂದುಬಿಡುತ್ತೇನೆ. ನನಗೆ ಅನ್ನಿಸುತ್ತಿರುವುದು ಏನೆಂದರೆ ಈ ಒಂದು ಅಪವಿತ್ರ ಮೈತ್ರಿ, ಮ್ಯಾಂಡೇಟ್ ವಿರುದ್ಧವಾಗಿ ಈ ರೀತಿಯ ಹೊಂದಾಣಿಕೆಯಿಂದಾಗಿ ಜನರು ಇವರ ಬಗ್ಗೆ ನಂಬಿಕೆಯನ್ನೇ ಕಳೆದುಕೊಂಡು ಬಿಡುತ್ತಾರೆ. ಯಾರನ್ನು ನಂಬಬೇಕು, ಬಿಡಬೇಕು ಎನ್ನುವುದೇ ಗೊಂದಲವಾಗುತ್ತದೆ. ಚುನಾವಣಾ ಸಮಯದಲ್ಲಿ ಎಲ್ಲೋ ಹೊಲದಲ್ಲೋ, ಗುಡಿಸಲಲ್ಲೋ ದುಡಿಯುತ್ತಿರುವ ರೈತನಿಗೆ ನಾವು ಏನು ಭಾಷಣ ಮಾಡುತ್ತೇವೆ, ನಾವು ಏನು ಹೇಳುತ್ತೇವೆ, ನಾವು ಏನು ಭರವಸೆ ಕೊಡುತ್ತೇವೆ ಅದನ್ನು ಆ ರೈತರು ನಂಬಿರುತ್ತಾರೆ. ಮಾನ್ಯ ಸನ್ಮಾನ್ಯರು ದೇವೇಗೌಡರ, ಸಿದ್ಧರಾಮಯ್ಯನವರ ಪಾರ್ಟಿ ಒಂದು ಸಾರಿ ನಮ್ಮನ್ನು ಸರ್ವನಾಶ ಮಾಡಿರುವಂಥ ಕಾಂಗ್ರೆಸ್‌ನವರನ್ನು ಮುಗಿಸಬೇಕು ಎಂದು ಹೊರಟಿದ್ದಾರೆ, ಬಿ.ಜೆ.ಪಿ.ಯವರು ಅಧಿಕಾರಕ್ಕೆ ಬಂದಿಲ್ಲ. ಬರೋ ವಾತಾವರಣ ಕಾಣುವುದಿಲ್ಲ. ಎಂದು ಹೇಳಿ ಹೆಚ್ಚು ಸೀಟ್‌ನ್ನು ನಮ್ಮವರನ್ನು ಗೆಲ್ಲಿಸದಿದ್ದರೂ ಕಡ್ಮೆ ಅಂತೂ ಮಾಡಲಿಲ್ಲ. ಆದರೆ ನೀವು ಇಷ್ಟು ಸೀಟು ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಅದು ಆದಮೇಲೆ ಕೇವಲ ಕುರ್ಚಿಗಾಗಿ, ಸನ್ಮಾನ್ಯ ದೇವೇಗೌಡರು ಏನು ಹೇಳಿದ್ದರು, ಮತ್ತೊಬ್ಬರು ಏನು ಹೇಳಿದ್ದರು ಎಂಬುದನ್ನೆಲ್ಲಾ ತೆಗೆದು ನೋಡಿದಾಗ ಈ ಕಾಂಪ್ರಮೈಸ್ ಏಕೆ? ಅಧಿಕಾರಕ್ಕಲ್ಲದೇ ಬೇರೆ ವಿಚಾರಗಳಿಗೆ ಕಾಂಪ್ರಮೈಸ್ ಆಯಿತೆ? ಕುರ್ಚಿಗಾಗಿ

ಅಲ್ಲದೇ ಬೇರೆ ಯಾವುದೇ ಕಾರಣಕ್ಕಾದರೂ ಕಾಂಪ್ರಮೈಸ್ ಆಯಿತೆ? ಇದರಲ್ಲಿ ತತ್ವ, ನೀತಿ, ಸಿದ್ಧಾಂತದ ಪ್ರಶ್ನೆ ಇದೆಯೆ? ಇವೆಲ್ಲದರ ಕಾರಣದಿಂದ ನಾನು ಇವೊತ್ತು ಏನು ಹೇಳುತ್ತಿದ್ದೇನೆಂದರೆ, ನಿನ್ನೆಯಲ್ಲ, ಮೊನ್ನೆ ಕಾಂಗ್ರೆಸ್ಸಿನ ಸ್ನೇಹಿತರು ಕಾಂಗ್ರೆಸ್‌ನ ಶಾಸಕಾಂಗ ಪಕ್ಷದ ಸಭೆಯಲ್ಲಿ ಕಾಂಗ್ರೆಸ್‌ನ ಅಧ್ಯಕ್ಷರ ಸಮಕ್ಷಮದಲ್ಲಿ ಧರ್ಮಸಿಂಗ್‌ರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಇಷ್ಟು ಸರಳವಾಗಿ ಏನೋ ಒಂದಷ್ಟು ಮಾಡೋಣ ಎಂದು ತಿಳಿದು ಕೆಲಸ ಮಾಡುತ್ತಿರುವಂಥ ಸಮಯದಲ್ಲಿ ಇಂಥ ವ್ಯಕ್ತಿಯ ಕಾಲು ಎಳೆಯುವಂಥ ಕೆಲಸವನ್ನು ಈಗಲೇ ಶುರು ಮಾಡಿದ್ದಾರೆಂದರೆ ಏನು ಹೇಳಲಿ. ಅವರನ್ನು ಬಲಿಪಶು ಮಾಡುವಂಥ ಕೆಲಸ ಏಕೆ ಮಾಡಿದರೋ,

ಶ್ರೀ ಎ. ಕೃಷ್ಣಪ್ಪ : ಮಾನ್ಯ ಯಡಿಯೂರಪ್ಪನವರೇ, ದಯಮಾಡಿ ನೀವು ಅದಕ್ಕೆ ಬಣ್ಣ ಕಟ್ಟಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ನೋಡಿ ಯಡಿಯೂರಪ್ಪನವರೇ, ಫ್ಯಾಕ್ಟ್ಸ್ ಏನು ಎಂದು ನೀವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಕೊನೆಯಲ್ಲಿ ಉತ್ತರ ಕೊಡುವಾಗ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ನೀವು ಇವೊತ್ತಿನ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ನೋಡಿ. You see it facts are... that is a fact ಹತ್ತು ನಿಮಿಷದ ಮುಂಚೆ ಸಿ.ಎಲ್.ಪಿ. ಮೀಟಿಂಗ್ ಅಡ್ಜರ್ನ್ ಆಗಿದೆ. ..that is nothing to do with ಗಲಾಟೆಯಿಂದ ಹೋದರು. I just bring to you kind notice. There is nothing like that.

ಶ್ರೀ ಬಿ.ಎಸ್. ಯಡಿಯೂರಪ್ಪ : ಆರೋಪ ಏನು? ಎಲ್ಲಾ ಕನ್ನಡ, ಇಂಗ್ಲೀಷ್ ಪತ್ರಿಕೆಗಳಲ್ಲಿ ಹೇಳುತ್ತಿದೆ. ಎಲ್ಲಾ ಕಟಿಂಗ್ಸ್‌ನ್ನು ಓದಿ. "ಉಪ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಮುಂಗಡ ಪತ್ರದಲ್ಲಿ ಹಿಂದಿನ ಸರ್ಕಾರದ ವಿರುದ್ಧ ಟೀಕೆ ಟಿಪ್ಪಣಿ ಮಾಡಲು ಅವಕಾಶ ಕೊಟ್ಟಿದ್ದೇಕೆ? ಈ ಬಗ್ಗೆ ಮುಖ್ಯಮಂತ್ರಿಗಳು ಮೌನ ವಹಿಸಿದ್ದು ಸರಿಯೇ? ಎಂದು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಜನಾರ್ಧನ ಪೂಜಾರಿ ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಪತ್ರಿಕೆಯಲ್ಲಿ ಬಂದಿದ್ದನ್ನೇ ಆಧಾರ ಮಾಡುವುದಕ್ಕೆ ಆಗುವುದಿಲ್ಲ ಎಂಬುದು ನಿಮಗೂ ಗೊತ್ತು. ಪತ್ರಿಕೆಯವರನ್ನು ಸಿ.ಎಲ್.ಪಿ. ಸಭೆಯೊಳಗೆ ಕರದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಈ ರೀತಿಯಲ್ಲಿ ಹೇಳಿದರೆ ನಾಳೆಯಿಂದ ಪತ್ರಿಕೆಯವರು ನೀವು ಹೇಳಿದ ಒಂದು ಶಬ್ಧವನ್ನೂ ಬರೆಯುವುದಿಲ್ಲ. ಏಕೆಂದರೆ ಮಾಧ್ಯಮಕ್ಕೆ ಒಂದು ಗೌರವ ಇದೆ. ಒಂದು ಜವಾಬ್ದಾರಿ ಇದೆ. ಈ ನಾಡಿನ ಜನರಿಗೆ ಸತ್ಯ ತಿಳಿಸಿದರೆ ಅವು ಯಾವುವು ಸರಿ ಇಲ್ಲವೆಂದು ನೀವು ಹೇಳಿದರೆ.

ಶ್ರೀ ಆರ್.ವಿ. ದೇಶಪಾಂಡೆ : ಶಾಸಕಾಂಗ ಪಕ್ಷದ ಸಭೆ ನಡೆದಿರುವುದು ನಿಜ. ಆದರೆ ಪ್ರೆಸ್‌ನವರನ್ನು ನಾವು ಕರೆದಿಲ್ಲ. ಪ್ರೆಸ್‌ನವರನ್ನು ನಾವು ಕರೆದಾಗ ಮಾತ್ರ ಅವರು ಬರುತ್ತಾರೆ. ನಮ್ಮ ಶಾಸಕಾಂಗ ಪಕ್ಷದ ಸಭೆ ನಡೆದಾಗ ಪ್ರೆಸ್‌ನವರು ಎಲ್ಲಿದ್ದರು, ಯಾರು ಇದ್ದರು ಅಲ್ಲಿ,' ಒಂದ್ನಾಲ್ಕು ಫೋಟೋಗ್ರಾ ಫರ್‌ಗಳು ಒಂದು ಫೋಟೋ ತೆಗೆದುಕೊಂಡು ಹೋಗುತ್ತಾರೆ, There is nobody.

ಅದನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಇದನ್ನೆಲ್ಲಾ ಕೇವಲ ಊಹಾಪೋಹ ಮಾಡಿ ಬರೆದಿದ್ದಾರೆ ನಿಜ. ಅದನ್ನು ಮೊದಲಿಂದಲೂ ಓದುತ್ತಿದ್ದೇವೆ. ಆದರೆ ನಿಜವಾಗಿಯೂ ಅಲ್ಲಿ ಮಾನ್ಯ ಸಿದ್ಧರಾಮಯ್ಯನವರು ಬಜೆಟ್ ಮಂಡಿಸಿದ ಬಗ್ಗೆ ಚರ್ಚೆಯಾಗಿಲ್ಲ. ಅವರು ತರಾಟೆಗೆ ಹೋಗುವ ಪ್ರಶ್ನೆಯೇ ಇಲ್ಲ. We were all present there. ಆದುದರಿಂದ ದಯಮಾಡಿ ತಮ್ಮ ಗಮನಕ್ಕಷ್ಟೇ ಈ ವಿಚಾರವನ್ನು ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಜೆಟ್‌ನಲ್ಲಿ ಸಿದ್ಧರಾಮಯ್ಯನವರು ಏನು ಹೇಳಿದ್ದಾರೋ ಅದನ್ನಾದರೂ ತಾವು ಒಪ್ಪಿಕೊಳ್ಳುತ್ತೀರಲ್ಲವೋ?

ಶ್ರೀ ಆರ್.ವಿ. ದೇಶಪಾಂಡೆ : ಹೌದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಣಕಾಸಿನ ಸಚಿವರಾದ ಸಿದ್ಧರಾಮಯ್ಯನವರು ಬಜೆಟ್‌ನಲ್ಲಿ ಏನು ಹೇಳಿದ್ದಾರೆಂದರೆ ಕಾಲಮಿತಿ ಹಾಗೂ ಮಿತಿಮೀರಿದ ನಿರ್ಮಾಣ ವೆಚ್ಚಗಳು ರಾಜ್ಯದ ಅಭಿವೃದ್ಧಿಗೆ ಮಾರಕ ಎಂದು ಹೇಳಿದ್ದರು. ಸನ್ಮಾನ್ಯ ರಮೇಶ್‌ಕುಮಾರ್ ಹೇಳಿದ್ದರಿಂದ ನಾನು ಇನ್ನು ಮಿಕ್ಕಿದ್ದನ್ನೆಲ್ಲಾ ಪಕ್ಕಕ್ಕೆ ಇಟ್ಟುಬಿಟ್ಟೆ. ಏಕೆಂದರೆ ಸಾರ್ ಅನುಭವ ಬೇಕು ಸಾರ್ ರಾಜಕಾರಣಕ್ಕೆ, ರಮೇಶ್‌ಕುಮಾರ್‌ರವರೇ ಕಂತು ಕಂತಿನಲ್ಲಿ ಹೇಳಿ ಎಂದು ನೀವು ಪ್ರಾರಂಭದಲ್ಲಿಯೇ ಹೇಳಿದ್ದರೆ ಅನೇಕ ವಿಷಯಗಳನ್ನು ನಾನು ಪಕ್ಕಕ್ಕೆ ತೆಗೆದು ಇಟ್ಟುಬಿಡುತ್ತಿದ್ದೆ. "ಕಾಲಮಿತಿ ಹಾಗೂ ಮಿತಿಮೀರಿದ ನಿರ್ಮಾಣ ವೆಚ್ಚಗಳು ರಾಜ್ಯದ ಅಭಿವೃದ್ಧಿಗೆ ಮಾರಕ ಎಂದು ಬಜೆಟ್ ಪುಸ್ತಕದಲ್ಲಿ ಸಿದ್ಧರಾಮಯ್ಯನವರು ಹೇಳಿದ್ದಾರೆ" ಯಾರು ಸ್ವಾಮಿ, ಈ ಒಂದು ಜವಾಬ್ದಾರಿಯನ್ನು ಹೊತ್ತಿದ್ದವರು? ಈಗಿನ ಮುಖ್ಯಮಂತ್ರಿ ಸನ್ಮಾನ್ಯ ಧರ್ಮಸಿಂಗ್‌ರವರು ಆಗ ಲೋಕೋಪಯೋಗಿ ಇಲಾಖಾ ಸಚಿವರಾಗಿದ್ದರು. ಯಾರ ಮೇಲೆ ಹಾಕುತ್ತೀರಿ ಜವಾಬ್ದಾರಿಯನ್ನು? ಇಂಥವರ ನಾಯಕತ್ವದಲ್ಲಿ ನೀವು ಇದ್ದೀರಿ ತಾನೇ? ನಾನು ಕೇಳುತ್ತೇನೆ, ಸಿದ್ಧರಾಮಯ್ಯನವರೇ, ನೀವು ಉಳಿತಾಯ ಬಜೆಟ್ ಮಾಡಿದ್ದೀರಿ, ನೀವು ಆತ್ಮಸಾಕ್ಷಿಯಾಗಿ ಹೇಳುತ್ತೀರ? ನೂರಕ್ಕೆ ನೂರರಷ್ಟು ಇದನ್ನು ಕಾರ್ಯರೂಪಕ್ಕೆ ತರುತ್ತೇನೆ ಎಂದು. ಅದಕ್ಕೆ ಬೇಕಾದಂಥ ಆರ್ಥಿಕ ಪರಿಸ್ಥಿತಿ ಇದೆಯೇ? ಈ ಮಾತನ್ನು ಸನ್ಮಾನ್ಯ ಹಿಂದಿನ ಮುಖ್ಯಮಂತ್ರಿ ನಾಲ್ಕೂವರೆ ವರ್ಷಗಳಲ್ಲಿ ಅಧಿಕಾರದಲ್ಲಿದ್ದ ಕೃಷ್ಣಾರವರು ಏನು ಹೇಳಿದರು, ಏನಾಯಿತು ಎಂಬ ಬಗ್ಗೆ ಎಲ್ಲಾ ಅಂಕಿ ಅಂಶಗಳು ಇವೆ. ಇವೊತ್ತು ನಾವು ಚರ್ಚೆ ಮಾಡಬೇಕಾಗಿರುವುದು ಸಿದ್ಧರಾಮಯ್ಯನವರ ಬಜೆಟ್ ಮೇಲೆ ಅಲ್ಲವೇ ಅಲ್ಲ. ಹಿಂದೆ ಇದ್ದ ಬಜೆಟ್ ಏನಾಯಿತು? ಇವರೇನು ಮಾಡುವುದಕ್ಕೆ ಹೊರಟಿದ್ದಾರೆ ಎಂಬ ಬಗ್ಗೆ ಇವೆರಡನ್ನೂ ಇಟ್ಟುಕೊಂಡು ತಾಳೆ ಮಾಡಿ ನೋಡಬೇಕಾಗುತ್ತದೆ. ಅದಕ್ಕಾಗಿ ನಾನು ಆ ಮಾತನ್ನು ಇವೊತ್ತು ಹೇಳುತ್ತಿದ್ದೇನೆ. ಸಾರ್ವಜನಿಕ ಹೂಡಿಕೆ ಪ್ರಮಾಣ ತೀರ ಕಡಿಮೆಯಾಗಿದೆಯೆಂದು ಹೇಳಿದ್ದೀರಿ. ಆರ್ಥಿಕ ಸುಧಾರಣೆಯ ಫಲಶೃತಿ ರೈತರಿಗೆ ತಲುಪಿಲ್ಲವೆಂದು ನೀವು ಒಪ್ಪಿಕೊಂಡಿದ್ದೀರಿ. ರೈತರ ಆರ್ಥಿಕ ಸುಧಾರಣೆ ಮಾಡಿ ಈ ಫಲಶ್ರುತಿಗೆ ತಲುಪಿಸುವುದಕ್ಕೆ ವಿಫಲವಾದಂತಹ ಕಾಂಗ್ರೆಸ್ ಸರ್ಕಾರದೊಂದಿಗೆ ಯಾವ ರೀತಿ ಹೊಂದಾಣಿಕೆ ಮಾಡುತ್ತೀರಿ? ಈ ಎಲ್ಲಾ ಪ್ರಶ್ನೆಗಳಿಗೂ ಸಹ ತಾವು ಉತ್ತರವನ್ನು ಕೊಡಬೇಕಾಗುತ್ತದೆ. ತಮ್ಮ ಬಜೆಟ್‌ನಲ್ಲಿ 72.83 ಕೋಟಿ ರೂಪಾಯಿ ಸರ್‌ಪ್ಲಸ್ ಎಂದು ಹೇಳಿ ಬೆನ್ನು ತಟ್ಟಿಕೊಂಡರು. ಅದಕ್ಕೆ ನಾನು ಪ್ರಾರಂಭದಲ್ಲಿ ಹೇಳಿದ್ದು, ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಒಂದು ವೈಟ್ ಪೇಪರ್ ಹೊರಡಿಸಿ, ಆಗ ನೀವು ಎಲ್ಲಿ ಇದ್ದೀರಿ ಎಂದು ನಿಮಗೆ ಗೊತ್ತಾಗುತ್ತದೆ. ಮತ್ತು ನಾಡಿನ ಜನತೆಗೂ ಗೊತ್ತಾಗುತ್ತದೆ. 2003 ಮತ್ತು 2004ರಲ್ಲಿ ವಿವಿಧ ಭಾಗಗಳಿಗೆ

ನಿಗದಿಪಡಿಸಿದಂತಹ ರಾಜಸ್ವದ ಕೊರತೆ 1318.44 ಕೋಟಿ ರೂಪಾಯಿ ಇತ್ತು. ಅದನ್ನು ನೀವು ಹೇಳಿರುವುದು. ಆದರೆ ಈ ವರ್ಷದ ಪ್ರಾರಂಭದ ಶಿಲ್ಕು ಪರಿಶೀಲನೆ ಮಾಡಿದಾಗ ಅಲ್ಲಿ ಕೊರತೆ ತೋರಿಸಲಿಲ್ಲ. ಅಲ್ಲಿ 400 ಕೋಟಿ 79 ಲಕ್ಷ ರೂಪಾಯಿ ಎಂದು ಬರೆದುಕೊಂಡಿರಿ. ಅದು ಓಪನಿಂಗ್ ಬ್ಯಾಲೆನ್ಸ್. ಎಂದರೆ ಏನರ್ಥ 2003–2004 ರಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಿದಂತಹ ಹಣ 918 ಕೋಟಿ ರೂಪಾಯಿಯನ್ನು ನೀವು ವಿನಿಯೋಗ ಮಾಡಲಿಲ್ಲ. ಇವತ್ತು ನೀವು ಏನಾದರೂ ಸರ್‌ಪ್ಲಸ್ ಬಜೆಟ್ ಇದೆ ಎಂದು ಈ ಅಂಕಿಅಂಶ ತೋರಿಸಿದ್ದಿರಿ, ಅದಕ್ಕೆ ಕಾರಣ ಹೋದಸಾರಿ ನೀವೇನು ಅಲೋಕೇಷನ್ ಮಾಡಿ ಹಣವನ್ನು ತೆಗೆದಿಟ್ಟರೆ ಅದರಲ್ಲಿ 918 ಕೋಟಿ ರೂಪಾಯಿ ನೀವು ಖರ್ಚು ಮಾಡಲೇ ಇಲ್ಲ. ನೀವೇನು ಹೇಳಬಹುದು ಇದು ಚುನಾವಣೆ ವರ್ಷ ಹಾಗೂ ಬರಗಾಲ ಇದ್ದಿದ್ದಕ್ಕೋಸ್ಕರ ಎಂದು ಏನೇನೋ ಕಾರಣ ಹೇಳಿದಿರಿ. ಆದರೆ ಇವತ್ತು ಎಷ್ಟು Rosy ಫಿಗರ್‌ಸ್ನನ್ನು ಹಣಕಾಸಿನ ಸಚಿವರಾಗಿ ನೀವು ಕೊಟ್ಟಿದ್ದೀರಿ ಎಂದರೆ 2003–04ರಲ್ಲಿ 8 ತಿಂಗಳ ಈ ಬಜೆಟ್‌ನಲ್ಲಿ ಎಂದರೆ ಹೋದವರ್ಷ ಮಾರ್ಚ್ ಎಂಡ್‌ಗೆ ಮೂರು ಬಾರಿ ಬಜೆಟ್ ಅಲೋಕೇಷನ್ ಮಾಡಿದ್ದನ್ನು ಕಟ್ ಮಾಡುತ್ತೀರಿ. ಒಂದು ಬಾರಿ 20 ಪರ್ಸೆಂಟ್ ಒಂದು ಬಾರಿ 15 ಪರ್ಸೆಂಟ್ ಹಾಗೂ ಜನವರಿ ಫೆಬ್ರವರಿಯಲ್ಲಿ 5 ಪರ್ಸೆಂಟ್ ಎಂದರೆ ಒಟ್ಟು ಒಂದು ನೂರು ರೂಪಾಯಿ ಯೋಜನೆಗೆ ತಗೆದಿಟ್ಟರೆ ಅದರಲ್ಲಿ ನೀವು 40 ರೂಪಾಯಿ ಕಟ್ ಮಾಡಿ ಉಪಯೋಗವಾಗಿದ್ದು 60 ರೂಪಾಯಿ. ನೂರು ಪರ್ಸೆಂಟ್ ಖರ್ಚಾಗುವ ಕಡೆ ನೀವು ಉಪಯೋಗ ಮಾಡಿದ್ದು 60 ಪರ್ಸೆಂಟ್. ಇದು ಏನಾಯಿತು? ಬಜೆಟ್ ಅಲೋಕೇಷನ್ ಆದಾಗ ಕಾಮಗಾರಿಗಳಿಗೆ ಆ್ಯಕ್ಷನ್ ಪ್ಲಾನ್ ಸಿದ್ದತೆ ಮಾಡುತ್ತಾರೆ. ಅದು ಸಿದ್ದತೆ ಆದಮೇಲೆ ಜೂನ್, ಜುಲೈ, ಆಗಸ್ಟ್‌ನಲ್ಲಿ ಸಂಬಂಧಪಟ್ಟ ಗುತ್ತಿಗೆದಾರರು ಕೆಲಸ ಪ್ರಾರಂಭ ಮಾಡುತ್ತಾರೆ. ಅದಕ್ಕೆ ನಾಲ್ಕು ಹಂತದಲ್ಲಿ ಹಣವನ್ನು ಬಿಡುಗಡೆ ಮಾಡುತ್ತೀರಿ. ಅದರಲ್ಲಿ 40 ಪರ್ಸೆಂಟ್ ಹಣವನ್ನು ಕಟ್ ಮಾಡಿದರೆ 2003–04ರಲ್ಲಿ ಹಣವನ್ನು ಬಿಡುಗಡೆ ಮಾಡದೆ ಇದ್ದರೆ ಅಭಿವೃದ್ಧಿ ಕಾರ್ಯ ಹೇಗಾಗುತ್ತದೆ? ಯಾವುದೋ ಒಂದು ಕಾಮಗಾರಿ ನಡೆಯುತ್ತಿದ್ದರೆ, ಅದಕ್ಕೆ ನೀವು 20 ಪರ್ಸೆಂಟ್, 15 ಪರ್ಸೆಂಟ್ 5 ಪರ್ಸೆಂಟ್ ಎಂದು ನೀವು ಕಟ್ ಮಾಡಿದರೆ ಆ ಕಾಮಗಾರಿ ಪೂರ್ಣವಾಗುವುದಕ್ಕೆ ಸಾಧ್ಯವೇ? ಏತಕ್ಕಾಗಿ ಕಟ್ ಮಾಡಿದಿರಿ ಎಂದು ಹೇಳಿ. ಬಜೆಟ್ ಅಲೋಕೇಷನ್ ಇದ್ದದ್ದು ಅದನ್ನು ಕಟ್ ಮಾಡಿದ್ದು ಕಾರಣವೇನು? ಕಟ್ ಇಂಪ್ರೋಜ್ ಯಾವುದಕ್ಕೆ ಮಾಡಿದಿರಿ? ನೀರಾವರಿಗೆ ಪಿಡಬ್ಲ್ಯೂಡಿ, ಗ್ರಾಮೀಣಾಭಿವೃದ್ಧಿ 'ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಗಳಿಗೆ ಕಟ್ ಮಾಡಿದಿರಿ. ಈಗತಾನೆ ನಮ್ಮ ಉಪನಾಯಕರು ಹೇಳುತ್ತಿದ್ದರು, ರಸ್ತೆಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದಂತಹ ಸುಮಾರು 222 ಕೋಟಿ ರೂಪಾಯಿಗಳ ಹಣವನ್ನು ನೀವು ಡೈವರ್ಟ್ ಮಾಡಿದಿರಿ. ಅದನ್ನು ನೀವು ಸಂಬಳ ಸಾರಿಗೆಗೆ ಉಪಯೋಗ ಮಾಡಿದಿರಿ. 60 ಪರ್ಸೆಂಟ್ ಬಿಡುಗಡೆ ಮಾಡಿದರು. ಮಾನ್ಯ ಸಿದ್ಧರಾಮಯ್ಯನವರು 6ನೇ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಸುಮಾರು 40 ರಿಂದ 45 ಪರ್ಸೆಂಟ್ ಎಸ್ಟಾಬ್ಲಿಷ್‌ಮೆಂಟ್‌ಗೆ ಖರ್ಚಾಗಿದೆ. ಈ 60 ಪರ್ಸೆಂಟ್‌ನಲ್ಲಿ 15 ಪರ್ಸೆಂಟ್ ಅಭಿವೃದ್ಧಿಗಾಗಿ ನಾನು ಹೇಳಲಿಲ್ಲ. ಮಾನ್ಯ ವಿಶ್ವನಾಥ್ ನವರು ಅನುಭವ ಇದ್ದಂತಹವರು ಇವತ್ತು ಈ ಮನೆಯಲ್ಲಿ ಇರಬೇಕಾಗಿತ್ತು. ಅವರು ಯಾವುದೋ ಕಾರಣಕ್ಕೆ ಹಿನ್ನೆಡೆಯಾದರು. ಅವರು ಏನು ಹೇಳಿದರು ನಮ್ಮ ರಾಜ್ಯದ ಹಿಂದಿನ ಮುಖ್ಯಮಂತ್ರಿ ನಂಬರ್ ಒನ್ ಮುಖ್ಯಮಂತ್ರಿ ಎಂದು ಹೊಗಳಿ ಪತ್ರಿಕಾ ಸ್ನೇಹಿತರು ಸರ್ಟಿಫಿಕೇಟ್ ಕೊಟ್ಟರು. ಯಾವ ಮುಖ್ಯಮಂತ್ರಿಗಳು 75 ಪರ್ಸೆಂಟ್ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಖರ್ಚು ಮಾಡಿ 20

ರಿಂದ 25 ಪರ್ಸೆಂಟ್ ಅಭಿವೃದ್ಧಿಗಾಗಿ ಖರ್ಚು ಮಾಡಿದಂತಹವರು ನಂಬರ್ ಒನ್ ಮುಖ್ಯಮಂತ್ರಿಯಾಗುವುದಕ್ಕೆ ಹೇಗೆ ಸಾಧ್ಯವೆಂದು ಪ್ರಶ್ನೆಯನ್ನು ಕೇಳುವ ಮಟ್ಟಕ್ಕೆ ಹಿಂದಿನ ಆಡಳಿತ ನಡೆದಿದೆ. ಮಾನ್ಯ ಎಸ್.ಎಂ. ಕೃಷ್ಣರವರು ಬಜೆಟ್ ಭಾಷಣದಲ್ಲಿ ಪ್ರಾರಂಭದಲ್ಲಿ ಉತ್ತರನ ಪೌರುಷದ ಮಾತನ್ನು ಹೇಳಿದರು. "we will wipe out deficit gradually." ಎಂದು ಅವರು ಹೇಳಿದಂತಹ ಮಾತು. 1998–99 ರಲ್ಲಿ ಅವರು ಅಧಿಕಾರ ವಹಿಸಿಕೊಂಡಾಗ ವಿತ್ತೀಯ ಕೊರತೆ ಶೇಕಡ 3.54 ಇತ್ತು. 2003–04ರಲ್ಲಿ ನೀವು ಬರುವಾಗ ವಿತ್ತೀಯ ಕೊರತೆ 4.26 ಆಯಿತು. ಅಂದರೆ ಅದು ಏರಿಕೆಯಾಯಿತು. ಅದು 0.72 ವಿತ್ತೀಯ ಕೊರತೆ ಹೆಚ್ಚಾಯಿತು. ನಾನು ಹೇಳಲಿಲ್ಲ. ನಮ್ಮ ಹಣಕಾಸಿನ ಸಚಿವರಾದಂತಹ ಮಾನ್ಯ ಸಿದ್ಧರಾಮಯ್ಯನವರು ಈ ಅಂಕಿಅಂಶಗಳನ್ನು ಬಜೆಟ್‌ನಲ್ಲಿ ನಮೂದು ಮಾಡಿದ್ದಾರೆ. Instead of wiping out deficit it has increased. ನೀವು ಹೇಳಬಹುದು ಬರಗಾಲ ಮೂರು ವರ್ಷ ಇತ್ತು ಆ ಕಾರಣಕ್ಕೆ ಆಯಿತು ಎಂದು. ಬಹುಶಃ ನೀವು ಉತ್ತರ ಕೊಡುವಾಗ ಆದರೆ ನೀವು ಹೇಳುವುದಿಲ್ಲ ಆದರೂ ಹೇಳಬಹುದು. ಆದರೆ ನಮ್ಮ ಸಾಲ ಎಷ್ಟಿತ್ತು 1998–99ರಲ್ಲಿ ನೀವು ಹೇಳುವ ಪ್ರಕಾರ 12, 465 ಕೋಟಿ ರೂಪಾಯಿ ಇತ್ತು. ಈಗ 30, 180 ಕೋಟಿ ರೂಪಾಯಿಗೆ ಏರಿದೆ ಎಂದು ಹೇಳಿದ್ದೀರಿ. ಸಾಲದ ಏರಿಕೆ 17,723 ಕೋಟಿ ರೂಪಾಯಿ ಎಂದರೆ ಮೂರು ಪಟ್ಟು ಹೆಚ್ಚು ಸಾಲ. ಎಲ್ಲಿಗೆ ಹೋಯಿತು ಅಭಿವೃದ್ಧಿ? ಎಲ್ಲಿ ಖರ್ಚು ಮಾಡಿದಿರಿ? ಬರ ಪರಿಹಾರಕ್ಕೆ ಖರ್ಚು ಮಾಡಿದಿರಾ? ಇಲ್ಲ. ಏಳೂವರೆಯಿಂದ ಎಂಟು ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಹಾಗೂ 900 ಕೋಟಿ ರೂಪಾಯಿ ದುಡ್ಡನ್ನು ಕೇಂದ್ರ ಸರ್ಕಾರ ಕೊಟ್ಟಿತ್ತು. ಅದಕ್ಕೆ ಇದು ಖರ್ಚಾಗಲಿಲ್ಲ. ಅಂದರೆ ಈ 17,723 ಕೋಟಿ ರೂಪಾಯಿ ಹೆಚ್ಚು ಸಾಲ ಎಂದರೆ ನಾಲ್ಕೂವರೆ ವರ್ಷದಲ್ಲಿ ಅವರೇಜ್ ಒಂದು ವರ್ಷದಲ್ಲಿ 3900 ಕೋಟಿ ರೂಪಾಯಿ ಆಯಿತು. ಏನು ಅಭಿವೃದ್ಧಿ ಮಾಡಿದ್ದೀರಾ? ರಾಜ್ಯದಲ್ಲಿ ಏನು ನಾವು ನೋಡುವಂತಹ ಅಭಿವೃದ್ಧಿ ಕಾಣುತ್ತದೆ? ಗುಂಡಿ ಬಿದ್ದ ರಸ್ತೆ. ಸ್ವಾತಂತ್ರ್ಯ ಬಂದು 57 ವರ್ಷವಾದರೂ ಡಾಂಬರೀಕರಣ ಆಗದೆ ನಮ್ಮ ಹರಿಜನ ಗಿರಿಜನ ಬಸ್ತಿಗಳು ರಸ್ತೆಗಳನ್ನು ನೀವು ಉದ್ಧಾರ ಮಾಡುವುದಕ್ಕಾಗಲಿಲ್ಲ. ಅವರಿಗೆ ಅನುಕೂಲ ಮಾಡಿಕೊಡಲಿಲ್ಲ. ಎಲ್ಲಿ ಹೋಯಿತು? ಈ ದುಡ್ಡು?-ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರನ್ನು ಕರೆದುಕೊಂಡು ಬಂದು ಆಡಳಿತ ಸುಧಾರಣೆ ಆಯೋಗದ ಅಧ್ಯಕ್ಷರನ್ನಾಗಿ ಮಾಡಿ ವರದಿ ತರಿಸಿಕೊಂಡಿರಿ. ಹೊಸದಾಗಿ ಕೆಲವು ಶಿಕ್ಷಕರನ್ನು ಬಿಟ್ಟರೆ ಬೇರೆ ಯಾರನ್ನೂ ನೀವು ನೇಮಕ ಮಾಡಲಿಲ್ಲ. 25,000 ಖಾಲಿ ಹುದ್ದೆಗಳನ್ನು ತಾವು ರದ್ದು ಮಾಡಿದಿರಿ. ಹೀಗಿದ್ದೂ ಸಹ 1998–99ರಲ್ಲಿ ವೇತನಕ್ಕಾಗಿ 4,900 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಿದರೆ 2003–04ರಲ್ಲಿ 8.700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅದು 4,900 ರಿಂದ 8,700 ಕೋಟಿ ರೂಪಾಯಿಗೆ ಬಂದಿದೆ ಅಂದರೆ ನೀವೇ ಬಜೆಟ್ ಭಾಷಣದಲ್ಲಿ ಹೇಳಿರುವ ಪ್ರಕಾರ 77.6 ಪರ್ಸೆಂಟ್ ನೀವು ವೇತನಕ್ಕೆ ಜಾಸ್ತಿ ಖರ್ಚು ಮಾಡಿದ್ದೀರಿ. ಹಾಗಾದರೆ ಯಾವರೀತಿ ಆಡಳಿತ ಸುಧಾರಣೆಯಾಯಿತು? ಮಾನ್ಯ ಹಣಕಾಸಿನ ಸಚಿವರು ಈ ಬಜೆಟ್ ಭಾಷಣದಲ್ಲಿ ಪುಟ ಸಂಖ್ಯೆ 7ರಲ್ಲಿ ಅಭಿವೃದ್ಧಿಗೆ ಧಕ್ಕೆ ತಂದಿರುವ ಅಂಶಗಳು ಯಾವುದು ಎಂದು ಅಭ್ಯಾಸ ಮಾಡಿ ಅಧ್ಯಯನ ಮಾಡಿ ಹೇಳಿದ್ದೀರಿ. ಆಯವ್ಯಯೇತರ ಎತ್ತುವಳಿಗಳು, ನಿಯಂತ್ರಿಸದೆ ಇರುವ ಆಡಳಿತ ಮತ್ತು ಸಿಬ್ಬಂದಿ ವೆಚ್ಚಗಳು, ಸೂಕ್ತ ಗುರಿಯಿಲ್ಲದ ಸಹಾಯಧನಗಳು, ಕಾಲಮಿತಿ ಮತ್ತು ಮಿತಿಮೀರಿದ ನಿರ್ಮಾಣ ವೆಚ್ಚಗಳು, ತೆರಿಗೆ ಹಾಗೂ ತೆರಿಗೆಯೇತರ ರಾಜಸ್ವ ಸಂಗ್ರಹದಲ್ಲಿ

ಕುಸಿತ ಮತ್ತು ಬಳಕೆದಾರರ ಶುಲ್ಕ ವಸೂಲಿ ಬಾಬ್ತಿನಲ್ಲಿ ಗಣನೀಯ ಸೋರಿಕೆ. ನಾನು ಕೇಳುತ್ತೇನೆ, ಮಾನ್ಯ ಸಿದ್ಧರಾಮಯ್ಯನವರು ಹಣಕಾಸು ಸಚಿವರಾಗಿ ಎರಡು ತಿಂಗಳಾಯಿತು. ನೀವು ಈ ಕೊರತೆಗಳ ಕಾರಣಗಳನ್ನು ಹೇಳಿದ್ದೀರಲ್ಲ ಇದನ್ನು ಸರಿಪಡಿಸುವುದಕ್ಕೆ ನಾಲ್ಕು ಹೆಜ್ಜೆ ಇಟ್ಟಿರುವಂತಹ ಒಂದೆರಡು ಅಂಶ ಇದ್ದರೆ ತಮ್ಮ ಭಾಷಣದಲ್ಲಿ ಹೇಳಿ. ಏಕೆಂದರೆ ನಿಮಗೆ ಗೊತ್ತಿದೆ, ನೀವು ಅಲ್ಲಿ ಹೆಚ್ಚು ದಿವಸ ಇರುವುದಿಲ್ಲ. ಮತ್ತೆ ನೀವು ಚುನಾವಣೆಗೆ ಹೋಗಬೇಕೆಂದು ಗೊತ್ತಿರಬೇಕಾದರೆ ಒಂದೊಂದು ದಿವಸವನ್ನು ಗಮನಿಸಬೇಕು. ನಾಳೆ ಏನೆಂಬುದು ಗೊತ್ತಿಲ್ಲ. ನೀವು ಏನೋ ಮಾಡಿ ಮುಗಿಸಬೇಕು ಎಂದು ಅಭಿವೃದ್ಧಿ ಕಡೆ ಗಮನ ಕೊಡದೆ ಇದ್ದರೆ ತರಾತುರಿಯಲ್ಲಿ ಆಸೆಯೆಲ್ಲಾ ಆಸೆಯಾಗಿಯೇ ಉಳಿಯುತ್ತದೆಯೋ ಹೊರತು, ಅದು ರಾಜ್ಯದ ಜನರಿಗೆ ತಲುಪುವುದಿಲ್ಲವೆನ್ನುವ ದೃಷ್ಟಿಯಿಂದ ನೀವು ಏನು ಮಾಡಿದ್ದೀರಿ ಎನ್ನುವುದುನ್ನು ತಾವು ಹೇಳಿ. ಮಾನ್ಯ ಸಿದ್ಧರಾಮಯ್ಯನವರೇ, ನಮಗೆ ಸಂಕಟವಾಗುತ್ತದೆ. ಈ ವಿಷಯ ಎಲ್ಲರಿಗೂ ಗೊತ್ತಿದೆ, ಮಾರ್ಚ್ 31ನೇ ದಿವಸವೆಂದರೆ, ವರ್ಷದ ಕೊನೆಯ ಎರಡು, ಮೂರು ತಿಂಗಳುಗಳಲ್ಲಿ ಆದಂತಹ ಕಾಮಗಾರಿಗಳ ಬಗ್ಗೆ, ರಾತ್ರಿ, ಹಗಲು ನಾನು ಪ್ರಾಮಾಣಿಕವಾದಂತಹ ಬಿಲ್‌ಗಳ ಬಗ್ಗೆ ಹೇಳುವುದು. ಇಲ್ಲಿ ಬಿಲ್‌ಗಳನ್ನು ಮಾಡಿ ಹಣದ ಗಂಟನ್ನು ಹೊಡೆಯುವಂತಹ ವ್ಯವಸ್ಥೇ ಬೇರೆ. ಆದರೆ ಮಾರ್ಚ್ 31 ಕೊನೆಯ ದಿವಸ, ಟ್ರೆಜರಿಯ ಡೇಟ್ ಅನ್ನು ಯಾವಾಗ ಕ್ಲೋಸ್ ಮಾಡುತ್ತೇವೆಂದರೆ ಏಪ್ರಿಲ್ 5,6, ಹಳೆಯ ಡೇಟ್‌ಗಳನ್ನು ಹಾಕಿ, ಬಿಲ್‌ಗಳನ್ನು ಮಾಡಿ, ಎಲ್ಲರಿಗೂ ಪೇಮೆಂಟ್ ಮಾಡುವಂತಹ ವ್ಯವಸ್ಥೆ. ತಾವು ಇದನ್ನು ತೆಗೆಸಿನೋಡಿ, ಈ ವಿಚಾರಗಳು ನಮ್ಮ ಶಾಸಕರುಗಳಿಗೂ ಗೊತ್ತಿರಲಿ, ಈ ಸಾರಿ ಮಾರ್ಚ್ 31 ರಂದು ಟ್ರೆಜರಿಯ ಬಾಗಿಲು ಹಾಕಿತ್ತು. ಅಗ ಬಿಲ್ ಮಾಡುವ ಪ್ರಶ್ನೆಯೂ ಇಲ್ಲ. ಹಣವನ್ನು ಡ್ರಾ ಮಾಡುವ ಪ್ರಶ್ನೆಯೂ ಇಲ್ಲ. ಇಷ್ಟೆಲ್ಲಾ ಆದಮೇಲೆ ಇವತ್ತು ನಿಮಗೆ ಹಣಕಾಸಿನ ಕೊರತೆ, ಫೆಬ್ರವರಿ ತಿಂಗಳಿನಿಂದ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದಂದಿನಿಂದ ಇವತ್ತಿನವರೆಗೂ ಅಭಿವೃದ್ಧಿ ಕಾರ್ಯಗಳು ಆಗಲಿಲ್ಲವೆಂದು, ಆಗಿನ ಗೃಹ ಮಂತ್ರಿಗಳಾದ ಮತ್ತು ಇವತ್ತಿನ ನೀರಾವರಿ ಸಚಿವರು ಆಗಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಒಂದು ಕಡೆ ಹೇಳಿದ್ದಾರೆ. ಆದರೆ ಇವತ್ತು ಟ್ರೆಜರಿ ಬ್ಯಾನ್ ಆಗಿದೆ, ನನ್ನ ಪ್ರಕಾರ ಸುಮಾರು ಎರಡೂವರೆ ಸಾವಿರ ಕೋಟಿ ರೂಪಾಯಿಗಳು, ಈಗ ಆಗಿರುವಂತಹ ಕಾಮಗಾರಿಗಳ ಬಾಕಿ ಇದೆ. ಅವು ಪಿ.ಡಬ್ಲ್ಯೂ.ಡಿ ನೀರಾವರಿ, ಜಿಲ್ಲಾ ಪಂಚಾಯತ್, ಇವುಗಳ ಅಂಕಿಅಂಶಗಳನ್ನು ನಾನು ಕೊಡುತ್ತೇನೆ. ಇನ್ನು ನಿಮ್ಮ ಬಜೆಟ್, ಬಹಳ ಜನ ಈ ಅಂಕಿ ಅಂಶಗಳನ್ನು ಯಾವ ಸ್ನೇಹಿತರುಗಳ ಜೊತೆ, ಯಾರನ್ನು ನೀವು ಕನ್ಸಲ್ಟ್ ಮಾಡುತ್ತಿರಾ, ಎನ್ನುವ ಬಗ್ಗೆ ನಾನು ನಮ್ಮ ಹುಡುಗರನ್ನು ಬಿಟ್ಟು ಗಮನಿಸಬೇಕೆಂದು ಕೊಂಡಿದ್ದೇನೆ. ಇದನ್ನು ಇಷ್ಟು ಬುದ್ಧಿವಂತಿಕೆಯಿಂದ ಈ ಬಜೆಟ್ ಪುಸ್ತಕದಲ್ಲಿ ಅಂಕಅಂಶಗಳನ್ನು ಮಾಡಿದ್ದೀರಿ. ಇಲ್ಲಿ ಉಳಿತಾಯವನ್ನು ಮಾಡಿ ತೋರಿಸುವಂಥಾದ್ದನ್ನು ಮಾಡಿದ್ದೀರಿ, ಆದರೆ ಆದದ್ದು ಏನು? ನೀರಾವರಿ ಯೋಜನೆಗೆ, ಯಾವುದಾದರೂ ನಾಲ್ಕೈದು ನೀರಾವರಿ ಯೋಜನೆಗಳನ್ನು ಈ ಬಾರಿ ಬಜೆಟ್‌ನಲ್ಲಿ ತೆಗೆದುಕೊಳ್ಳುವಂಥಾದ್ದು ನಿಮ್ಮ ಈ ಪುಸ್ತಕದಲ್ಲಿ ಕಾಣುತ್ತದೆಯೆ? ಒಂದು ಯೋಜನೆಯಾದರೂ ಇದೆಯಾ? ನಾವು ಹೊಸದಾಗಿ ಬಂದಿರುವಂಥ ಶಾಸಕರು ಜನರಿಗೆ ಹೇಗೆ ಮುಖವನ್ನು ತೋರಿಸುವುದು, ನಾವು ಅನೇಕ ಭರವಸೆಗಳನ್ನು ಅವರಿಗೆ ಕೊಟ್ಟುಕೊಂಡು ಇಲ್ಲಿಗೆ ಬಂದಿದ್ದೇವೆ. ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ 2003–04ರಲ್ಲಿ 3002.16 ಕೋಟಿ ರೂಪಾಯಿಗಳ ಬಜೆಟ್ ಅಲೊಕೇಷನ್ ಮಾಡಿದ್ದರು. ನೀವು ಈಗ

ಮಾಡಿರುವಂಥಾದ್ದು 3023.96 ಕೋಟಿ ರೂಪಾಯಿಗಳು. ಅಂದರೆ ಅವತ್ತಿನ ಬಜೆಟ್ ಅಲೋಕೇಷನ್ ಟೋಟಲ್ ಅನ್ನು ಲೆಕ್ಕ ಹಾಕಿದರೆ, 2003–04ರಲ್ಲಿ ಶೇ. 30.70 ಮಾಡಿದ್ದರೆ, ನೀವು ಈಗ 24.54 ಪರ್ಸೆಂಟ್ ಮಾಡಿದ್ದೀರಿ. ತಾವು ಈ ಅಂಶವನ್ನು ನೋಡಿ, ಇದರಿಂದ ನೀರಾವರಿ ಉದ್ಧಾರವಾಗುತ್ತದಾ? ನೀವು ಕೃಷ್ಣಾ ಮತ್ತು ಕಾವೇರಿ ಯೋಜನೆಗಳನ್ನು ಪೂರ್ಣ ಮಾಡುತ್ತೀರಾ? ಲೋನ್ ರೀಪೇಮೆಂಟ್‌ಗೆ 1,620 ಕೋಟಿ ರೂಪಾಯಿಗಳು ಆಗುತ್ತದೆ. ಈ ಪ್ರಮಾಣದಲ್ಲಿ ಹಣವನ್ನು ಕಟ್ಟಬೇಕು, ಅಂದರೆ ನೀವು ಮಾಡಿರುವಂತಹ ಅಲೊಕೇಷನ್ ದುಡ್ಡು ಎಲ್ಲಾ ನೀರಾವರಿ ಯೋಜನೆಗೆ ಹೋಗುತ್ತದಾ? ಇನ್ನು ಸಾರಿಗೆಗೆ 2003–04ರಲ್ಲಿ 1295.66 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಅಂದರೆ 13.25 ಪರ್ಸೆಂಟ್ ಆಗ ಇತ್ತು ಈಗ ನೀವು 1386.83 ಕೋಟಿ ರೂಪಾಯಿಗಳು, ಅಂದರೆ 11.25 ಪರ್ಸೆಂಟ್ ಇದೆ. ಅಂದರೆ ಇದು ಹೋದ ವರ್ಷಕ್ಕಿಂತ ಪರ್ಸೆಂಟ್‌ವೈಸ್ ಕಡಿಮೆಯಾಯಿತು, ಮತ್ತೆ ಕೃಷಿ ಮತ್ತು ಸಂಬಂಧಿತ ಸೇವೆಗಳಿಗೆ ಮತ್ತು ವಸತಿ ಮತ್ತು ನಗರಾಭಿವೃದ್ಧಿಗೆ, ಈ ಎರಡನ್ನೂ ಹೋಲಿಕೆ ಮಾಡಿ ತಾವು ನೋಡಬೇಕು. ಮಾನ್ಯ ಸಿದ್ದರಾಮಯ್ಯನವರೇ, ಇಲ್ಲಿ ನೀವು ಕೃಷಿಗೆ ಆದ್ಯತೆಯನ್ನು ಕೊಟ್ಟಿದ್ದೀರೋ, ಗ್ರಾಮೀಣಾಭಿವೃದ್ಧಿಗೆ ಆದ್ಯತೆಯನ್ನು ಕೊಟ್ಟಿದ್ದೀರೋ, ಅಥವಾ ನಗರದ ಕಡೆಗೆ ನಿಮ್ಮ ಕಣ್ಣು ಬಿದ್ದಿದೆಯೋ, ಎಂಬುದನ್ನು, ಇಲ್ಲಿ ನೀವು ಕೊಟ್ಟಿರುವಂತಹ ಅಂಕಿಅಂಶಗಳ ತಾಳೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ನಿಮ್ಮ ಬಜೆಟ್‌ನಲ್ಲಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ 833.40 ಕೋಟಿ ರೂಪಾಯಿಗಳು, ನೀವು ಇಟ್ಟರೆ, ಅದೇ ವಸತಿ ಮತ್ತು ನಗರಾಭಿವೃದ್ಧಿಗೆ 1252.38 ಕೋಟಿ ರೂಪಾಯಿಗಳನ್ನು ಅಲೋಕೇಷನ್ ಮಾಡಿದ್ದೀರಿ. ಇನ್ನು ಕೈಗಾರಿಕೆ ಮತ್ತು ಖಜನಿಗಳಿಗೆ 2003–04ರಲ್ಲಿ 165.77 ಕೋಟಿ ರೂಪಾಯಿಗಳು ಇದ್ದರೆ, ಈ ಬಾರಿ ಅದು 105.00 ಕೋಟಿ ರೂಪಾಯಿಗಳಿಗೆ ಇಳಿದಿದೆ. ಇನ್ನು ಪ್ರಮುಖವಾದಂತಹ ನೀರು ಸರಬರಾಜು ಹಾಗೂ ನೈರ್ಮಲ್ಯಕ್ಕೆ 703 ಕೋಟಿ 67 ಲಕ್ಷ ರೂಪಾಯಿಗಳ, ಅಂದರೆ 7.2 ಅವ್ಯರೇಜ್ 2003–04ರಲ್ಲಿ ಅಲೋಕೇಷನ್ ಅನ್ನು ಆಗ ಮಾಡಿದ್ದರೆ, ಈಗ 617 ಕೋಟಿ 2 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅಂದರೆ ಇದು 7.2 ಪರ್ಸೆಂಟ್‌ನಿಂದ 5.0 1 ಪರ್ಸೆಂಟ್‌ಗೆ ಇಳಿಯಿತು. ಸಮಾಜ ಕಲ್ಯಾಣದ ಬಗ್ಗೆ ಎಸ್.ಸಿ, ಎಸ್.ಟಿ. ಶಾಸಕರೆಲ್ಲಾ ಇದ್ದೀರಿ, ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಉದ್ಧಾರ ಮಾಡುವ ಬಗ್ಗೆ ಮಾತು ಆಡುತ್ತೇವೆ. ಆದರೆ ಈ ಬಜೆಟ್‌ನಲ್ಲಿ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಲಾಗಿದೆ. 2003–04ರಲ್ಲಿ 392.30 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ, ನೀವು ಈ ಸಾರಿ 377.31 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, 2003–04ರಲ್ಲಿ 4.01 ಪರ್ಸೆಂಟ್ ಇದ್ದರೆ, ಈಗ 3.06 ಪರ್ಸೆಂಟ್ ಇದೆ, ಇದು ಎಸ್.ಸಿ, ಎಸ್.ಟಿ.ಯವರಿಗೆ ಕೊಟ್ಟಿರುವಂತಹ ಹಣವಾಗಿದೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾವು ಈ ಸದನದಲ್ಲಿ ಒಟ್ಟು 224 ಜನ ಸದಸ್ಯರು ಇದ್ದೇವೆ, ಇದರಲ್ಲಿ 33 ಜನ ಸದಸ್ಯರು ಪರಿಶಿಷ್ಟ ಜಾತಿ ಈ ವರ್ಗದವರು ಮೀಸಲು ಸ್ಥಾನದಿಂದ ಗೆದ್ದು ಬರುವಂತಹ ವ್ಯವಸ್ಥೆ ಇದೆ. ಈ 33 ಸ್ಥಾನಗಳಲ್ಲಿ ನಮ್ಮ ಭಾರತೀಯ ಜನತಾ ಪಾರ್ಟಿಯಿಂದ 12 ಜನ ಸದಸ್ಯರು ಪರಿಶಿಷ್ಟ ಜಾತಿಗೆ ಸೇರಿದಂಥವರು ಆಯ್ಕೆಯಾಗಿ ಬಂದಿದ್ದಾರೆ, ಮತ್ತೆ ಪರಿಶಿಷ್ಟ ಪಂಗಡದವರಿಗೆ 2 ಸ್ಥಾನಗಳು ಇವೆ, ಆ ಸ್ಥಾನದಲ್ಲಿ ಒಂದು ಸ್ಥಾನವನ್ನು ಭಾರತೀಯ ಜನತಾ ಪಾರ್ಟಿಯ ವತಿಯಿಂದ, ಶಾಸಕರಾಗಿ ಆಯ್ಕೆಯಾಗಿ ಬರುವಂತಹ ಒಂದು ನಿಷ್ಠೆಯನ್ನು

ಈ ಜನ ತೋರಿಸಿದ್ದಾರೆ. ಇದನ್ನು ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಇವತ್ತಿನ ದಿವಸ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ಎದುರು ನೋಡುತ್ತಿರುವಂಥಾದ್ದು, ನ್ಯಾಯ ಮತ್ತು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡುವಂತಹ ಒಂದು ಪಕ್ಷ ಬಿ.ಜೆ.ಪಿ. ಕರ್ನಾಟಕದಲ್ಲಿ ಇದೆಯೆಂದು ತಿಳಿದಿದ್ದಾರೆ, ಹಾಗಾಗಿ ಇತರ ಪಕ್ಷಗಳಿಗಿಂತ ಭಾರತೀಯ ಜನತಾ ಪಾರ್ಟಿಯ ಪಕ್ಷದ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಗೆದ್ದಿರುವಂಥಾದ್ದು ಸಂಖ್ಯೆಯಲ್ಲಿ ಅಧಿಕವೆಂದು ಈ ಸಮಯದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕೊನೆಯ ಪಕ್ಷ ನಾನು ಈಗ ನಮ್ಮ ಅಧಿಕಾರಿಗಳನ್ನು ಕೇಳುತ್ತೇನೆ, ನಾವು ಯಾವ ಪ್ರಾವಿಜನ್ ಮಾಡಿಕೊಂಡು ಶೇಕಡ 18ರಷ್ಟು ಹಣವನ್ನು ಖರ್ಚು ಮಾಡುವಂಥಾದ್ದರ ಬಗ್ಗೆ ವಿವರಕ್ಕೆ ನಾವು ಕೈ ಹಾಕಿದರೆ, ಇಲ್ಲಿ ನಿಜವಾಗಿಯೂ ನಮ್ಮ ಅಧಿಕಾರಿಗಳ ಮನಸ್ಸಿನಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಕೊಡುವಂತಹ ಹಣವನ್ನು ಪ್ರಾಮಾಣಿಕವಾಗಿ ಖರ್ಚು ಮಾಡಿ, ಅವರೂ ಸಹ ಇತರರಂತೆ ನೆಮ್ಮದಿಯಿಂದ ಬದುಕಬೇಕೆಂಬ ಕಳಕಳಿಯೂ ಅವರಲ್ಲಿ ಇದೆಯೋ, ಇಲ್ಲವೋ, ಆ ಒಂದು ಇಚ್ಛಾಶಕ್ತಿ ಆ ಪೊಲಿಟಿಕಲ್ ವಿಲ್ ಇದೆಯೋ, ಇಲ್ಲವೋ ನಮಗೆ ಗೊತ್ತಿಲ್ಲ. ಇದರ ವಿವರಕ್ಕೆ ಏನಾದರೂ ಹೋದರೆ, ಇಲ್ಲಿ ನೀವು ಮಾಡಿರುವಂತಹ ಅಲೋಕೇಷನ್ ನೋಡಿದರೆ ಗೊತ್ತಾಗುತ್ತದೆ. ಇಲ್ಲಿ ನೀವು ಯಾವುದೇ ಒಂದು ಹೊಸ ಕಾರ್ಯಕ್ರಮವನ್ನು ಘೋಷಣೆ ಮಾಡದೇ ಇರುವುದು ಗೊತ್ತಾಗುತ್ತದೆ. ಬಜೆಟ್‌ನಲ್ಲಿ 'ಗಂಗಾ ಕಲ್ಯಾಣ' ಯೋಜನೆಗೆ 13 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಆ ಕಡೆ ಕುಳಿತಿರುವಂತಹ ಮತ್ತು ಈ ಕಡೆ ಕುಳಿತಿರುವ ಶಾಸಕರುಗಳಿಗೆ ಗೊತ್ತಾಗಲಿ, ಇಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಗೊತ್ತಾಗಲಿ, ತಾವು ಗಂಗಾ ಕಲ್ಯಾಣಕ್ಕೆ ಇಟ್ಟಿರುವಂಥಾದ್ದು 13 ಕೋಟಿ ರೂಪಾಯಿಗಳು, ಇದು 1300 ಜನರಿಗೆ ಆಗುತ್ತದೆ. ಇಡೀ ನಮ್ಮ ರಾಜ್ಯದ ಒಂದು ಲಕ್ಷ ರೂಪಾಯಿ ಆವರೇಜ್ ಗಂಗಾ ಕಲ್ಯಾಣ ಯೋಜನೆಗೆ ಖರ್ಚಾಗುತ್ತದೆಂದರೆ, ಇಡೀ ರಾಜ್ಯದಲ್ಲಿ 1300 ಜನರಿಗೆ ಕೊಟ್ಟಿರುವ ಸವಲತ್ತು. ಇದು ಹೇಗೆ? ಈ ರಾಜ್ಯದ ಅಂಕಿಅಂಶ ಕೊಡುತ್ತಿದ್ದಾರೆ, ನಮ್ಮ ಟೋಟಲ್ ಜನಸಂಖ್ಯೆಯಲ್ಲಿ ಒಂದು ಕೋಟಿ ಎಂಟು ಲಕ್ಷ ಜನರು ಎಸ್.ಸಿ. ಎಸ್.ಟಿ. ಜನಾಂಗದವರು ಇದ್ದಾರೆ. ಆ ಲೆಕ್ಕದಲ್ಲಿ ಎಷ್ಟು ಪರ್ಸೆಂಟ್ ಹಣವನ್ನು ಅವರಿಗಾಗಿ ಖರ್ಚು ಮಾಡುತ್ತಿದ್ದೀರಾ? ಅದನ್ನು ಹೇಳಿ, ದೊಡ್ಡ ದೊಡ್ಡ ಭಾಷಣವನ್ನು ಮಾಡುತ್ತೇವೆ, ಇಲ್ಲಿ ನೀವೇ ಅಧಿಕಾರದಲ್ಲಿ ಇದ್ದಿರಿ, ಸ್ವಾತಂತ್ರ್ಯ ಬಂದಂದಿನಿಂದ ಇವತ್ತಿನವರೆಗೂ, ಇವತ್ತು ಹೋಗಿ ನೋಡಿ, ಎಷ್ಟು ಹರಿಜನ, ಗಿರಿಜನರ ಕೇರಿಗಳಲ್ಲಿ ಓಡಾಡಬಹುದೆಂದು ಅನ್ನಿಸುತ್ತದೆ. ನಾವು ಮೂಗು ಹಿಡಿದುಕೊಂಡು ಹೋಗಬೇಕು. ಅಲ್ಲಿ ರಸ್ತೆಗಳು ಕಾಣಲಿಲ್ಲ. ಚರಂಡಿಗಳನ್ನು ಕಾಣಲಿಲ್ಲ. ಬಿದ್ದ ಮನೆಗಳು, ಶುದ್ಧವಾದ ಕುಡಿಯುವ ನೀರಿಲ್ಲ, ಆಸ್ಪತ್ರೆಯ ವ್ಯವಸ್ಥೆ ಇಲ್ಲ. ಇದರ ಬಗ್ಗೆ ಈಗಲಾದರೂ ಯೋಜನೆ, ರೂಪಿಸಿ ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದು ವರ್ಷಕ್ಕೆ, ಐದು ಎಸ್.ಸಿ. ಎಸ್.ಟಿ. ಕಾಲೋನಿಗಳಿಗೆ ಸಮಗ್ರವಾಗಿ ಬೇಕಾಗಿರುವಂತಹ ಎಲ್ಲಾ ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುತ್ತಿರಾ? ಅಂದರೆ 5 ವರ್ಷಗಳಿಗೆ 25 ಏರಿಯಾಗಳನ್ನು ಕವರ್ ಮಾಡಿದ ಹಾಗೆ ಆಗುತ್ತದೆ, ನಮ್ಮ ಇಡೀ 224 ಕ್ಷೇತ್ರಗಳಲ್ಲಿ ಇನ್ನು ಐದು ವರ್ಷಗಳಲ್ಲಿ, ಇದು ಮುಗಿಯಲಿ. ಇತರೇ ಜನಾಂಗದವರಂತೆ, ಒಳ್ಳೆಯ ರಸ್ತೆಗಳಲ್ಲಿ ಓಡಾಡುವುದು ಬೇಡವಾ? ಶುದ್ಧವಾದ ನೀರನ್ನು ಅವರು ಕುಡಿಯುವುದು ಬೇಡವಾ? ನಿಮಗೆ ಹೇಗೆ ಮನಸ್ಸು ಬರುತ್ತದೆ. ಇಲ್ಲಿರುವಂತಹ

ಶಾಸಕರು ಗಂಗಾ ಕಲ್ಯಾಣ ಯೋಜನೆಗೆ ಕೊಟ್ಟಿರುವಂತಹ 13 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು, ಇದರಲ್ಲಿ 1300 ಜನರು ಎಂದರೆ, ಒಂದೊಂದು ವಿಧಾನ ಸಭಾ ಕ್ಷೇತ್ರಕ್ಕೆ ಐದು ಜನರು ಎಂದು ಆಯಿತು, ಬಹಳ ಜಾಸ್ತಿ ಎಂದರೆ ಆರು ಜನರು ಆಯಿತು. ಈ ಯೋಜನೆ ಏಕೆ ಬೇಕು, ಬಿಸಾಕಿ ಅದನ್ನು, ನೀವು ಭಿಕ್ಷೆ ಕೊಡುತ್ತೀರಾ, ಯಾರ ಮೂಗಿಗೆ ತುಪ್ಪವನ್ನು ಹಚ್ಚುವುದಕ್ಕೆ ಹೊರಟಿದ್ದೀರಾ? ಇಲ್ಲಿ ನಿಮ್ಮ ರಾಜಕೀಯ ಇಚ್ಛಾ ಶಕ್ತಿಯನ್ನು ತೋರಿಸಬೇಕಲ್ಲಾ? ನಿಮ್ಮ ಗಮನ ಯಾವುದಕ್ಕೆ ಎಂದರೆ, ಸಿಮೆಂಟ್‌ಗೆ ಶೇಕಡ 15ರಷ್ಟು ಏರಿಕೆ ಮಾಡಿದ್ದೀರಿ, ಶೇಕಡ 15 ರಿಂದ ಶೇಕಡ 20 ರಷ್ಟು ಏರಿಕೆ ಮಾಡಿದ್ದಿರಿ, ಡಿಸೆಲ್ 17.5 ರಿಂದ ಶೇಕಡ 20ಕ್ಕೆ ಏರಿಕೆ ಮಾಡಿದ್ದೀರಿ, ಇದನ್ನು ಯಾರು ಉಪಯೋಗ ಮಾಡುತ್ತಾರೆ? ಇದರಿಂದ ಈ ನಾಡಿನ ಶ್ರೀಸಾಮಾನ್ಯನ ಮೇಲೆ ಮತ್ತು ಎಲ್ಲರ ಮೇಲೆ ಹೊರೆ ಬೀಳುವುದಿಲ್ಲವೇನು? ಒಂದು ಕಡೆ ಭಿಕ್ಷೆ ಕೊಟ್ಟಿರಿ, ಇನ್ನೊಂದು ಕಡೆ ಡಬಲ್ ಕಿತ್ತುಕೊಂಡಿರಿ. ಇದು ಬಡವರ, ರೈತರ, ಹಿಂದುಳಿದವರ ಉದ್ಧಾರದ ಬಜೆಟ್ಟೇ? ನಿಮ್ಮ ಕಾಲದಲ್ಲಿ ಕೈಗಾರಿಕೆಗಳು ಮುಚ್ಚಿಹೋದವು. ಕಳೆದ ನಾಲ್ಕು ವರ್ಷಗಳಿಂದ ಕೈಗಾರಿಕೆಗಳಿಗೆ 425 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡಬೇಕಾಗಿದ್ದರೆ, small scale industries ಅವರು ನಿಮ್ಮನ್ನು ಕೇಳಿದ್ದರೇ? ಏಕೆ ನೀವು ನಿರುದ್ಯೋಗಿ ಯುವಕರಿಗೆ, ನಿಮಗೆ ಸಬ್ಸಿಡಿ ಕೊಡುತ್ತೇವೆ, ನೀವು ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಶುರು ಮಾಡಿ ಎಂದು ಹೇಳಿದಿರಿ? ಶುರು ಮಾಡಿದ ಮೇಲೆ ಅವರು ಕೆ.ಎಸ್.ಎಫ್.ಸಿ.ಯಲ್ಲಿ ಮತ್ತು ಬೇರೆ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡಿದ್ದು, 25 ಲಕ್ಷ ರೂ ಸಾಲಕ್ಕೆ 25 ಲಕ್ಷ ರೂ ಬಡ್ಡಿಯಾಗಿದೆ. ಅವರಿಗೆ ಸಬ್ಸಿಡಿ ಕೊಡುವುದು ನಿಮ್ಮ ಕರ್ತವ್ಯವಲ್ಲವೇ? Is it not your duty? ಅದಕ್ಕೆ ಎಷ್ಟು ದುಡ್ಡು ತೆಗೆದಿಟ್ಟಿದ್ದೀರಿ? 60 ಕೋಟಿ ರೂಪಾಯಿಗಳು. ಪಿ.ಜಿ.ಆರ್. ಸಿಂಧ್ಯಾರವರು ಗಮನಿಸಬೇಕು. ಇದರಿಂದ ನೀವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಯಡಿಯೂರಪ್ಪನವರು ಬಜೆಟ್‌ನ ಅಂಕಿಅಂಶಗಳನ್ನು ಎಷ್ಟರಮಟ್ಟಿಗೆ ಗಮನಿಸಿದ್ದರೋ, ನನಗೆ ಗೊತ್ತಿಲ್ಲ. 1999 ರಿಂದ ಒಟ್ಟು 350 ರಿಂದ 400 ಕೋಟಿ ರೂಪಾಯಿಗಳ ಸಬ್ಸಿಡಿ ಬಾಕಿ ಇರತಕ್ಕಂಥಾದ್ದು ನಿಜ. 2004–05ನೇ ಸಾಲಿನಲ್ಲಿ ಸುಮಾರು 82 ಕೋಟಿ ರೂಪಾಯಿಗಳನ್ನು ಕೆ.ಎಸ್.ಎಫ್.ಸಿ. ಯವರು ಸಾಲ ತೆಗೆದು ಇದಕ್ಕೆ ಕೊಡತಕ್ಕಂಥಾದ್ದು ಎಂದು ತೀರ್ಮಾನವಾಗಿದೆ. ಅ 82 ಕೋಟಿ ರೂಪಾಯಿಗಳ ಜೊತೆಗೆ ಈಗ ಮಾನ್ಯ ಸಿದ್ದರಾಮಯ್ಯನವರು 64 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ 64 ಕೋಟಿ ರೂಪಾಯಿಗಳನ್ನು ಕೆ.ಎಸ್.ಎಫ್.ಸಿ. ಯವರು ಮೂರು ತಿಂಗಳಲ್ಲಿ ರೈಸ್ ಮಾಡುತ್ತಾರೆ. ಅಂದರೆ ಒಂದೇ ಫೈನ್ಯಾನ್ಷಿಯಲ್ ಈಯರ್‌ನಲ್ಲಿ ನಾವು ಸುಮಾರು 150 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಬಿಡುಗಡೆ ಮಾಡುತ್ತಿದ್ದೇವೆ. ಕಳೆದ ಆರು ವರ್ಷಗಳಲ್ಲಿ ಇದಕ್ಕೆ ಒಂದು ರೂಪಾಯಿಯೂ ಬಿಡುಗಡೆಯಾಗಿರಲಿಲ್ಲ. ಈ ಒಂದೇ ವರ್ಷದಲ್ಲಿ 150 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದು, ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕಂಥ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳಿಗೆ ಒಂದೊಂದು ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಬಿಡುಗಡೆಯಾಗುತ್ತದೆ ಮತ್ತು ಅದು ಟ್ರಾನ್ಸ್‌ಪರೆಂಟಾಗಿ ಇರುತ್ತದೆ. ಯಾರು ಮುಂಚೆ ತೆಗೆದು ಕೊಂಡಿದ್ದಾರೆ. ಯಾವ ಇಂಡಸ್ಟ್ರಿಗಳು ನಡೆಯುತ್ತಿವೆ ಇವುಗಳನ್ನೆಲ್ಲಾ ನೋಡುತ್ತೇವೆ. ಇದಕ್ಕಾಗಿ ಈ ಸಂದರ್ಭದಲ್ಲಿ ಯಡಿಯೂರಪ್ಪನವರು ಮಾನ್ಯ ಸಿದ್ಧರಾಮಯ್ಯನವರನ್ನು ಅಪ್ರೀಷಿಯೇಟ್ ಮಾಡುತ್ತಾರೆ ಎಂದು

ನಾನು ಅಪೇಕ್ಷೆ ಪಟ್ಟಿದ್ದೆ. ಸಿಮೆಂಟಿನ ರೇಟನ್ನು ಹೆಚ್ಚು ಮಾಡಿದ್ದಾರೆ, ಅದನ್ನು ಕಡಿಮೆ ಮಾಡಿ ಎಂದು ಹೇಳಿ, ಡೀಸಲ್ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕು ಎಂದು ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ. ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ, ಆ ಕರ್ತವ್ಯವನ್ನು ನೀವು ನಿರ್ವಹಿಸುತ್ತಿದ್ದೀರಿ. ಆದರೆ ಇಲ್ಲಿ ನಾವು ಮಾಡಿರತಕ್ಕಂಥ ಕೆಲಸಗಳಿಗೆ ನೀವು ಸಿದ್ಧರಾಮಯ್ಯನವರಿಗೆ ಅಭಿನಂದಿಸುತ್ತೀರಿ ಎಂದು ನಾನಾದರು ಭಾವಿಸಿಕೊಂಡಿದ್ದೆ. ಇವತ್ತು ಮಾನ್ಯ ಸಿದ್ಧರಾಮಯ್ಯನವರು ಒಂದು ಅತ್ಯಂತ ಒಳ್ಳೆಯ ಬಜೆಟನ್ನು ಮತ್ತು ಬಹಳ ಪ್ರಮುಖವಾಗಿ ಸಣ್ಣ ಕೈಗಾರಿಕೆಗಳು, ಮ್ಯಾನುಫ್ಯಾಕ್ಚರಿಂಗ್ ಸೆಕ್ಟಾರ್‌ಗಳನ್ನು ಜೀವಂತವಾಗಿ ಉಳಿಸಲಷ್ಟೇ ಅಲ್ಲ, ಅವುಗಳನ್ನು ಬೆಳೆಸಲು ರಾಜ್ಯದಲ್ಲಿ ಪ್ರಥಮ ಬಾರಿಗೆ ಒಂದು ಒಳ್ಳೆಯ ಬಜೆಟ್ಟನ್ನು ಕೊಟ್ಟಿದ್ದಾರೆ ಮತ್ತು ಗ್ರಾಮೀಣ ಪ್ರದೇಶದ ಕೈಗಾರಿಕೆಗಳಿಗೆ ಉಪಯೋಗವಾಗುವಂತೆ, ಅವುಗಳಿಗೆ ಆಮ್ಲಜನಕ ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ಸಿದ್ಧರಾಮಯ್ಯನವರನ್ನು ಪ್ರಶಂಸೆ ಮಾಡುವಂಥ ಕೆಲಸವನ್ನು ಯಡಿಯೂರಪ್ಪನವರು ಮಾಡಲಿಲ್ಲ, ಪ್ರಶಂಸೆ ಮಾಡುವಂಥ ಆ ಕೆಲಸವನ್ನು ನಾನೇ ಮಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಮ್ಮ ಹತ್ತಿರ ಬಜೆಟ್ ಪುಸ್ತಕ ಇದೆ. ಮಾನ್ಯ ಸಿಂಧ್ಯಾರವರು ಆಮ್ಲಜನಕ ಕೊಟ್ಟಿದ್ದಾರೋ ಅಥವಾ ಇಂಗಾಲ; ಆಮ್ಲ ಕೊಟ್ಟಿದ್ದಾರೋ ನಮಗೆ ಅರ್ಥವಾಗುವುದಿಲ್ಲ. "ಸರ್ಕಾರವು ಸಣ್ಣ ಕೈಗಾರಿಕೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು ಸಹಾಯಧನವನ್ನು ನೀಡುತ್ತಿದೆ. ಕಳೆದ ಕೆಲವಾರು ವರ್ಷಗಳಿಂದ ಈ ಸಹಾಯಧನ ವಿತರಣೆಯಾಗಿಲ್ಲ. ಇದರ ವಿತರಣೆಗೆ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ 65 ಕೋಟಿ ರೂಪಾಯಿಗಳನ್ನು ಎತ್ತುವಳಿ ಮಾಡಲು ಕರ್ನಾಟಕ ರಾಜ್ಯ ಹಣಕಾಸು ನಿಗಮಕ್ಕೆ ಅನುಮತಿ ನೀಡಲಾಗಿದೆ. ಸೂಕ್ತ ಪರಿಶೀಲನೆಯ ನಂತರ ಸಹಾಯಧನವನ್ನು ವಿತರಿಸಲಾಗುವುದು" ಎಂದು ಇದೆ. ಅಂದರೆ, ಇದರರ್ಥ ಏನು ಸ್ವಾಮಿ? ನೀವು ಹೇಳಿದ ಹಾಗೆ ಇದರಲ್ಲಿ ಎರಡು ಅಂಕಿ ಅಂಶಗಳಿಲ್ಲ. ಇಲ್ಲಿ ಇರುವುದು ಒಂದೇ ಫಿಗರ್.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನೂ ಅದನ್ನೇ ಹೇಳುತ್ತಿರುವುದು ಜ್ಞಾನೇಂದ್ರಾ ಅವರೇ. ಈಗಾಗಲೇ 80 ಕೋಟಿ ರೂಪಾಯಿಗಳ ಎತ್ತುವಳಿಯನ್ನು ಮಾಡಿದ್ದೇವೆ. That is before us. I have already released that money to the Industries Department. ಮಾರ್ಚ್–ಏಪ್ರಿಲ್ ತಿಂಗಳಲ್ಲಿ, ಮಾನ್ಯ ಕೃಷ್ಣಾರವರು ಬಜೆಟನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ, ಸಬ್ಸಿಡಿ ಕೊಡಲಿಕ್ಕಾಗಿ 82 ಕೋಟಿ ರೂಪಾಯಿಗಳ ಲೋನನ್ನು ರೈಸ್ ಮಾಡಲು ಕೆ.ಎಸ್.ಎಫ್.ಸಿ.ಗೆ ಅವಕಾಶವನ್ನು ಮಾಡಿಕೊಟ್ಟಿದ್ದರು. That has been rised. That is with us. The money is with the Industries Department. Apart from that, in addition to that, we are having Rs. 62 crores. That comes to about Rs. 150 crores I am going to release it in the next 100 days. It will be released.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೈಗಾರಿಕೆಯನ್ನು ನೋಡತಕ್ಕಂಥ ಇಲಾಖಾ ಸಚಿವರು, ಬಜೆಟ್‌ನಲ್ಲಿ ಹೇಳಿರುವುದಲ್ಲದೆ, 80 ಕೋಟಿ ರೂಪಾಯಿಗಳನ್ನು ಈಗಾಗಲೇ ತೆಗೆದಿಟ್ಟಿದ್ದೇವೆ ಎಂದು ಹೇಳಿದಿರಿ, ಅದಕ್ಕಾಗಿ ನಾನು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಎಫ್‌ಡಿಯವರು ಒಪ್ಪಿಕೊಂಡು ಕೆಎಸ್‌ಎಫ್‌ಸಿ ಯಿಂದ ಬಾಂಡ್.....

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಸರ್ಕಾರ ತಾನೆ ಅದು? ನೀವಿಬ್ಬರು ಒಂದೇ ಸಾರ್. ನಿಮಗೆ ಏನನ್ನೂ ಮಾತನಾಡುವ ಅಧಿಕಾರವಿಲ್ಲ. ನಿಮ್ಮ ಕಾಲದಲ್ಲಿ ಕೈಗಾರಿಕೆಗಳನ್ನು ಹಾಳು ಮಾಡಿಟ್ಟಿರಿ.

ಶ್ರೀ ಆರ್.ವಿ. ದೇಶಪಾಂಡೆ : ಎಫ್.ಡಿ.ಯವರು ಒಪ್ಪಿಕೊಂಡು, 85 ಕೋಟಿ ರೂಪಾಯಿಗಳನ್ನು ಬಾಂಡ್ಸ್ ಮೂಲಕ ರೈಸ್ ಮಾಡಲಾಗಿದೆ. ಕೈಗಾರಿಕಾ ಸಚಿವರು ಏನು ಹೇಳುತ್ತಿದ್ದಾರೆ, ಅದು ಹಂಡ್ರಡ್ ಪರ್ಸೆಂಟ್ ಕರೆಕ್ಟ್.

ಶ್ರೀ ಬಿ.ಎಸ್. ಯಡಿಯೂರಪ್ಪ : ವ್ಯವಸ್ಥೆ ಕುಲಗೆಟ್ಟು ಹೋದದ್ದು, 50ರಷ್ಟು ಕೈಗಾರಿಕೆಗಳು ಬೀಗ ಹಾಕಿದುದು, ನಿರುದ್ಯೋಗಿ ಯುವಕರು ಯಾವ ಕಾರಣಕ್ಕೂ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳು ಬೇಡ ಎಂದು ದೂರ ಸರಿದದ್ದು, ದೇಶಪಾಂಡೆಯವರು ಕೈಗಾರಿಕಾ ಸಚಿವರಾಗಿದ್ದಾಗಲೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಸಾರ್, ಉತ್ತರ ಕೊಡುವಾಗ ನೀವು ಹೇಳುವಿರಂತೆ. ನಾನು ಇನ್ನೂ ಅನೇಕ ವಿಷಯಗಳು ಹೇಳುವುದಿದೆ. ನಮ್ಮ ಸ್ನೇಹಿತರು ಸಲಹೆ ಕೊಟ್ಟಿರಷ್ಟೇ. ಹಿಂದೆ ನಿಮ್ಮ ನಿಗಾವೆಲ್ಲಾ ಹೊರದೇಶದಿಂದ ಬಂದ ದೊಡ್ಡ ದೊಡ್ಡ ಕೈಗಾರಿಕೆಗಳವರ ಮೇಲೆ ಇತ್ತು. ಇಲ್ಲಿರುವಂಥ 10–12 ಲಕ್ಷ ರೂಪಾಯಿ ಬಂಡವಾಳ ಹಾಕಿರುವಂಥ ಸಣ್ಣಪುಟ್ಟ ಕೈಗಾರಿಕೆಗಳವರಿಗೆ ನಿಮ್ಮ ಕಾಲದಲ್ಲೇ ಸಬ್ಸಿಡಿ ಕೊಟ್ಟು ಮುಗಿಸಬಹುದಾಗಿತ್ತು. ಸಬ್ಸಿಡಿ ಕೊಡದೇ ಮೂರು–ಮೂರೂವರೆ ವರ್ಷಗಳಾದವು. ನೀವು ಕೊಡುವ ಸಬ್ಸಿಡಿಗೆ ಬಡ್ಡಿ ಸೇರಿಸಿ ಕೊಡಿ ಎಂದು ನಾನು ಹೇಳುತ್ತೇನೆ. ಅವರಲ್ಲಿ ಒಗ್ಗಟ್ಟಿಲ್ಲ, ಹೋರಾಟ ಮಾಡುವ ಶಕ್ತಿ ಇಲ್ಲ, ಅವರು ನಿತ್ರಾಣದಲ್ಲಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಯಡಿಯೂರಪ್ಪನವರೇ, ಸಣ್ಣ ಕೈಗಾರಿಕೆಗಳು ದೇಶಪಾಂಡೆಯವರ ಕಡೆ ಇರಲಿಲ್ಲ. Sri. Deshapande was the Heavy Industries Minister.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಡಿಯೂರಪ್ಪನವರೇ, ನೀವು ಬಹಳ ಬುದ್ಧಿವಂತರಿದ್ದೀರಿ. ನಾವು ಕಷ್ಟಪಟ್ಟು, ಅವರ ಮನಸ್ಸನ್ನು ಒಲಿಸಿ, ಫೈನ್ಯಾನ್ಸ್ ಡಿಪಾರ್ಟ್‌ಮೆಂಟಿನ ಆಫೀಸರ್ಸ್‌ಗಳಿಗೆಲ್ಲಾ ಹೇಳಿ, ಮತ್ತೆ ಈ ಸಾರಿ 60–70 ಕೋಟಿ ರೂಪಾಯಿಗಳನ್ನು ಕೆ.ಎಸ್.ಎಫ್.ಸಿ.ಯಿಂದ ರೈಸ್ ಮಾಡಲು ಪರ್ಮಿಷನ್ ಕೊಡಿ ಎಂದು ಕೇಳಿ, ನಾವು ಅದನ್ನು ತೆಗೆದುಕೊಂಡು ಬಂದು, ಅವರಿಗೆ ಸ್ನೇಹದಿಂದ ಏನಾದರೂ ಸಹಾಯ ಮಾಡೋಣ ಎಂದು ಹೇಳಿದರೆ, ನೀವು ಈ ಕಡೆ ನಮ್ಮನ್ನು ಟೀಕೆಯೂ ಮಾಡುತ್ತೀರಿ, ಫೈನ್ಯಾನ್ಸ್ ಮಿನಿಸ್ಟರನ್ನು ಕಂಗ್ರಾಜುಲೇಟೂ ಮಾಡುವುದಿಲ್ಲ. You would like to gain the sympathy of the small scale industries people also. ಅವರ ಸಿಂಪತಿಯನ್ನೂ ಗೈನ್ ಮಾಡಲು ನೋಡುತ್ತಿದ್ದೀರಿ, ನೀವು ಬಹಳ ಬುದ್ಧಿವಂತರಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಯಡಿಯೂರಪ್ಪನವರೇ, ತಮಗೂ ಗೊತ್ತಿದೆ, ತಮ್ಮ ಶಿವಮೊಗ್ಗ ಜಿಲ್ಲೆಯ ಚಿಕ್ಕ ಕೈಗಾರಿಕೆಗಳ ಬಗ್ಗೆ ಬಹಳಷ್ಟು ಪ್ರಸ್ತಾಪ ಮಾಡಿದಿರಿ. ಅನ್‌ಫಾರ್ಚುನೇಟಲಿ, ನನಗೆ ಸಣ್ಣ ಕೈಗಾರಿಕೆಗಳ ಸಬ್ಜೆಕ್ಟ್‌ನ್ನು ಡೀಲ್ ಮಾಡಲು ಸಾಧ್ಯವಾಗಿಲ್ಲ. ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಸಿಕ್ಕಿಲ್ಲ ಎಂದು ಹೇಳುತ್ತೀರಿ, ಬೇರೆಲ್ಲಾ ಕೈಗಾರಿಕೆಗಳಿಗೆ ಸಬ್ಸಿಡಿ ಸಿಕ್ಕಿದೆಯೇನು? ಅದು ಎಲ್ಲರಿಗೂ ಎಂಟೈಟಲ್‌ಮೆಂಟ್ ಆಗಿದೆಯೇ? ಐದು ಪರ್ಸೆಂಟ್ ಕೈಗಾರಿಕೆಗಳು ಸಬ್ಸಿಡಿಗೆ ಎಂಟೈಟಲ್ ಆಗಿವೆ.

ಸಣ್ಣ ಕೈಗಾರಿಕೆಗಳು ಅನಾರೋಗ್ಯವಾಗಲು ಸಬ್ಸಿಡಿಯೂ ಒಂದು ಕಾರಣ. ಅದು ಸರಿ. ಆದರೆ ಬಹಳಷ್ಟು ಸಣ್ಣ ಕೈಗಾರಿಕೆಗಳು ಅನಾರೋಗ್ಯವಾಗಿರುವುದು, it is mainly because of the competition. It is because of the liberalisation, globalisation. Please understand. ಅದನ್ನು ಸ್ವಲ್ಪ ತಿಳಿದುಕೊಳ್ಳಿ. ಇದನ್ನು ತಮಗೆ ನಾನು ಹೇಳಬೇಕೆಂದೇನೂ ಇಲ್ಲ. ರಾಜ್ಯದಲ್ಲಿರುವ ಎಲ್ಲಾ ಕೈಗಾರಿಕೆಗಳಿಗೂ ಸಬ್ಸಿಡಿ ಕೊಡಬೇಕಾಗಿದೆಯೇ? ಹಾರ್ಡ್‌ಲಿ 3–4 ಪರ್ಸೆಂಟ್ ಕೈಗಾರಿಕೆಗಳಿಗೆ ಕೊಡಬೇಕಾಗಿದೆ. ಮೆಜಾರಿಟಿ ಸಣ್ಣ ಕೈಗಾರಿಕೆಗಳು ಬಹಳ ಚೆನ್ನಾಗಿ ಕೆಲಸವನ್ನೂ ಮಾಡುತ್ತಿವೆ. ಆದರೆ ಅವು ಅನಾರೋಗ್ಯವಾಗಿರುವುದಕ್ಕೆ ಹಲವಾರು ಕಾರಣಗಳಿವೆ. ದಯಮಾಡಿ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. There are various reasons.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಿಂಧ್ಯಾರವರೇ, ನೀವು ಯಡಿಯೂರಪ್ಪನವರನ್ನು ಬುದ್ಧಿವಂತರನ್ನು ಎಂದು ಹೇಳಿದಿರಿ. ಅವರಿಗಿಂತ ಭಾರಿ ಬುದ್ಧಿವಂತರು ನೀವು. ಏಕೆಂದರೆ, ಬಜೆಟ್‌ನಲ್ಲಿ ಅದಕ್ಕೆ ಕೊಡತಕ್ಕಂಥ ಹಣಕ್ಕೆ ಪ್ರಾವಿಷನ್ ಮಾಡದೇ ಕೆ.ಎಸ್.ಎಫ್.ಸಿ. ಸಾಲ ಮಾಡಿ ಎಂದು ಹೇಳಿದ್ದೀರಿ. ಹಿಂದೆ, ಎಸ್.ಎಂ. ಕೃಷ್ಣಾರವರು ಸಾಲವನ್ನು ಎತ್ತುವಳಿ ಮಾಡಿ ಎಂದು ಕೆ.ಎಸ್.ಎಫ್.ಸಿ. ಯವರಿಗ ಆದೇಶವನ್ನು ಕೊಟ್ಟರು. ನೀವೂ ಅದೇ ಕೆಲಸವನ್ನು ಮಾಡಿದ್ದೀರಿ. ಸಾಲ ಮಾಡಿ ಸಬ್ಸಿಡಿ ಕೊಡಿ ಎಂದು ಹೇಳಿದಿರೇ ಹೊರತು, ಅದಕ್ಕೆ ಬಜೆಟರಿ ಪ್ರಾವಿಷನ್ ಎಲ್ಲಿದೆ ಎಂದು ನಾವು ಕೇಳುತ್ತಿರುವುದು, ನಿಮ್ಮ ಹತ್ತಿರ ಅದಕ್ಕೆ ಉತ್ತರವಿಲ್ಲ. ಕೈಗಾರಿಕೆಗಳಿಗೆ ಅವರೂ ಸಾಲ ಮಾಡುವುದು, ನೀವೂ ಸಾಲ ಮಾಡಿ ಸಬ್ಸಿಡಿ ಕೊಡತಕ್ಕಂಥಾದ್ದೇ? ಸರ್ಕಾರ ಈಗ ಸಾಲದಲ್ಲಿ ಹೇಗೆ ಮುಳುಗಿ ಹೋಗಿ ಬಿಟ್ಟಿದೆ ಎಂದರೆ......

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಅನುಭವಸ್ಥರಿದ್ದೀರಿ. ನೀವು ಈ ಸಾರಿ ಮಾತನಾಡುತ್ತಿರುವುದು ಆರನೇ ಬಜೆಟ್ಟಿನ ಬಗ್ಗೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸೆಕ್ಟಾರ್‌ನಲ್ಲಿ ಸುಮಾರು 450 ಕೋಟಿ ರೂಪಾಯಿ ಬಾಕಿ ಇದೆ. ಈ ರೀತಿ ನೀವು ಮಾಡಿ ಎಂದು ನೀವು ನಮಗೆ ಸಜೆಸ್ಟ್ ಮಾಡಿ. ಸಿಕ್‌ನೆಸ್ ಬಗ್ಗೆಯೂ ನೀವು ಸಜೆಸ್ಟ್ ಮಾಡಿ. ಆ ಆ್ಯಸ್ಪೆಕ್ಟನ್ನು ನೀವು ಓದಿ. ನಾಲ್ಕು ಜನ ರಿಟೈರ್ಡ್ ಆಫೀಸರ್‌ಗಳನ್ನು ಕರೆದು ಹೇಳಿ. ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಈಗ ಮಾಡಿರುವ ಒಳ್ಳೆಯ ಕೆಲಸಕ್ಕೆ atleast give him the appreciation.

Sri. G.V. Srirama Reddy : We are not criticising him. ನಾವು ಹೇಳುತ್ತಾ ಇರುವುದೇನೆಂದರೆ, ಸಾಲ ಮಾಡಿ ಸಬ್ಸಿಡಿ ಕೊಡಿ ಎಂದು ಹೇಳಿದ್ದೀರಿ ಎನ್ನುವುದನ್ನಷ್ಟೇ ನಾನು ಹೇಳುತ್ತಿರುವುದು;

Sri Basava raja Raya Reddy : There is no alternative.

Sri G.V. Srirama Reddy : There is an alternative. I will tell when I speak. Yes, I will say the alternative when I will participate in the discussion. There is an alternative. Don't say that there is no alternative.

Sri. P.G.R. Shindya : We will take that suggestion.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಕೈಗಾರಿಕಾ ಸಚಿವರು ಸಲಹೆಯನ್ನು ಕೇಳಿದಿರಿ. ಕೋಕೋ–ಕೋಲಾ ಕಂಪನಿಗೆ ತಾವು 200 ಕೋಟಿ ರೂಪಾಯಿಗಳ ಸೇಲ್ಸ್ ಟ್ಯಾಕ್ಸ್ ಎಕ್ಸಂಪ್‌ಷನನ್ನು ಕೊಟ್ಟಿರಿ. ಒಂದು ವೇಳೆ ಸಬ್ಸಿಡಿ ಕೊಡಲು ಆಗದಿದ್ದರೆ, ಇಲ್ಲಿಯವರೆಗೆ ಟ್ಯಾಕ್ಸ್ ಎಕ್ಸಂಪ್‌ಷನ್ ಕೊಡುವ ಮೂಲಕವಾದರೂ ಅವರಿಗೆ ಹೆಲ್ಪ್ ಮಾಡಬಹುದಾಗಿತ್ತು. ಈ ಕಾಂಪೊನೆಂಟ್‌ನಲ್ಲಿ ಏನಾದರೂ ಹೆಲ್ಪ್ ಮಾಡಬಹುದು. ಆ ನಿಟ್ಟಿನಲ್ಲಾದರೂ ತಾವು ಅವರಿಗೆ ಸಹಾಯ ಮಾಡಬಹುದೇ? ಸಾಲ ತೆಗೆದುಕೊಂಡು ಮಾಡುವುದಕ್ಕಿಂತ, ಅಟ್–ಲೀಸ್ಟ್ ಅವರಿಗೆ ಸೇಲ್ಸ್ ಟ್ಯಾಕ್ಸ್ ಎಕ್ಸಂಪೆಷನ್ ಕೊಟ್ಟಿ ಅಲ್ಲಿಯವರೆಗೆ ಅವರು ಉಸಿರಾಟ ಮಾಡಲು ಅವರಿಗೆ ಅವಕಾಶ ಮಾಡಬಹುದಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ದೇಶಪಾಂಡೆಯವರೇನೋ ಇಂಡಸ್ಟ್ರೀಸ್ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದಾರೆ, ಈಗ ನನಗೆ ಬಂದಿದೆ. ಗುಜರಾತ್ ಸರ್ಕಾರದಲ್ಲಿ ಸಣ್ಣ ಕೈಗಾರಿಕೆಗಳಿಗೆ ಯಾವ ಯಾವ ಸಬ್ಸಿಡಿಗಳನ್ನು ಕೊಟ್ಟಿದ್ದಾರೆ........ ಏಕೆ ಗುಜರಾತನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುತ್ತಿದ್ದೇನೆ ಎಂದರೆ..... ನಮ್ಮ ಸ್ನೇಹಿತರಾದ ಯಡಿಯೂರಪ್ಪನವರು ಕುಳಿತುಕೊಳ್ಳಬೇಕು, ತಾವು ನಿಂತುಕೊಂಡು ಬಿಟ್ಟರೆ ಹೇಗೆ? ನಮ್ಮ ಸ್ನೇಹಿತರಾಗಿರತಕ್ಕಂಥ ಮೋದಿಯವರು ಅಥವಾ ಬಿ.ಜೆ.ಪಿ. ಪಾರ್ಟಿಯವರು ಸರ್ಕಾರ ನಡೆಸುತ್ತಿದ್ದಾರೆಂದು ನಾನು ಅದರ ಉದಾಹರಣೆಯನ್ನು ತೆಗೆದುಕೊಳ್ಳುತ್ತಿಲ್ಲ. I don't want to hurt you. Gujarath, in spite of all these things, it is number one in the country, as far as the manufacturing industries are concerned. Even to-day, investors prefer Gujarath. ಗುಜರಾತ್ ರಾಜ್ಯವೇ ಆಗಬೇಕೆಂದು ಹೇಳುತ್ತಾರೆ. ಅವರು ಏನೇನು subsidy ಕೊಟ್ಟಿದ್ದಾರೆ ಅದನ್ನೆಲ್ಲಾ ನಾನು ತರಿಸಿಕೊಂಡು ನೋಡಿದ್ದೇನೆ. Compared to what he has done, it is still very much more than what the subsidies and the incentives we have give in Karnataka. ಅದರಿಂದಾಗಿಯೇ ಎಲ್ಲರೂ ಗುಜರಾತ್ ಕಡೆಗೆ ಹೋಗುತ್ತಾರೆ. We have to give. The situation has arisen.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಎರಡು ವಿಚಾರಗಳನ್ನು ನೀರಾವರಿ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ನೀರಾವರಿ ಯೋಜನೆಗಳಲ್ಲಿ ಮುಂದಿನ ವರ್ಷದ ಕೊನೆಗೆ ಕೃಷ್ಣಾ ಬೇಸಿನ್ ಅನ್ನು ಮುಗಿಸಬೇಕಾಗುತ್ತದೆ ತಾವು ನೀರಾವರಿಯಂಥ ಮಹತ್ವದ ವಿಭಾಗಕ್ಕೆ ಶೇಕಡವಾರು 30.70 ರಷ್ಟು ಹಣ ಬಿಡುಗಡೆ ಆಗುತ್ತಿದ್ದುದನ್ನು ಶೇಕಡ 24.54ಕ್ಕೆ ಈ ಬಜೆಟ್‌ನಲ್ಲಿ ಇಳಿಸಿದ್ದೀರಿ. 30.70 ರಿಂದ 24.54ಗೆ ಶೇಕಡವಾರು ಕಡಿಮೆ ಆಗಿದೆ. ಈ ನಿಟ್ಟಿನಲ್ಲಿ ನಮ್ಮ ನೀರಾವರಿ ಯೋಜನೆಗಳನ್ನು ಟೈಮ್‌ಬೌಂಡ್ ಪ್ರೋಗ್ರಾಂ ಹಾಕಿಕೊಂಡು ಮುಗಿಸುವುದಕ್ಕೆ ಸಾಧ್ಯವೇ? ತಾವು ದಯವಿಟ್ಟು ಯೋಚನೆ ಮಾಡಿ. ಇದಕ್ಕೆ ಪರಿಹಾರವನ್ನು ಹುಡುಕತಕ್ಕಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ನಮ್ಮ ಗ್ರಾಮಪಂಚಾಯತಿಯಲ್ಲಿರುವಂಥ ಸದಸ್ಯರು ತಲೆ ಎತ್ತಿ ಓಡಾಡದ ಹಾಗೆ ಆಗಿದೆ. ನಿಮಗೆ 2000–01 ರಿಂದ 2003–04ರ ವರೆಗೆ correct ಅಂಕಿಅಂಶ ಕೊಡುತ್ತೇನೆ. 2000–01ರಲ್ಲಿ ಎರಡು ಲಕ್ಷ ರೂ ಅನುದಾನ ಕೊಟ್ಟಿದ್ದೀರಿ, 2001–02ರಲ್ಲಿ ಮೂರೂವರೆ ಲಕ್ಷ ರೂ. ಆಯಿತು, 2002–

03ರಲ್ಲಿ ಮೂರೂವರೆ ಲಕ್ಷ ರೂ. ಆಯಿತು, 2003-04ರಲ್ಲಿ 5 ಲಕ್ಷ ರೂಪಾಯಿಯನ್ನು ಗ್ರಾಮಪಂಚಾಯತಿಗೆ ಬಿಡುಗಡೆ ಮಾಡುತ್ತೇವೆಂದು ಹೇಳಿ ಚುನಾವಣೆ ಮಾಡಿ ಮುಗಿಸಿಕೊಂಡಿರಿ. Total amount ಈ ನಾಲ್ಕು ವರ್ಷಕ್ಕೆ 792 ಕೋಟಿ 77 ಲಕ್ಷ ರೂಪಾಯಿಗಳ ಬಿಡುಗಡೆ ಆಗಬೇಕಾಗಿತ್ತು. ನೀವೇ ಹೇಳಿದಂಥ figure ಇದಾಗಿದೆ. ಆದರೆ ಇದರಲ್ಲಿ ಬಿಡುಗಡೆ ಆದದ್ದು ರೂ. 550 ಕೋಟಿ 71 ಲಕ್ಷ ರೂಗಳು ಗ್ರಾಮ ಪಂಚಾಯತಿಗೆ ಕಳೆದ ನಾಲ್ಕು ವರ್ಷದಲ್ಲಿ ಬಿಡುಗಡೆ ಮಾಡದೆ ಬಾಕಿ ಇರುವ ಹಣ ರೂ. 242 ಕೋಟಿ 06 ಲಕ್ಷ ರೂ. ಅಂದರೆ ಇಷ್ಟು ಹಣವನ್ನು ಈ ನಿಮಿಷದವರೆಗೂ ಬಿಡುಗಡೆ ಮಾಡಿಲ್ಲ. ಹೀಗಾದರೆ ಗ್ರಾಮಪಂಚಾಯತ್ ನಡೆಯುತ್ತದೆಯೇ? ಅವನು ವಿದ್ಯುತ್ ಬಿಲ್ಲಿನ ಬಾಕಿಯನ್ನು ಕಟ್ಟುತ್ತಾನೆಯೇ? ಅಧಿಕಾರ ವಿಕೇಂದ್ರಿಕರಣ ಮಾಡುತ್ತೇವೆಂದು ಆ ಗ್ರಾಮಪಂಚಾಯತಿಯ ಸದಸ್ಯನ ಮೂಗಿಗೆ ತುಪ್ಪ ಹಚ್ಚಿ ಓಡಾಡುವುದಕ್ಕೆ ಹಚ್ಚಿದರಲ್ಲಾ! ಆದರೆ ಆ ಗ್ರಾಮಪಂಚಾಯಿತಿಯ ಉದ್ಧಾರ ಏನಾದರೂ ಮಾಡುವುದಕ್ಕೆ ಆಯಿತೇ? ಈಗಲಾದರೂ 5 ಲಕ್ಷ ರೂ ಅನುದಾನ ಕೊಡುತ್ತೇವೆಂದು ನಿಮ್ಮದೇನು ಕಮಿಟ್‌ಮೆಂಟ್ ಇದೆ, ಇದುವರೆಗೆ ಇರುವ ಆ ಬಾಕಿಯನ್ನು ಬಿಡುಗಡೆ ಮಾಡಿ ಆ ಗ್ರಾಮಪಂಚಾಯಿತಿ ಸದಸ್ಯರು ಗೌರವದಿಂದ ರಸ್ತೆಯಲ್ಲಿ ಓಡಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ? ಈ ರಾಜ್ಯದಲ್ಲಿ 224 ಶಾಸಕರು ಇದ್ದಾರೆ, ಸ್ವಾಮಿ ನೀವು ಹೇಳಿದಲ್ಲಿಗೆ ಬರುತ್ತೇವೆ, ಆಡಳಿತ ಪಕ್ಷ ಇರಬಹುದು ವಿರೋಧ ಪಕ್ಷ ಇರಬಹುದು, ಎಲ್ಲಾದರ ಇಂಥ ಕಡೆ ಅಭಿವೃದ್ಧಿ ಕಾರ್ಯ ಆಗುತ್ತಿದೆ ನೀವು ತಕ್ಷಣ ಹೋಗಿ ನೋಡಿಕೊಂಡು ಬನ್ನಿ ಎಂದು 10-12 ಅಡ್ರೆಸ್ ಕೊಡಿ ಹೋಗಿ ನೋಡಿಕೊಂಡು ಬರುತ್ತೇನೆ. ಒಂದು ಕಡೆ ಕೂಡ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಎಲ್ಲವೂ ಸ್ಥಗಿತವಾಗಿದೆ. ಕಾರಣ ಕೇಳಿದರೆ ಈ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ 5-6-7 ಪರ್ಸೆಂಟ್ ಬಡ್ಡಿಗೆ ನಾವು ಸಣ್ಣಪುಟ್ಟ ಕಂಟ್ರಾಕ್ಟ್‌ರುಗಳು ಹಣವನ್ನು ತಂದು ಬಿಲ್ ಪಾವತಿ ಆಗದೆ ಮನೆಮಠ ಮಾರಿಕೊಂಡಿದ್ದೇವೆ ಸ್ವಾಮಿ, ಇನ್ನು ಏನಾದರೂ ಕೂಲಿನಾಲಿಗೆ ಹೋಗಬೇಕೆಂದಿದ್ದೇವೆಂದು ಸಣ್ಣಪುಟ್ಟ ಕಂಟ್ರಾಕ್ಟರುಗಳು ಹೇಳುತ್ತಾರೆ. ದೊಡ್ಡವರು ಬಿಡಿ ಅವರೇನೋ ಬದುಕಿಕೊಳ್ಳುತ್ತಾರೆ ಅವರಿಗೆ ಗೊತ್ತಿದೆ. ಸಣ್ಣಪುಟ್ಟವರ ಗತಿ ಏನು? ಪಿ.ಡಬ್ಲ್ಯುಡಿ.ನಲ್ಲಿ ಸುಮಾರು ರೂ. 360 ಕೋಟಿ ರೂ ಬಾಕಿ ಇದೆ. ಇರಿಗೇಷನ್‌ನಲ್ಲಿ 310 ಕೋಟಿ ರೂ ಬಾಕಿ ಇದೆ. ಕೆ.ಪಿ.ಟಿ.ಸಿ.ಎಲ್. ಒಂದೇ ಒಂದಕ್ಕೆ 7000 ಕೋಟಿ ರೂಪಾಯಿಗಳನ್ನು ಸರ್ಕಾರ ತುಂಬಬೇಕಾಗಿದೆ. ಇದನ್ನು ನಾನು ಹೇಳಿದ್ದಲ್ಲ, ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ರೇವಣ್ಣನವರು ಹೇಳಿರುವಂಥದ್ದು. Small Scale Industries ಗೆ ನೀವು ಹೇಳಿದಂಥ ಅಮೌಂಟ್ ಎಲ್ಲಾ ಆದಮೇಲೂ ಸುಮಾರು 250-300 ಕೋಟಿ ರೂ ಬಾಕಿ ಉಳಿಯುತ್ತದೆ. ಶಿಕ್ಷಕರಿಗೆ ನೀಡಬೇಕಾದ ಸಂಬಳ 267 ಕೋಟಿ ರೂ ಬಾಕಿ ಇದ್ದು ಅದನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಇದು ಇವತ್ತು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯಾಗಿದೆ. ಏನೆಲ್ಲಾ ಭರವಸೆ ಕೊಟ್ಟಿದ್ದೀರಿ? ಒಂದನ್ನೂ ಸಹ ಇವತ್ತು ನೀವು ಕಾರ್ಯರೂಪಕ್ಕೆ ತರುವಂಥ ಪ್ರಯತ್ನ ಮಾಡಿಲ್ಲ. ಆ ಕಾರ್ಯಕ್ರಮಗಳ ಬಗ್ಗೆ ನಾನು ಇನ್ನೊಮ್ಮೆ ಮಾತನಾಡುತ್ತೇನೆ. ಈಗ ನಮ್ಮ ರೈತರ ವಿಷಯಕ್ಕೆ ಬರೋಣ. ಈ ಕೋಆಪರೇಟೀವ್ ಲೋನ್ಸ್‌ಗೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ 60 ಕೋಟಿಯನ್ನು ರೂ ಅನ್ನು ತಾವು ಬಜೆಟ್‌ನಲ್ಲಿ ಪ್ರೊವಿಜನ್ ಮಾಡಿದ್ದೀರಿ. ಹಿಂದಿನ ಸರ್ಕಾರ ಇದೇ ಕೃಷಿ ಸಾಲ ಬಡ್ಡಿ ಮನ್ನಾಕ್ಕೆ ರೂ.83 ಕೋಟಿ ರೂ ಕೊಡುತ್ತೇನೆಂದು ಹೇಳಿದ್ದರು. ಅದನ್ನು ಕಳೆದ ಸಾರಿ ಶಾರ್ಟ್‌ಟರ್ಮ್‌ಗೆ ಮಾಡಿದ್ದರು. ಈಗ ನೀವು short term,

medium term loan ಗೆ ನೀವೇ ಹೇಳಿರುವ ಪ್ರಕಾರ ಸುಸ್ತಿಬಡ್ಡಿ, ಬಡ್ಡಿಯನ್ನು 6 ಪರ್ಸೆಂಟ್ ನೀವು ತರಬೇಕೆಂದಿದ್ದೀರಿ, difference amount ಇದೆಯಲ್ಲಾ 6.5 ಪರ್ಸೆಂಟ್, 12–12.5 ಪರ್ಸೆಂಟ್, 13.5 ಪರ್ಸೆಂಟ್ ಅಭಿವೃದ್ಧಿ ಸಾಲಕ್ಕೆ short term loan ಗೆ 12.5 ಪರ್ಸೆಂಟ್ ಎಂದು ನೀವೇ ಹೇಳಿದ್ದೀರಿ. ಅಭಿವೃದ್ಧಿ ಸಾಲಕ್ಕೆ 13.5 ಪರ್ಸೆಂಟ್ ಎಂದು ನೀವೇ ಹೇಳಿದ್ದೀರಿ. ಅಭಿವೃದ್ಧಿ ಸಾಲಕ್ಕೆ 13.5 ಪರ್ಸೆಂಟ್ ಎಂದು ಹೇಳಿದ್ದೀರಿ. ಇವತ್ತು ಇದಕ್ಕೆ ನನ್ನ ಪ್ರಕಾರ ಸ್ವಾಮಿ ಇದನ್ನು ಪ್ರಾಮಾಣಿಕವಾಗಿ 6 ಪರ್ಸೆಂಟ್ ಕನ್ಸಿಷನ್‌ಗೆ ಕೊಡುತ್ತೇವೆಂದು ನೀವು ಹೇಳಿದರೆ, short term and long term loan ಗೆ minimum you require Rs. 200 crores every year. whereas you have provided only Rs. 60 crores ಹಾಗಾದರೆ ಈ short term and long term loan ಗೆ ಬಡ್ಡಿ concession ಕೊಡುತ್ತೇವೆಂದು ಹೇಳಿಬಿಟ್ಟು, ಇದರ ಪರಿಣಾಮ ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್ ಮತ್ತು ನಮ್ಮ ಸೊಸೈಟಿಗಳ ಗತಿ ಏನಾಗಬೇಕು? ಅವುಗಳು ಬಾಗಿಲು ಹಾಕಬೇಕಾಗುತ್ತದೆ. ಈ ಬಜೆಟ್‌ಗೆ ಹೋದ ತಕ್ಷಣ ಅವರು ಬಾಗಿಲು ಹಾಕುವುದು ಮಾತ್ರ ಗ್ಯಾರಂಟಿ. ಏಕೆಂದರೆ ನೀವು re-imburse ಮಾಡದೇ ಇದ್ದರೆ, ಈ amount ಅನ್ನು ಕೊಡದೇ ಇದ್ದರೆ ಈ ಸಹಕಾರಿ ವ್ಯವಸ್ಥೆಯೇ ಕುಸಿದು ಹೋಗುತ್ತದೆ. ಇದಕ್ಕೇನಾದರೂ ನಿಜವಾದಂಥ ಪರಿಹಾರ ಮಾಡುತ್ತೀರಾ? ಈ ಡೆವಲಪ್‌ಮೆಂಟ್ ಲೋನ್ ಮತ್ತು ಶಾರ್ಟ್‌ಟರ್ಮ್ ಲೋನನ್ನು ಎಲ್ಲರಿಗೂ ಸಹ ಈ ಕನ್ಸಿಶನ್ ಕೊಡುವುದಾದರೆ ಈ ಹಣವನ್ನು ನೀವೇನು 60 ಕೋಟಿ ರೂಪಾಯಿ ಇಟ್ಟುಬಿಟ್ಟು ನಾವು ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಆ ಮೇಲೆ ಯಾರಿಗೆ ನೀವು ಅಸಲಿನ ಮೇಲೆ ಬಡ್ಡಿ ಚಕ್ರಬಡ್ಡಿ ಅಸಲಿಗಿಂತ ಹೆಚ್ಚಿಗೆ ಕಟ್ಟಿದ್ದಾರೆ ಅವರ ಅಸಲನ್ನು ಮನ್ನಾ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಇದರಿಂದ 20000 ಕುಟುಂಬಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೀರಿ. ನಿಮ್ಮಿಂದ ನಾನು ನಿರೀಕ್ಷೆ ಮಾಡಿರಲಿಲ್ಲ. Common Minimum Programme ನಲ್ಲಿ ತಾವು ಹೇಳಿದ್ದೀರಿ. ಬೇಕಾದರೆ ತಾವು ಅದನ್ನು ತೆಗೆದು ಓದಿ. Common Minimum Programme ನಲ್ಲಿ ಏನು ಹೇಳಿದ್ದೀರಿ ಎಂದರೆ, ಅಸಲಿನಷ್ಟು ಹಣವನ್ನು ಬಡ್ಡಿ ಮತ್ತು ಚಕ್ರಬಡ್ಡಿ ರೂಪದಲ್ಲಿ 31–03–2004ರ ಒಳಗೆ ಕಟ್ಟಿದ್ದರೆ ಅಂಥವರ ಅಸಲನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ, ಬಜೆಟ್‌ನಲ್ಲಿ – 'ಯಾವುದೇ ಒಬ್ಬ ರೈತ ಅಸಲು ಮತ್ತು ಸರಳ ಬಡ್ಡಿಯ ಮೊತ್ತಕ್ಕೆ ಸಮಾನವಾದ ಮೊತ್ತವನ್ನು ಕಟ್ಟಿದ್ದರೆ ಅಂಥವರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ನೀವು 20,000 ಸಾವಿರ ಜನರಿಗೆ ಏನು ರಿಯಾಯಿತಿ ಕೊಡುತ್ತೇವೆಂದು ಹೇಳಿದ್ದೀರಿ ಅಲ್ಲಿರುವುದನ್ನೇ ನಾನು ನಿಮಗೆ ಹೇಳುತ್ತಿರುವಂಥದ್ದು. ಅದರಲ್ಲಿ ರೂ. 49 ಕೋಟಿ ರೂಪಾಯಿಯನ್ನು ಏನು ಕನ್ಸಿಶನ್ ಕೊಡುತ್ತೇವೆಂದು ನೀವು ಹೇಳಿದ್ದೀರಿ, C.M.P ಯಲ್ಲಿ ಹೇಳಿರುವುದೇ ಬೇರೆ, ಬಜೆಟ್‌ನಲ್ಲಿ ಹೇಳಿರುವುದೇ ಬೇರೆ. ಇದನ್ನು ನೀವು ಸರಿಪಡಿಸಬೇಕು. ಇಲ್ಲದಿದ್ದರೆ ರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇನ್ನು ಬೆಳೆವಿಮೆ ಏನಿದೆ ಇದರ ಬಗ್ಗೆ ನೀವೇನಾದರೂ ವಿಶೇಷ ಗಮನ ಕೊಡದೇ ಇದ್ದರೆ ಈ ನಮ್ಮ crop cutting experiment ಏನು ಮಾಡುವುದಕ್ಕೆ ಹೋಗುತ್ತಾರಲ್ಲಾ ಇದೇ ನಮಗೆ ಗೊಂದಲ ಆಗಿ ಅವರಿಗೆ ದೊಡ್ಡ ಅನ್ಯಾಯವಾಗುತ್ತಿದೆ. ಬಹಳ ದೊಡ್ಡ ಗೊಂದಲ ಇದೆ. ಬಹಳಷ್ಟು ವಿಷಯಗಳು ಇರುವುದರಿಂದ ನಾನು ವಿವರವಾಗಿ ಹೇಳುವುದಿಲ್ಲ. ಉದಾಹರಣೆಗೆ ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ಉಡುಗುಣಿ ಎನ್ನುವ ಹೋಬಳಿ ಇದೆ. crop cutting experiment ಅನ್ನು ಅಧಿಕಾರಿಗಳು 12

ಕಡೆ ಮಾಡಿದರು. ಅದರಲ್ಲಿ 9 ಕಡೆ ಎಲ್ಲಿ ಬೋರ್‌ವೆಲ್ ಇದೆ, ಅದನ್ನು ತೆಗೆದುಕೊಂಡರು. ಗೆ 12 ಸ್ಯಾಂಪಲ್ ತೆಗೆದುಕೊಂಡರು' ಅದರಲ್ಲಿ 9 ಬೋರ್‌ವೆಲ್ ಇರುವುದನ್ನು ತೆಗೆದುಕೊಂಡರು.

4.40 ಪಿಎಂ

ಅದರಲ್ಲಿ ಒಂಭತ್ತು ಕಡೆ ಎಲ್ಲಿ ಬೋರ್‌ವೆಲ್ ಇದೆ ಅದನ್ನು ತೆಗೆದುಕೊಂಡರು. 12 ಸ್ಯಾಂಪಲನ್ನು ಕ್ರಾಪ್ ಕಟ್ಟಿಂಗ್ ಏಕ್ಸಪರಿಮೆಂಟ್‌ಗೆ ತೆಗೆದುಕೊಂಡರು, ಅದರಲ್ಲಿ 9 ಬೋರ್‌ವೆಲ್ ಇರುವುದನ್ನು ತೆಗೆದುಕೊಂಡರು. ಆ್ಯವರೇಜ್ ಜಾಸ್ತಿ ಬಂತು, ಇಡೀ ನಮ್ಮ ಉಡುಗುಣಿ ಹೋಬಳಿ ನೀರಾವರಿ ಇಲ್ಲದ ಬರಗಾಲ ಪ್ರದೇಶ, ಕೆರೆ ಆಶ್ರಯವಿದ್ದರೂ ಅವರು ಅದನ್ನು ನೀರಾವರಿ ಎಂದು ಕನ್‌ಸಿಡರ್ ಮಾಡುತ್ತಾರೆ, ಆದರೆ ಯಾವುದನ್ನು ಕ್ರಾಪ್ ಕಟ್ಟಿಂಗ್ ಎಕ್ಸಪರಿಮೆಂಟ್‌ಗೆ ತೆಗೆದುಕೊಂಡರು ಎಂದರೆ ಎಲ್ಲಿ ಬೋರ್‌ವೆಲ್ ಇತ್ತು 12ರಲ್ಲಿ 9 ಬೋರ್‌ವೆಲ್ ಇರುವುದನ್ನು ಸ್ಯಾಂಪಲ್ ಎಂದು ತೆಗೆದುಕೊಂಡು ಪಕ್ಕದ ತಾಳಗುಂದ ಹೋಬಳಿಯವರಿಗೆ ಬೆಳೆ ವಿಮೆ ಸಿಕ್ಕಿತು, ಉಡುಗುಣಿ ಹೋಬಳಿಯವರಿಗೆ ಬೆಳೆ ವಿಮೆಯ ಸಿಗಲಿಲ್ಲ. ನಾನೇ ಕಛೇರಿಗೆ ಹೋಗಿ ಬಂದೆ ಆಧಿಕಾರಿಗಳನ್ನು ಕರೆಸಿ ಮಾತನಾಡಿ ಬಂದೆ, ನೀವು ಆ ರೀತಿ ಮಾಡುವಂಥ ಸಮಯದಲ್ಲಿ ಅಲ್ಲಿ ಐದು ಸಾವಿರ ಬೆನಿಫಿಷರೀಸ್ ಬೆಳೆ ವಿಮೆ ಮಾಡಿದ್ದರೆ, ಬೋರ್‌ವೆಲ್ ಇರುವುದನ್ನು ನೀವು ಆ್ಯವರೇಜ್ ಎಂದು ತೆಗೆದುಕೊಳ್ಳುತ್ತೀರಿ ಎನ್ನುವುದಾದರೆ ನಿಮಗೆ ದೇವರು ಬುದ್ಧಿ ಕೊಟ್ಟಿದ್ದಾನೊ, ನಿಮಗೆ ಹೇಳುವವರು ಕೇಳುವವರು ಯಾರು ಇಲ್ಲವೆ ಎಂದು ನಾನು ಕೇಳಿದೆ, ಕ್ರಾಪ್ ಕಟ್ಟಿಂಗ್ ಬೆಳೆ ವಿಮೆಯ ಬಗ್ಗೆಯೇ ಒಂದು ದೊಡ್ಡ ಚರ್ಚೆಯನ್ನು ಮಾಡಬೇಕಾಗುತ್ತದೆ. ನಾನು ಈ ಸಮಯದಲ್ಲಿ ಇಷ್ಟೇ ಹೇಳುವಂಥದ್ದು ಅದನ್ನು ಸರಿಪಡಿಸಲು ಆದೇಶ ಕೊಡಿ. ಎರಡನೆಯದಾಗಿ, ಬೆಳೆ ವಿಮೆ ಹನವನ್ನು ಕೊಡಲು ಏಕೆ ತಡವಾಗುತ್ತದೆ? ಮಾರ್ಚ್, ಏಪ್ರಿಲ್ ನಲ್ಲಿ ಬೆಳೆ ವಿಮೆ ಹಣವನ್ನು ರೈತನಿಗೆ ತಲುಪಿಸುವಂತೆ ಮಾಡಲು ಸಾಧ್ಯವಿದೆ. ಏಕೆಂದರೆ ಎಲ್ಲಾ ಬೆಳೆ ಬೆಳೆದಂಥವನ ಬೆಳೆ ಕಟ್ಟಿಂಗ್ ಜನವರಿಯ ಒಳಗೆ ಮುಗಿದು ಹೋಗಿರುತ್ತದೆ. 2002–2003ರದ್ದು ಬೆಳೆವಿಮೆ ಹಣ ಕೊಡದೆ ಬಾಕಿ ಇದೆ, 2003–04ರದ್ದು ಬೆಳೆ ವಿಮೆ ಕೊಡಲಿಲ್ಲ, ಇನ್ನು ಮುಂದಾದರೂ ಆವನು ಬಿತ್ತನೆಗೆ ಹೋಗುವ ಮುಂಚೆ ಬೆಳೆ ವಿಮೆ ಹಣ ಅವನ ಕೈಗೆ ಸಿಗುವಂತೆ ಮಾಡಬೇಕು. ಎರಡನೆಯದು, ಈಗ ಇರುವ ಬೆಳೆ ವಿಮೆ ಹಣವನ್ನು ನೀವು ಬೇರೆ ಯಾವುದಕ್ಕಾದರೂ ಬಿಡುಗಡೆ ಮಾಡದಿದ್ದರೂ ಪರವಾಗಿಲ್ಲ. ಅದನ್ನು ಪಕ್ಕಕ್ಕೆ ಇಟ್ಟು ತಕ್ಷಣ ಇನ್ನೊಂದು ವಾರದಲ್ಲಿ 2002–03 ಮತ್ತು 2003–04ರ ಬೆಳೆ ವಿಮೆ ಹಣವನ್ನು ರೈತನಿಗೆ ಸಿಗುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಇನ್ನು ಅಡಿಕೆ ಬೆಳೆ, ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್ ಎಂದು ಎಂ.ಎಸ್.ಪಿ., ಮಾರ್ಕೆಟ್ ಸಪೋರ್ಟ್ ಪ್ರೈಸ್ ಎಂದು ಹೇಳಿ ಅಡಿಕೆ ಬೆಳೆಗಾರರೆಲ್ಲಾ ಬಂದು ಮಂತ್ರಿಗಳನ್ನು ಕಂಡು ಮಂತ್ರಿಗಳು ಬೆಂಬಲ ಬೆಲೆಯನ್ನು ಇಂಟ್ರಡ್ಯೂಸ್ ಮಾಡುತ್ತೇವೆಂದ ಭರವಸೆಯನ್ನು ಕೊಟ್ಟರು. ಆದರೆ ಬಜೆಟ್‌ನಲ್ಲಿ ಇದರ ಬಗ್ಗೆ ಒಂದು ಶಬ್ದ ಇಲ್ಲ. ಅಡಿಕೆ ಬೆಳೆಗಾರರು ಇವತ್ತು ಬೇರೆ ಬೆಳೆಗಾರರಂತೆ ಬೀದಿಪಾಲಾಗುತ್ತಿದ್ದಾರೆ. ಅವರ ಬದಲು ಸುಗಂಧ ಅಡಿಕೆಯ ಮೇಲೆ ಸೇಲ್ಸ್ ಟ್ಯಾಕ್ಸ್ 13 ಇದ್ದದ್ದನ್ನು 16 ಮಾಡಿದರು. ಸೆಂಟ್ರಲ್ ಎಕ್ಸೈಸ್‌ನವರು ಬೇರೆ ಟ್ಯಾಕ್ಸ್‌ನ್ನು ಜಾಸ್ತಿ ಮಾಡಿದರು. ಅದಕ್ಕೋಸ್ಕರ ನಾನು ನಿಮ್ಮಲ್ಲಿ ಒತ್ತಾಯ ಮಾಡುತ್ತೇನೆ, ಈಗ ಏನು ಸೇಲ್ಸ್ ಟ್ಯಾಕ್ಸ್‌ನ್ನು 13 ರಿಂದ 16 ಮಾಡಿದ್ದೀರಿ ಅದನ್ನು 6 ಇಲ್ಲವೆ 7 ಪರ್‌ಸೆಂಟ್‌ಗೆ, ಯಾವುದಾದರು ಐವತ್ತು ಪರ್‌ಸೆಂಟ್ ಕಡಿಮೆ ಮಾಡಿ ಆ

ಅಡಿಕೆ ಬೆಳೆಗಾರರನ್ನು ಉಳಿಸುವಂಥದ್ದು ಆಗಬೇಕು. ಇನ್ನು ಕಾಫಿ ಬೆಳೆಗಾರರ ಕತೆ. ಮಾನ್ಯ ಎಸ್.ಎಂ. ಕೃಷ್ಣ ರವರ ಬಜೆಟ್‌ನಲ್ಲಿ ಅವರೇ ಅಳವಡಿಸಿರುವಂಥದ್ದು 36 ಕೋಟಿ ರೂಪಾಯಿಗಳನ್ನು ಕಾಫಿ ಬೆಳೆಗಾರರಿಗೆ ಸುಸ್ತಿ ಬಡ್ಡಿ ಮನ್ನಾ ಮಾಡುವುದಕ್ಕೋಸ್ಕರ ತೆಗೆದು ಇಟ್ಟಿದ್ದರು. 50 ಎಕರೆಯವರೆಗೆ ಅವರು ಒಂದು ಲಿಮಿಟ್‌ನ್ನು ಹಾಕಿದ್ದರು. ನಮ್ಮ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್‌ನಲ್ಲಿ ಅದರ ಬಗ್ಗೆ ಒಂದು ಶಬ್ದ ಇಲ್ಲ. ನಮ್ಮ ಸಿದ್ದರಾಮಯ್ಯನವರೇ ಈ ಹಿಂದೆ ಹಣಕಾಸು ಸಚಿವರಾಗಿದ್ದಾಗ ಕನ್‌ಸೇಷನ್ ಕೊಟ್ಟಿದ್ದರು, ಆದರೆ ಈಗ ಏಕೆ ಕಾಫಿ ಬೆಳೆಗಾರರು ಇದ್ದಕಿದ್ದಂತೆ ಶ್ರೀಮಂತರಾದರೆಂದು ತಮಗೆ ಅನ್ನಿಸಿತ್ತೋ ನನಗೆ ಗೊತ್ತಿಲ್ಲ. ಆ ಸರ್ಕಾರ ಹೋದರೂ ಇವತ್ತು ಜವಾಬ್ದಾರರಾದ ಈ ಸರ್ಕಾರ ಇದೆ. ಬಹುಶಃ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ಗಲಾಟೆಯಾಗಲು ಇದೇ ಮುಖ್ಯವಾದ ಕಾರಣ ಇರಬಹುದು. ನಮ್ಮ ಎಸ್.ಎಂ. ಕೃಷ್ಣರವರು ಇದ್ದಾಗ ಇಷ್ಟು ಬಜೆಟ್ ಮಂಡನೆ ಮಾಡಿದ್ದೆವು, ನಮ್ಮ ಸಿದ್ದರಾಮಯ್ಯನವರು ಬಂದ ಮೇಲೆ ಜೆ.ಡಿ.(ಎಸ್) ಗೆ ಸಂಬಂಧಪಟ್ಟದ್ದನ್ನೆಲ್ಲಾ ಸೇರಿಸಿಕೊಂಡು ನಮಗೆ ಪಂಗನಾಮ ಹಾಕಿ ನಾವು ರಸ್ತೆಯಲ್ಲಿ ಓಡಾಡದಂತೆ ಮಾಡಿದರಲ್ಲಾ ಎಂದು ನಿಮಗೆ ಸಿಟ್ಟು ಬಂದಿದ್ದರೆ ತಪ್ಪೇನಿಲ್ಲ, ಆದರೆ ಬಹಿರಂಗವಾಗಿ ಕಚ್ಚಾಡಬೇಡಿ ಎಂದಷ್ಟೇ ನಾನು ಹೇಳಲು ಇಷ್ಟಪಡುವಂಥದ್ದು, ದಯಮಾಡಿ ಈ ಕಾಫಿ ಬೆಳೆಗಾರರನ್ನು ಉಳಿಸಬೇಕು. ಅವರಿಗೆ ಹಿಂದಿನ ಬಜೆಟ್‌ನಲ್ಲಿ ಎಸ್.ಎಂ. ಕೃಷ್ಣರವರು ಏನು ಘೋಷಣೆ ಮಾಡಿದ್ದರು ಅದನ್ನು ಮುಂದುವರೆಸಬೇಕು, ಅದಕ್ಕೆ ಅಮೌಂಟ್‌ನ್ನು ತೆಗೆದಿಡಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ. ನೇಕಾರರ ಬಗ್ಗೆ ನಮ್ಮ ಉಪನಾಯಕರು ವಿಶೇಷವಾಗಿ ಮಾತನಾಡುವವರಿದ್ದಾರೆ. 105 ಕೋಟಿ ರೂಪಾಯಿಗಳ ವಿಶೇಷ ಪ್ಯಾಕೇಜ್...

ಶ್ರೀ ಕೆ.ಜಿ. ಬೋಪಯ್ಯ : ಬಜೆಟ್‌ನಲ್ಲಿ ಕಾಫಿ ಬೆಳೆಗಾರರಿಗೆ ಬಡ್ಡಿ ಮನ್ನಾ 36 ಕೋಟಿ ರೂ ಎಂದು ಹೇಳಿದ್ದರು. ಅನಂತರ ಅಧಿಕಾರಿಗಳು ಈ ಬಡ್ಡಿ ಮನ್ನಾ 39 ಕೋಟಿ ರೂಪಾಯಿಗಳು ಎಂದು ಲೆಕ್ಕಾ ಹಾಕಿ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೂ ಅದನ್ನು ಮಾಡಿಲ್ಲವಲ್ಲಾ?

ಶ್ರೀ ಕೆ.ಜಿ. ಬೋಪಯ್ಯ : ಹೌದು, ಮಾಡಿಲ್ಲ. ಕೊಡಗನ್ನು ಪೂರ್ತಿ ಕಡೆಗಣಿಸಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ನೇಕಾರರ ಬಗ್ಗೆ ಇನ್ನಷ್ಟು ಮಾತ್ರ ಹೇಳುತ್ತೇನೆ. ಈ ರಾಜ್ಯದಲ್ಲಿ ದುಡಿದು ಉಂಡು, ಇನ್ನೊಬ್ಬರ ಜೋಬಿಗೆ ಕೈಯನ್ನು ಹಾಕದೆಯೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ಯಾವುದಾದರೂ ಸಮುದಾಯ ಇದ್ದರೆ ಅದು ಎರಡು. ಅದರಲ್ಲಿ ಒಂದು ರೈತರು, ಇನ್ನೊಬ್ಬರು ನೇಕಾರರು. ಅವರು ಅವರ ಹುದ್ದೆಯನ್ನು ಬಿಟ್ಟು, ವ್ಯವಹಾರವನ್ನು ಬಿಟ್ಟು ಬೀದಿಗೆ ಇಳಿದರೆ ಸರ್ಕಾರಕ್ಕೆ ಭಾರವಾಗುತ್ತದೆ. ಈಗಾಗಲೇ ಅವರು ಆ ಉದ್ಯಮವನ್ನು ಬಿಡುವಂಥ ಸ್ಥಿತಿಗೆ ಬರುತ್ತಿದ್ದಾರೆ. ಅದಕ್ಕೋಸ್ಕರ ಹಿಂದೆ ನೀವೇನು ಪ್ಯಾಕೇಜ್ ಘೋಷಣೆ ಮಾಡಿದ್ದಿರಿ ಅದರ ಮೂಲಕ ಏನು ಸವಲತ್ತು ಸಿಗಬೇಕೋ ಅದು ಸಿಗಬೇಕು. ಇನ್ನೊಂದು ಗ್ಲೇರಿಂಗ್ ವ್ಯತ್ಯಾಸ ಏನಿದೆ ಎಂಬ ಬಗ್ಗೆ ನಾನು ನಿಮಗೆ ಹೇಳುತ್ತೇನೆ. ರೈತರ ವಿದ್ಯುತ್ ಕೈಮಗ್ಗಗಳು. ಮಹಾರಾಷ್ಟ್ರದಲ್ಲಿ ಒಂದು ಯೂನಿಟ್‌ಗೆ ಒಂದು ರೂಪಾಯಿ ಇದೆ. ಆಂಧ್ರದಲ್ಲಿ 87 ಪೈಸೆ ಇದೆ, ಗುಜರಾತ್‌ನಲ್ಲಿ 1 ರೂಪಾಯಿ 30 ಪೈಸೆ ಇದೆ, ಬೇಕಾದರೆ ಮಾಹಿತಿಯನ್ನು ತರಿಸಿಕೊಳ್ಳಿ. ಆದರೆ ಕರ್ನಾಟಕದಲ್ಲಿ ನೇಕಾರರನ್ನು

ಉಳಿಸಬೇಕೆಂದು 4 ರೂಪಾಯಿ 75 ಪೈಸೆ ಒಂದು ಯೂನಿಟ್‌ಗೆ ಹಾಕಿದ್ದಾರೆ. ನೇಕಾರರು ಸರ್ವನಾಶವಾಗುತ್ತಾರೆ. ಆ ಉದ್ದಿಮೆಗೆ ಇನ್ನೂ ಅನೇಕ ಸವಲತ್ತುಗಳು ಸಿಗಬೇಕು, ಅದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ, ಆದರ ಬಗ್ಗೆ ವಿವರವಾಗಿ ನಮ್ಮ ಉಪನಾಯಕರು ಮಾತನಾಡುತ್ತಾರೆ. ಆದರೆ ದಯಮಾಡಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಈ ಕನ್‌ಸೆಷನ್‌ನನ್ನು ಕೊಡದಿದ್ದರೆ ಈ ಕೈಮಗ್ಗ ಉದ್ದಿಮೆಯೇ ಬಂದ್ ಆಗುತ್ತದೆ, ಅವರು ಬೀದಿಪಾಲಾಗುತ್ತಾರೆ, ಪಕ್ಕದ ರಾಜ್ಯವನ್ನು ನೋಡಿಕೊಂಡು ಕೊನೆಯ ಪಕ್ಷ ಗುಜರಾತ್‌ನಲ್ಲೇನು ಒಂದು ಯೂನಿಟ್‌ಗೆ 1 ರೂಪಾಯಿ 30 ಪೈಸೆಗೆ ವಿದ್ಯುತ್‌ನ್ನು ಕೊಡುತ್ತಿದ್ದರೋ ಅದರಂತೆ ಕೊಟ್ಟು ಆ ಉದ್ದಿಮೆಯನ್ನು ಉಳಿಸಬೇಕೆಂದು ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಇವತ್ತೇನು ಒಂದು ದೊಡ್ಡ ಪ್ರಮಾಣದಲ್ಲಿ 11ನೇ ಹಣಕಾಸು ಯೋಜನೆಯಲ್ಲಿ ರಾಜ್ಯಗಳ ರಸ್ತೆಗಳ ನಿರ್ಮಾಣಕ್ಕಾಗಿ 287 ಕೋಟಿರೂಯನ್ನು ಕೇಂದ್ರ ಸರ್ಕಾರ, ಭಾರತ ಸರ್ಕಾರ ಬಿಡುಗಡೆ ಮಾಡಿದೆ ಅದನ್ನು ಡೈವರ್ಟ್ ಮಾಡಿಕೊಂಡು ನಿಮ್ಮ ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡುತ್ತೀರಿ ಎಂದರೆ ಇಂಥ ಸರ್ಕಾರಕ್ಕೆ ಏನು ಹೇಳಬೇಕು? ನಿಮ್ಮ ಹತ್ತಿರ ಹಣ ಇಲ್ಲ. ಭಾರತ ಸರ್ಕಾರದಿಂದ ರಸ್ತೆ ನಿರ್ಮಾಣಕ್ಕೆ ದುಡ್ಡನ್ನು ತರಿಸುತ್ತೀರ, ಆ ದುಡ್ಡನ್ನು ಬೇರೆಯದಕ್ಕೆ ಡೈವರ್ಟ್ ಮಾಡುತ್ತೀರಾ ಎನ್ನುವುದಾದರೆ ಇದು ದೊಡ್ಡ ಅಕ್ಷಮ್ಯ ಅಪರಾಧ, ಯಾವ ಬಾಬಿಗೆ ಏತಕ್ಕಾಗಿ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡುತ್ತದೊ ಅದಕ್ಕೇ ನೀವು ಹಣವನ್ನು ಖರ್ಚು ಮಾಡಬೇಕಾಗಿತ್ತು. ಈಗಲಾದರೂ ಅದು ಏತಕ್ಕೆ ಡೈವರ್ಟ್ ಆಗಿದೆ ಎಂಬುದನ್ನು ನೋಡಿಕೊಂಡು ಅದನ್ನು ವಾಪಸ್ ತೆಗೆದುಕೊಂಡು ಅದಕ್ಕೆ ಬೇರೆ ರೀತಿ ಅಲೋಕೇಷನ್ ಮಾಡಿ ರಸ್ತೆಗಳ ನಿರ್ಮಾಣಕ್ಕೆ ನೀವು ಗಮನವನ್ನು ಕೊಡಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರೇ ತಮಗೆ ಬೇಕಾಧರೆ ವೈಯಕ್ತಿಕವಾಗಿ ಬಂದು ಕನ್‌ವಿನ್ಸ್ ಮಾಡುತ್ತೇವೆ. ಟಿಂಬರ್‌ನಿಂದ ಸುಮಾರು 200 ಕೋಟಿ ರೂಪಾಯಿ ಸೇಲ್ಸ್ ಟ್ಯಾಕ್ಸ್ ವರ್ಷಕ್ಕೆ ಬರುತ್ತಿತ್ತು. ಬೇಕಾದರೆ ಅಂಕಿಅಂಶವನ್ನು ತರಿಸಿಕೊಂಡು ನೋಡಿ. ಈಗ ಟ್ರಾನ್ಸ್‌ಪೋರ್ಟ್ ಪರ್ಮಿಟ್ ಫೀ ಎಂದು ಒಂದನ್ನು ನೀವು ಮಾಡಿಕೊಂಡಿದ್ದೀರಿ. ಟಿಂಬರ್‌ಗೆ ಮತ್ತು ಫೈರ್ ಉಡ್‌ಗೆ, ಪರ್ ಕ್ಯೂಬಿಕ್ ಮೀಟರ್ 200 ರೂಪಾಯಿ ಮಾಡಿದ್ದೀರಿ ಇಲ್ಲಿ ಆದರೆ ಬಗ್ಗೆ ಸರ್ಕಾರಿ ಆಜ್ಞೆ ಇದೆ. ಅವರೇನು ಸರ್ಕಾರಿ ನೌಕರಿ ಅಧಿಕಾರಿಗಳಿಗೆ ತಲೆ ಕಟ್ಟಿದೆಯೊ ಅಥವಾ ಈ ವ್ಯವಹಾರಗಳು ಬಂದ್ ಆಗಿ ಬರತಕ್ಕ ತೆರಿಗೆಗಳು ನಿಂತುಹೋಗಲಿ ಎಂದೇನಾದರೂ ಅವರು ಅಡ್ವೈಸ್ ಮಾಡುತ್ತಾರೊ, ಯಾವ ಪುಣ್ಯಾತ್ಮ ಈ ಆಜ್ಞೆಯನ್ನು ಹೊರಡಿಸಿದನೊ, ಇದರ ಹಿನ್ನೆಲೆ ಏನಿದೆಯೋ ಆ ಭಗವಂತನಿಗೇ ಗೊತ್ತು. ಆದರೆ ಈಗ ಇಡೀ ದೇಶದಲ್ಲೇ ಇದರ ಮೇಲೆ ದೊಡ್ಡ ಪ್ರಮಾಣದ ಭಾರವನ್ನು ಹಾಕಿದ್ದೀರಿ ಉರುವಲು ಕಟ್ಟಿಗೆಗೂ ಈ ಭಾರ ಬಿದ್ದಿದೆ, ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಎಲ್ಲೂ ಸಹ ಇಂಪೋರ್ಟ್ ಟಿಂಬರ್‌ಗೆ ಫಾರೆಸ್ಟ್ ಪರ್ಮಿಟ್ ಬೇಕಾಗಿಲ್ಲ. ಅವರಿಗೆ ಇವತ್ತು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಭಾರವನ್ನು ಹಾಕಿರುವುದರಿಂದ ನಮ್ಮ ಕರ್ನಾಟಕದ ಹೆಬ್ಬಾಗಿಲಾದಂಥ ಮಂಗಳೂರು, ಕಾರವಾರದ ಬಂದರುಗಳಿಗೆ ಹೊರ ದೇಶದಿಂದ ಈ ಟಿಂಬರ್ ಬಾರದೆಯೇ ನಿಮಗೆ ಬರುತ್ತಿರುವಂಥ ತೆರಿಗೆ 200 ಕೋಟಿ ರೂ ಮ್ಯಮೇಲೆ ಬರುತ್ತಿದೆ. ಕಳೆದ ನಾಲ್ಕಾರು ತಿಂಗಳ ಅಂಕಿಅಂಶವನ್ನು ತಾವೇ ತೆಗೆದು ನೋಡಿದರೆ ಏಕೆ ತಮ್ಮ ಅಧಿಕಾರಿಗಳು ನಿಮ್ಮ ಗಮನಕ್ಕೆ ತರಲಿಲ್ಲವೊ

ಗೊತ್ತಿಲ್ಲ. ಇದನ್ನು ಪರಿಶೀಲನೆ ಮಾಡಿ ದಯಮಾಡಿ ಈ ಟಿಂಬರ್, ಫೈರ್ ಉಡ್‌ಗೆ ಹಾಕಿರುವಂಥ ಟ್ರಾನ್ಸ್‌ಪೋರ್ಟ್ ಪರ್ಮಿಟ್ ಫೀ ಯನ್ನು ತಕ್ಷಣ ರದ್ದು ಮಾಡದಿದ್ದರೆ ನಿಮಗೆ ವರ್ಷಕ್ಕೆ 150 ರಿಂದ 200 ಕೋಟಿ ರೂ ಬರುವಂಥಕ್ಕೆ ಕಲ್ಲನ್ನು ಹಾಕಿಕೊಳ್ಳುತ್ತಿದ್ದೀರಿ. ಈ ಉದ್ದಿಮೆನೇ ಹೋಗುತ್ತಿದೆ, ಬೇರೆ ಬೇರೆ ರಾಜ್ಯಕ್ಕೆ ಹೋಗಿ ಟಿಂಬರ್‌ನ್ನು ತರುವಂಥದ್ದು ಆಗುತ್ತಿದೆ. ಇದಕ್ಕೆ ವಿಶೇಷವಾದಂಥ ಗಮನವನ್ನು ತಾವು ಕೊಡಬೇಕು.

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ರೈತರು. ನಮ್ಮ ಜಮೀನಿನಲ್ಲಿ ಆಕೇಶಿಯ ನೆಡುತ್ತೇವೆ. ಹಿಂದೆ ನಿಮ್ಮ ಅರಣ್ಯ ಇಲಾಖೆಯವರು ಉಚಿತವಾಗಿ ಆಕೇಶಿಯ ಗಿಡಗಳನ್ನು ಕೊಡುತ್ತಿದ್ದರು. ಈಗ್ಗ ನಾವು ಅರಣ್ಯ ಇಲಾಖೆಯಿಂದ ಐದು ರೂಪಾಯಿ ಕೊಟ್ಟು ಅಕೇಶಿಯ ಗಿಡವನ್ನು ತೆಗೆದುಕೊಂಡು ಬಂದು ನಮ್ಮ ಜಮೀನಿನಲ್ಲಿ ಬೆಳೆಸುತ್ತೇವೆ. ಅರಣ್ಯ ಬೆಳೆಸಲು ಪ್ರೋತ್ಸಾಹ ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯ. ನಾನು ಬೆಳೆಸಿದಂಥ ಅಕೇಶಿಯದ ಒಂದು ಪೋಲ್‌ಗೆ ನಿಮಗೆ ಐದು ರೂಪಾಯಿ ತೆರಿಗೆ ಕೊಡಬೇಕು, ಅದು ಸ್ವಲ್ಪ ದಪ್ಪವಾಗಿ ಟಿಂಬರ್ ಆದರೆ ಅದನ್ನು ತೆಗೆದುಕೊಂಡು ಹೋಗಲು ಒಂದು ಮೀಟರ್‌ಗೆ 200 ರೂಪಾಯಿ ಕೊಡಬೇಕು. ಮತ್ತೆ ಅದನ್ನು ಸಾಮಾಡಿದ ಮೇಲೆ ಮತ್ತೆ ಆ ಟಿಂಬರ್‌ಗೆ 200 ರೂಪಾಯಿ ಕೊಡಬೇಕು, ಒಟ್ಟಾರೆಯಾಗಿ 400 ರೂಪಾಯಿ ಅಕೇಶಿಯಾ ಟಿಂಬರ್‌ಗೆ, ಸಾಗುವಾನಿ, ಬೇಟಿಗೂ ಕೂಡ ಅದೇ ರೇಟು, ಅಕೇಶಿಯಾಕ್ಕೂ ಆದೇ ರೇಟು. ಅಂದರೆ ರೈತರು ಇದನ್ನು ಯಾರೂ ಬೆಳೆಯಬಾರದು. ನಿಮ್ಮ ಫ್ಲಾಂಟೇಷನ್ ಒಳಗಡೆ ಹೋಗಿ ಕದ್ದು ತರುವುದೇ ಅವರಿಗೆ ಹೆಚ್ಚು ಲಾಭ. ಯಾವುದನ್ನು ಪ್ರೋತ್ಸಾಹ ಮಾಡಬೇಕು ಎಂಬುದನ್ನೂ ಸರ್ಕಾರ ದಯವಿಟ್ಟು ಹೇಳಿ. ಅಕೇಶಿಯಾ ಕಟ್ಟಿಗೆಗೆ ಸ್ವತಃ ನಾನು ಕಡಿದು ಮಾರುತ್ತಿದ್ದೇನೆ. ನನ್ನ ಖುಷ್ಕಿ ಜಮೀನಿನಲ್ಲಿ ನನ್ನ ಬಾಂದು ಒಳಗಡೆ ಬೆಳೆಸಿದ್ದೇನೆ, ಒಂದು ಕ್ಯೂಬಿಕ್ ಮೀಟರ್‌ಗೆ 25 ರೂಪಾಯಿ ನಾನು ಕಟ್ಟಿಗೆಗೆ ಟ್ಯಾಕ್ಸ್‌ನ್ನು ಕೊಡಬೇಕು ಎಂದರೆ, ನಾನು ಏಕೆ ಕಟ್ಟಿಗೆಯನ್ನು ಬೆಳೆಯಬೇಕು? ನೀವು ನನಗೆ ಸರಬರಾಜು ಮಾಡಿ ಎಂದು ಹೇಳಿ ನಾನು ಕುಳಿತುಕೊಳ್ಳುವುದೇ ಒಳ್ಳೆಯದಲ್ಲವೆ? ರೈತರಿಗೆ ಪ್ರೋತ್ಸಾಹ ಕೊಡುವುದಾ ಅಥವಾ ಕೊಡದಿರುವುದಾ ಇದರ ಬಗ್ಗೆ ನೀವು ಯೋಚನೆ ಮಾಡಿ. ಕನಿಷ್ಠ ನೀವು ಅಕೇಶಿಯಾಕ್ಕಾದರೂ ಇದನ್ನು ತೆಗೆದು ಹಾಕುತ್ತೀರಾ? ಊರುವಲು ಕಟ್ಟಿಗೆ, ಟಿಂಬರ್ ಇದಕ್ಕೆ ಉಪಯೋಗಿಸುವಂಥ ಆಕೇಶಿಯಾ ಕಟ್ಟಿಗೆಗೆ, ನೀವು ನೀಲಗಿರಿಯನ್ನು ಪರ್ಮಿಟ್ ನಿಂದ ಹೊರಗಡ ಇಟ್ಟಿರಿ. ಅಕೇಶಿಯ ಅದಕ್ಕೆ ನೀವು ಟ್ಯಾಕ್ಸ್ ಹಾಕುತ್ತೀರಿ ಎಂದರೆ ಇದರ ಅರ್ಥ ಏನು? ದಯವಿಟ್ಟು ಇದನ್ನು ಯಾರೋ ಅಧಿಕಾರಿಗಳು ಕೊಟ್ಟರು ಎನ್ನುವ ಕಾರಣಕ್ಕಾಗಿ ಇದನ್ನು ಮಾಡಬೇಡಿ, ಒಂದು ನಾಗರೀಕ ಸರ್ಕಾರ ಇದನ್ನೆಲ್ಲಾ ಪ್ರೋತ್ಸಾಹಿಸಬೇಕು, ಅಕೇಶಿಯಾ ಬೆಳೆಯುವುದಕ್ಕೆ, ನಿಮ್ಮ ಊರುವಲುವನ್ನು ನೀವು ಬೆಳೆದುಕೊಳ್ಳಿ ಎಂದು ಪ್ರೋತ್ಸಾಹ ಮಾಡಬೇಕಾದ ಸರ್ಕಾರವೇ ಹೀಗೆ ಕೈ ಕೊಟ್ಟರೆ ಹೇಗೆ ಆಗುತ್ತದೆ ನೀವೇ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಪ್ರೈಮರಿ ಶಿಕ್ಷಣಕ್ಕೆ ಅವರು ಏನು ಅಪರಾಧ ಮಾಡಿದ್ದರು ಎಂದು ನೀವು ಅವರಿಗೆ ಈ ಶಿಕ್ಷೆ ಕೊಡುತ್ತಿದ್ದಿರಾ? ಯಾವ ತಂದೆ-ತಾಯಿಗಳೂ ಕೂಡ ನಿಮ್ಮ ಹತ್ತಿರ ಬಂದು ಬಟ್ಟೆ ಬೇಕು ಎಂದು ಕೇಳಲಿಲ್ಲ. ಯಾವ ತಂದೆ-ತಾಯಿಗಳೂ ನಿಮ್ಮ ಹತ್ತಿರ ಬಂದು ನಮಗೆ ಶಕ್ತಿಯಿಲ್ಲ ಒಂದು ಪುಸ್ತಕ ತಂದು ಕೊಡಿ ಎಂದು ಕೇಳಲಿಲ್ಲ. ಹೇಗೋ

ಅವರು ಬದುಕುತ್ತಿದ್ದರು. ನೀವು ನಿಮಗೆ ಯೂನಿಫಾರಂ ಕೊಡುತ್ತೇವೆ, ಮುಕ್ತವಾಗಿ ಪುಸ್ತಕ ಕೊಡುತ್ತೇವೆ ಎಂದು ಹೇಳಿ 1–6–2004ರಲ್ಲಿ ಶಾಲೆಗಳು ಪ್ರಾರಂಭವಾಯಿತು, ಇವತ್ತಿನವರೆಗೆ 10 ಪರ್ಸೆಂಟ್ ಮಕ್ಕಳಿಗೆ ನೀವು ಪುಸ್ತಕ ಕೊಟ್ಟಿಲ್ಲವಲ್ಲಾ? ಸರ್ಕಾರ ಇದೆಯೇ? ಈಗೇನು ಮೂರು ತಿಂಗಳಿಗೊಮ್ಮೆ ಪರೀಕ್ಷೆ ಮಾಡುತ್ತಾರಂತೆ. ಆ ಮೇಷ್ಟ್ರು ಏನು ಮಾಡಬೇಕು? ಮಕ್ಕಳೇನು ಮಾಡಬೇಕು? ಏನು ಮಾಡುವುದಕ್ಕೆ ಹೊರಟಿದ್ದಿರಾ? ಈ ಸರ್ಕಾರ ಬರುತ್ತೆ ಹೋಗುತ್ತೆ ಅಧಿಕಾರಿಗಳು ಬದುಕಿರಲಿಲ್ಲವಾ? ಅವರ ಇಲಾಖೆ ಇರಲಿಲ್ಲವೆ? ಶಾಲೆ ಪ್ರಾರಂಭವಾಗುವ ಟೈಮ್‌ಗೆ ಸರಿಯಾಗಿ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ತರಿಸಿ ರೆಡಿ ಮಾಡಿಕೊಂಡಿದ್ದರೆ ಅವರನ್ನು ಏನು ಶೂಲಕ್ಕೇರಿಸುತ್ತಿದ್ದರಾ? ಅವರನ್ನು ಜೈಲಿಗೆ ಹಾಕುತ್ತಿದ್ದರಾ? ಎಷ್ಟು ಬೇಜವಾಬ್ದಾರಿ ಅಧಿಕಾರಿಗಳು ಇದ್ದಾರೆ ಅವರ ಮೇಲೆ ನಿಮಗೆ ಹಿಡಿತ ಇಲ್ಲ ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ನಿಮಗೆ ಬೇರೆ ಬೇಕೆ? ಯಾರಾದರೂ ಸಚಿವರು ಆ ಶಾಲಾ ಮಕ್ಕಳಿಗೆ ನೀಡುವ ಬಿಸಿ ಊಟಕ್ಕೆ ಬಂದು ಕುಳಿತುಕೊಂಡು ನೋಡಿ, ನೀವು ಗಲ್ಲಿ ಗಲ್ಲಿಗಳಲ್ಲಿ ಟಾಂ ಟಾಂ ಹೊಡದಿರಿ. 1ನೇ ತರಗತಿಯಿಂದ 10ನೇ ತರಗತಿಯವರೆಗೆ ಮಧ್ಯಾಹ್ನದ ಬಿಸಿ ಊಟ ಕೊಡುತ್ತೇವೆಂದು ನೀವು ಬೊಬ್ಬೆ ಹೊಡೆದು, ಒಂದೇ ಸಾಲಾಗಿ ಮಕ್ಕಳು ಕುಳಿತಿರುತ್ತವೆ. ತಮ್ಮ ಬಿಸಿ ಊಟ ಮಾಡುತ್ತಿರುತ್ತಾನೆ ಅಣ್ಣ, ಅಕ್ಕನು, ನೋಡುತ್ತಾ ನಿಂತಿರಬೇಕು. ಅವರಿಗೆ ಬಿಸಿ ಊಟ ಕೊಡುತ್ತೇನೆಂದು ಹೇಳಿದಿರಿ, ಈಗ 7ನೇ ತರಗತಿಯವರೆಗೆ ಕೊಡುತ್ತೇವೆ, ಹೀಗೆ ಹಂತ ಹಂತವಾಗಿ ಕೊಡುತ್ತೇವೆಂದು ಕಥೆ ಹೇಳುತ್ತೀರಿ. ಅವರ ಕಥೆಗಳು ಏನಾಗಬೇಕು ಎಂಬುದು ನಿಮಗೆ ಗೊತ್ತಿಲ್ಲ. ದಯವಿಟ್ಟು ಆ ಕಡೆ ಗಮನ ಕೊಡದಿದ್ದರೆ ದೊಡ್ಡ ಅನಾಹುತ ಆಗುತ್ತದೆ ದೊಡ್ಡ ಅಪರಾಧವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸ್ತ್ರೀ ಶಕ್ತಿ ಕೇಂದ್ರಗಳು, ಆ ಸ್ವ ಸಹಾಯ ಗುಂಪುಗಳು, ಏನು ಒಂದಿಷ್ಟು ಉಳಿತಾಯ ಮಾಡಿಕೊಂಡು ಅವರೇನು ನಾಲ್ಕು ಗೋಡೆಯ ಮಧ್ಯದಿಂದ ಹೊರಗೆ ಬಂದು ಸ್ವತಂತ್ರವಾಗಿ ಬದುಕುವಂಥ ಒಂದು ವ್ಯವಸ್ಥೆ ಇವತ್ತು ಎಲ್ಲಾ ಕಡೆ ಕಾಣುತ್ತದೆ. ನೀವೇ ಮಾಡಿಸಿದ ರಾಜ್ಯಪಾಲರ ಭಾಷಣದಲ್ಲಿ "ಮಹಿಳೆಯರ ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಪ್ರಸಕ್ತ ವರ್ಷದಲ್ಲಿ ಸ್ತ್ರೀ ಶಕ್ತಿ ಗ್ರಾಮೀಣಾ ಬ್ಯಾಂಕ್ ಅನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ" ಎಂದು ಹೇಳಿಸಿದಿರಿ. ನಿಮ್ಮ ಬಜೆಟ್‌ನಲ್ಲಿ ಇದರ ಬಗ್ಗೆ ಒಂದು ಶಬ್ದವೂ ಇಲ್ಲ. ಅವರಿಗೆ ಹೆಚ್ಚಿನ ಅನುದಾನ ಕೊಡುತ್ತೇವೆಂದು ಹೇಳಿದಿರಿ, ಅದರ ಬಗ್ಗೆನೂ ಒಂದು ಶಬ್ದ ಇಲ್ಲ. ಸಿಇಟಿ ಅದರ ಬಗ್ಗೆ ಇವತ್ತು ಸಂಜೆ ಚರ್ಚೆಯಾಗುತ್ತದೆ. ನಿನ್ನೆ ಕೂಡ ಚರ್ಚೆಯಾಗಿದೆ. ಅದಕ್ಕೆ ನೀವು 65 ಕೋಟಿ ರೂಪಾಯಿ ಫೀ ಅನ್ನು ವ್ಯವಸ್ಥೆ ಮಾಡುವುದಕ್ಕೆ ಅಡ್ಜಸ್ಟ್ ಮಾಡುವುದಕ್ಕೆ ಅದಕ್ಕೇನೂ ನೀವು ಪ್ರಾವಿಜನ್ ಮಾಡಲಿಲ್ಲ. ಇದು ಇವತ್ತು ನಿಮ್ಮ ಸರ್ಕಾರ ನಡೆಸುತ್ತಿರುವ ರೀತಿ. ಈ ಕಳಸಬಂಡೂರಿನಾಲಾ ಇದನ್ನು ಏನಾದರೂ ರಾಜ್ಯ ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದ್ದಿರಾ? ಇದರ ಬಗ್ಗೆ ನಿಮಗೆ ರಾಜಕೀಯ ಇಚ್ಛಾಶಕ್ತಿ ಇದೆಯೇ? ಬಜೆಟ್‌ನಲ್ಲಿ ಇದಕ್ಕೆ ಒಂದು ಪೈ ಪ್ರಾವಿಜನ್ ಮಾಡಿಲ್ಲ. ಇದಕ್ಕೆ ನಾನು ಒತ್ತಾಯ ಮಾಡುತ್ತೇನೆ, ಉತ್ತರ ಕರ್ನಾಟಕದ ಆ ಭಾಗದ ಜನರ ಅಭಿವೃದ್ಧಿಯಾಗಬೇಕೆನ್ನುವ ಕಳಕಳಿ ನಿಮಗೆ ಇದ್ದರೆ ಹೇಗೆ ಅಡ್ಜಸ್ಟ್ ಮಾಡುತ್ತೀರೋ ಮಾಡಿ ಸುಮಾರು 50 ಕೋಟಿ ರೂಪಾಯಿಯನ್ನಾದರೂ ತೆಗೆದು ಆದ್ಯತೆಯ ಮೇಲೆ ಈ ಕೆಲಸ ಪ್ರಾರಂಭಿಸುವುದಕ್ಕೆ ವಿಶೇಷವಾದಂಥ ಗಮನವನ್ನು ತಾವು ಕೊಡಬೇಕಾಗಿದೆ. ಈಗಾಗಲೇ ನಾನು ಪ್ರಸ್ತಾಪ ಮಾಡಿದಂತೆ

ಡಿಸೆಂಬರ್ 2005ಕ್ಕೆ ಕೃಷ್ಣಾ ಜಲಾನಯನ ಪ್ರದೇಶದ ಆಲಮಟ್ಟಿ ಮತ್ತು ನಾರಾಯಣಪುರ ಡ್ಯಾಮ್ ಸೇರಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಪೂರ್ತಿ ಮುಗಿಯಬೇಕಾಗಿದೆ. ಈ ಕರ್ನಾಟಕ ನೀರಾವರಿ ನಿಗಮದವರು 1500 ಕೋಟಿ ರೂಪಾಯಿ ಬೇಕು ಎಂದು ಕೇಳಿದ್ದಾರೆ. ಡಿಸೆಂಬರ್ 2005 ರೊಳಗೆ ಈ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವೆ? ಹಣ ಎಲ್ಲಿಂದ ತರುತ್ತೀರಾ? ಇದನ್ನು ಏನಾದರೂ ಪೂರ್ಣ ಮಾಡುತ್ತೇವೆ ಎನ್ನುವ ಭರವಸೆಯನ್ನು ನೀವು ಈ ಮನೆಗೆ ಕೊಡಬಹುದಾ ಎನ್ನುವಂಥದ್ದರ ಬಗ್ಗೆ ಕೂಡ ನಾನು ತಮ್ಮಿಂದ ಸ್ಪಷ್ಟವಾದಂಥ ಉತ್ತರ ಕೇಳುತ್ತೇನೆ. ವಿದ್ಯುತ್ ಕ್ಷಾಮದಿಂದ ನಾವು ಬಳಲುತ್ತಿದ್ದೇವೆ. ಇನ್ನೊಂದು ಬರಗಾಲ ನಮ್ಮನ್ನು ಕಾಡುತ್ತಿದೆ. ಆಲಮಟ್ಟಿ ಅಣೆಕಟ್ಟಿನ ಕೆಳಗೆ 290 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಎಲ್ಲವೂ ಸಿದ್ಧವಿದೆ. ನೀವು ಅದಕ್ಕೊಂದು ಟೈಬೌಂಡ್ ಪ್ರೋಗ್ರಾಂ ಹಾಕಿಕೊಂಡು ಅದರ ಬಗ್ಗೆ ಕಾರ್ಯಕ್ರಮ ರೂಪಿಸಿದ್ದರೆ ಇವತ್ತು ಈ ವಿದ್ಯುತ್ ಕ್ಷಾಮದಿಂದ ನಮ್ಮನ್ನು ದೂರ ಮಾಡಬಹುದಾಗಿತ್ತು. ಇದಕ್ಕೆ ದುಡ್ಡನ್ನು ಪವರ್ ಫೈನಾನ್ಸ್ ಕಾರ್ಪೋರೇಷನ್ 80 ಪರ್ಸೆಂಟ್ ಹಾಕುತ್ತದೆ; ಉಳಿದ 20 ಪರ್ಸೆಂಟ್ ಅನ್ನು ಕೆಪಿಸಿ ಯವರು ಹಾಕುತ್ತಾರೆ, ಸುಲಭವಾಗಿ ದುಡ್ಡು ಸಿಗುತ್ತದೆ ಇದನ್ನು ಹಾಕಿ ಮಾಡಬೇಕಾಗಿತ್ತು. 15 ಮೆಗಾವ್ಯಾಟ್‌ನ ಒಂದು ಯೂನಿಟ್ 55 ಮೆಗಾವ್ಯಾಟಿನ ಐದು ಯೂನಿಟ್. ಒಟ್ಟು ಇದು 290 ಮೆಗಾವ್ಯಾಟಿಗೆ ಈ ರೀತಿ ಎಲ್ಲಾ ಪ್ಲಾನ್ ರೆಡಿ ಇದೆ. 15 ಮೆಗಾವ್ಯಾಟಿನ ಕೆಪಿಸಿ ಒಂದು ಯೂನಿಟ್ ಮುಗಿದಿದೆ. 55 ಮೆಗಾವ್ಯಾಟಿನ ಕೆಲಸ ಪ್ರಾರಂಭವಾಗಿದೆ. ಇನ್ನೂ 4 ಯೂನಿಟ್ ಕೆಲಸ ಪ್ರಾರಂಭ ಮಾಡುವುದರ ಬಗ್ಗೆ ಯೋಚನೆಯಿಲ್ಲ, ಅದರ ಬಗ್ಗೆ ಪ್ಲಾನ್ ಇಲ್ಲ, ಇನ್ನಾದರೂ ಅದನ್ನು ಟೈಂಬೌಂಡ್ ಪ್ರೋಗ್ರಾಂ ಎಂದು ಹೇಳಿ ಬೇಕಾದ ವ್ಯವಸ್ಥೆ ಮಾಡಿ ಕೆಪಿಸಿಗೆ ಪೂರ್ಣ ಅಧಿಕಾರ ಕೊಟ್ಟು, ಆ ಪವರ್ ಪ್ರಾಬ್ಲಂ ಅನ್ನು ಬಗೆಹರಿಸಿ, ಈಗಾಗಲೇ ನಾವು ಮಳೆ ಬರಲಿ ಎಂದು ದೇವರನ್ನು ಪ್ರಾರ್ಥಿಸೋಣ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ....

ಶ್ರೀ ಬಸವರಾಜ ರಾಯರೆಡ್ಡಿ : ತಾವು ಏನು ಈಗ ಆಲಮಟ್ಟಿ ಕೆಳಭಾಗದಲ್ಲಿ ಹೈಡ್ರೋ ಎಲೆಕ್ಟ್ರಿಸಿಟಿ ಮಾನ್ಯ ಯಡಿಯೂರಪ್ಪನವರೇ ತಾವು ದಯಮಾಡಿ ಕೇಳಿ ಅದಕ್ಕೆ ನಾನು ಹೇಳುತ್ತಿರುವುದು, ಅದು ಹಣಕಾಸಿನ ಸಮಸ್ಯೆಯಲ್ಲ. ಆಲಮಟ್ಟಿ ಡ್ಯಾಂ ಅನ್ನು 524 ಮೀಟರ್‌ಗೆ ಎತ್ತರಿಸದಿದ್ದರೆ ಆ ವಿದ್ಯುತ್ ಅನ್ನು ಉತ್ಪಾದನೆ ಮಾಡಲಿಕ್ಕೆ ಆಗುವುದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ಯಾರು ಸ್ವಾಮಿ ಪರ್ಮಿಷನ್ ಕೊಟ್ಟವರು? ನಾನು ಏನು ಹೇಳುತ್ತೇನೆ ನೀವು ಏನೋ ಹೇಳುತ್ತಿರಲ್ಲಾ, ನಾನು ಏರಿಕೆ ಮಾಡಲಿಲ್ಲವೆಂದು ಹೇಳಿದ್ದೆನಾ?

ಶ್ರೀ ಬಸವರಾಜ ರಾಯರೆಡ್ಡಿ : ಹಣಕಾಸನ್ನು ಕೊಟ್ಟರೆ ಆಗುತ್ತದೆ ಎನ್ನುವಂಥ ಮಾತನ್ನು ತಾವು ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪಾಯಿಂಟ್ ಅದು ಅಲ್ಲ ಸಾರ್. ಈಗ ಆ ಭಾಗದಲ್ಲಿ 290 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಒಟ್ಟು ಯುಕೆಪಿ ಯಿಂದ 1000 ಮೆಗವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ. 524 ಮೀಟರ್ ರೀಚ್ ಆದರೆ ಮಾತ್ರ ಇದು ಸಾಧ್ಯ

ಶ್ರೀ ಗೋವಿಂದ ಎಂ ಕಾರಜೋಳ : ಆಲಮಟ್ಟಿ ಅಣೆಕಟ್ಟಿನಲ್ಲಿ ಬರುವ ಏನು ಯೋಜನೆಗಳು ಇವೆ ಆ ಯೋಜನೆಗಳಿಗೆ ಬಚವಾತ್ ಅವಾರ್ಡ್‌ನಲ್ಲಿ ನಮಗೆ 734 ಟಿಎಂಸಿ

ಯಷ್ಟು ವಾಟರ್ ನಮಗೆ ಹಂಚಿಕೆಯಾಗಿದೆ. ಈ 734 ಟಿಎಂಸಿ ಯಲ್ಲಿ 5 ಟಿಎಂಸಿ ನೀರನ್ನು ಮದ್ರಾಸ್‌ಗೆ ಕುಡಿಯುವ ನೀರಿಗಾಗಿ ಬಿಟ್ಟುಕೊಟ್ಟಿದ್ದೇವೆ. 729 ಟಿಎಂಸಿ ನೀರನ್ನು ನಾವು ಉಪಯೋಗ ಮಾಡಬೇಕಾಗಿದೆ. ಇದು ಒಂದು ಭಾಗ ಆದರೆ, 729 ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸರ್ಕಾರ ಬೇಕಾಗಿರುವಂಥ ಮೂಲಭೂತ ಸೌಕರ್ಯಗಳನ್ನು ಇದುವರೆವಿಗೂ ಮಾಡಿಲ್ಲ. ಮೈನ್ ಕೆನಾಲ್ ಅಷ್ಟೇ ಮಾಡಿದೆ. ಡಿಸ್ಟ್ರಿಬ್ಯೂಟರಿ ಕಂಪ್ಲೀಟ್ ಆಗಿಲ್ಲ, ಲಾಟ್ರೆಲ್ಸ್ ಕಂಪ್ಲೀಟ್ ಆಗಿಲ್ಲ, ಎಫ್‌ಐಸಿ ಕಂಪ್ಲೀಟ್ ಆಗಿಲ್ಲ, ಯಾವ ರೀತಿಯಾಗಿ ಇವರು ಮುಂದಿನ ವರ್ಷದೊಳಗೆ ಉಪಯೋಗ ಮಾಡಿಕೊಳ್ಳುತ್ತಾರೆ?

(ಗೊಂದಲ)

ಒಂದ್ನಿಮಿಷ ನಾನು ಅಲ್ಲಿಗೆ ಬರುತ್ತೇನೆ, ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥವನು ನಾನು ನಿಮಗಿಂತ ಹೆಚ್ಚಿಗೆ ನನಗೆ ಗೊತ್ತಿದೆ. ಇಂಚು ಇಂಚು ಗೊತ್ತಿದ್ದವನು ನಾನು ನೀವು ರಾಯಚೂರಿನವರಿಗಿಂತಲೂ ಹೆಚ್ಚು ನನಗೆ ಗೊತ್ತಿದೆ. ಏಕೆಂದರೆ 173 ಹಳ್ಳಿ ನಮ್ಮವು ಮುಗಿಸಿ ಈ ದೇಶಕ್ಕೆ ತ್ಯಾಗ ಮಾಡಿದ ಜನ ನಾವು. ಸನ್ಮಾನ್ಯ ರಾಯರೆಡ್ಡಿಯವರೇ ತಾವು ದಯಮಾಡಿ ಸಹಕಾರ ಮಾಡಬೇಕು. 729 ಟಿಎಂಸಿ ಯನ್ನೇ ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಿಲ್ಲ. 729 ಟಿಎಂಸಿ ಯಲ್ಲಿ ಬರತಕ್ಕಂಥ ಪವರ್ ಜನರೇಷನ್ 290 ಮೆಗವ್ಯಾಟ್ ಎಂದು ನಮಗೆ ನಾಯಕರು ಏನು ಹೇಳಿದರು, ಅದನ್ನು ನಾವು ಈಗಾಗಲೇ ಕಂಪ್ಲೀಟ್ ಮಾಡಿ ಉಪಯೋಗ ಮಾಡಿಕೊಳ್ಳಲಿಕ್ಕೆ ಸಿದ್ಧವಾಗಿರಬೇಕಾಗಿತ್ತು. ಆದರೆ ಇವತ್ತಿಗೂ ಸರ್ಕಾರ ಅದನ್ನು ಮಾಡಿಲ್ಲ. ಡ್ಯಾಂ ಅನ್ನು 524 ಮೀಟರ್‌ಗೆ ಎತ್ತರಿಸುವಷ್ಟು ಮಟ್ಟಿಗೆ ಇವತ್ತು ಸ್ಟ್ರಕ್ಚರ್ ರೆಡಿ ಇದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಕಾರಜೋಳ್ ಅವರೇ, ಐದು ಟರ್ಬೈನ್ ರೆಡಿ ಆಗಿಲ್ಲವೇ ? ನೋ, ಆ ರೀತಿ ಬೇಡ, Don't mislead the House.

ಶ್ರೀ ಗೋವಿಂದ ಎಂ ಕಾರಜೋಳ್ : ನಾನು ಮಿಸ್ ಲೀಡ್ ಮಾಡುತ್ತಿಲ್ಲ. ನನ್ನದು ಮುಗಿದ ಮೇಲೆ ನೀವು ಹೇಳಿ. ನೀವೂ ಕೂಡ ಅಲ್ಲಯವರೇ ನಾನು ಕೂಡಾ ಅಲ್ಲಿಯವರೇ ಇದ್ದೇವೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ನಾವೂ ಕೂಡ ಅದೇ ಭಾಗದಲ್ಲಿ ಇದ್ದೇವೆ, ನೀವೂ ಕೂಡ ಹೇಳಲಿಕ್ಕೆ ಹೊರಟಿದ್ದೀರಿ.

ಶ್ರೀ ಗೋವಿಂದ ಎಂ ಕಾರಜೋಳ : ನಾನು ರೆಡಿ ಆಗಿಲ್ಲವೆಂದು ಹೇಳಲಿಲ್ಲ.

ಶ್ರೀ ಶಿವಾನಂದ್ ಎಸ್. ಪಾಟೀಲ್ : ನಾವೂ ಸಹ ಅದೇ ಭಾಗದವರಿದ್ದೇವೆ.

ಶ್ರೀ ಗೋವಿಂದ ಎಂ ಕಾರ್‌ಜೋಳ್ : ರೆಡಿ ಆಗಿಲ್ಲವೆಂದು ನಾನು ಹೇಳಲಿಲ್ಲ.

ಶ್ರೀ ಶಿವಾನಂದ್ ಎಸ್. ಪಾಟೀಲ್ : ಅವರು ನಮಗೂ ಕೂಡ ಲೀಡರ್. ಆದ್ದರಿಂದ ನೀವು ಅವರಿಗೆ ಮಿಸ್ ಲೀಡ್ ಮಾಡಬೇಡಿ.

ಶ್ರೀ ಗೋವಿಂದ ಎಂ ಕಾರ್‌ಜೋಳ್ : ನಾನು ಮಿಸ್ ಲೀಡ್ ಮಾಡುತ್ತಿಲ್ಲ. ನೀವು ಪವರ್ ಜನರೇಷನ್ ಮಾಡಿದ್ದೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಶಿವಾನಂದ್ ಎಸ್. ಪಾಟೀಲ್ : 290 ಮೆ.ಗಾ. ವ್ಯಾಟ್. ವಿದ್ಯುತ್ ಜನರೇಟ್ ಮಾಡುವುದಕ್ಕೆ ರೆಡಿ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಹೇಳಿ?

ಶ್ರೀ ಗೋವಿಂದ್ ಕಾರ್‌ಜೋಳ್ : 290 ಮೆ.ಗಾ.ವ್ಯಾಟ್. ಪವರ್‌ನ್ನು ಜನರೇಟ್ ಮಾಡಲಾಗುತ್ತಿದೆಯೋ? ಈ ವರ್ಷದ ಅಂತ್ಯದಲ್ಲಿ ಆಗುವುದು ಬೇರೆ ವಿಷಯ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಯಾರಿಗೂ ಮಿಸ್ ಲೀಡ್ ಮಾಡುತ್ತಿಲ್ಲ. ಬಚಾವತ್ ಅವಾರ್ಡ್ ಪ್ರಕಾರ 2000, ಮೇ 31ರ ಒಳಗಾಗಿ ನಿಗದಿ ಮಾಡಿರತಕ್ಕಂಥ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ನಾವು ಎಲ್ಲಾ ರೀತಿಯಲ್ಲಿ ರೆಡಿ ಮಾಡಿಕೊಳ್ಳಬೇಕಾಗಿತ್ತು. ಆದರೆ ಈ ಕಾರ್ಯ ಇನ್ನೂ ಆಗಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ತಾವೇಕೆ ಇರಿಗೇಷನ್ ಬಗ್ಗೆ ಹೇಳುತ್ತಿದ್ದೀರಿ?

ಶ್ರೀ ಗೋವಿಂದ ಎಂ ಕಾರ್‌ಜೋಳ್ : ನಾನು ಪೂರ್ಣವಾಗಿ ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ. ಆಲಮಟ್ಟಿ ಜಲಾಶಯದಲ್ಲಿ ಈಗಾಗಲೇ 519 ಮೀಟರ್‌ನಷ್ಟು ನೀರನ್ನು ನಿಲ್ಲಿಸಲಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ : 524 ಮೀಟರ್‌ಗೆ ನೀರು ನಿಲ್ಲಿಸಿದರೆ ಈ ಸಮಸ್ಯೆ ಉದ್ಭವವಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ಮಾನ್ಯ ಬಸವರಾಜ ರಾಯರೆಡ್ಡಿಯವರೇ, ನೀವು ಆಗಾಗ ಎದ್ದು ಈ ರೀತಿ ಮಾತನಾಡಿದರೆ ನಾವು ಹೇಗೆ ಮಾತನಾಡುವುದು? ಈ ರೀತಿಯಾದರೆ ನಾವು ಸಂತೆಯೊಳಗೆ ಮಾತನಾಡಿದಂತಾಗುತ್ತದೆ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು : ನಾವೂ ಕೂಡ ಕೃಷ್ಣಾ ಬೇಸಿನ್ ಕಡೆಯವರು. ಆದ್ದರಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ತಾವು ಮಿಸ್‌ಲೀಡ್ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಗೋವಿಂದ ಎಂ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೆ, 524 ಮೀಟರ್ ಎತ್ತರದವರೆಗೆ ಡ್ಯಾಂನ ಕನ್‌ಸ್ಟ್ರಕ್ಷನ್ ಆಗಿದೆ. ನಾನು ಯಾವುದೇ ರೀತಿಯಲ್ಲೂ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಿಸ್ ಲೀಡ್ ಮಾಡುತ್ತಿಲ್ಲ. ಮಾನ್ಯ ಬಸವರಾಜ್ ರಾಯರೆಡ್ಡಿಯವರು ಹೇಳಿದ ಹಾಗೆ 524 ಮೀಟರ್‌ವರೆಗೆ ನೀರನ್ನು ನಿಲ್ಲಿಸಿದಾಗ 1000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ಒಂದು ಭಾಗ. 524 ಮೀಟರ್‌ವರೆಗೆ ನಾವು ನೀರನ್ನು ನಿಲ್ಲಿಸಬೇಕಾದರೆ ಈಗಾಗಲೇ ಅಲೋಕೇಷನ್ ಆಗಿರತಕ್ಕಂಥ ನೀರನ್ನು ಉಪಯೋಗ ಮಾಡಿಕೊಂಡು ಇದರಿಂದ ಪವರ್ ಜನರೇಷನ್ ಮಾಡಿದಾಗ ಮಾತ್ರ ಮುಂದಿನದಕ್ಕೆ ಅವಕಾಶ ಇದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಏನು ವಿನಂತಿಮಾಡಿಕೊಳ್ಳುತ್ತೇನೆಂದರೆ, ಈಗಾಗಲೇ ಇನ್‌ವೆಸ್ಟ್ ಮಾಡಿ 290 ಮೆಗಾ. ವ್ಯಾಟ್. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ 5 ಟರ್ಬೈನ್‌ಗಳನ್ನು ರೆಡಿ ಮಾಡಿದ್ದು ಕೂಡಲೇ 290 ಮೆಗಾ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಮಾಡುವಂಥ ವ್ಯವಸ್ಥೆಯಾಗಬೇಕು. ಮತ್ತೆ

ನಮಗೆ ಅಲೋಕೇಷನ್ ಆಗಿರತಕ್ಕಂಥ 720 ಟಿ.ಎಂ.ಸಿ. ನೀರನ್ನು ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡಾಗ ಮಾತ್ರ ಮುಂದೆ ಕೃಷ್ಣ ನದಿಯಲ್ಲಿರತಕ್ಕಂಥ 260 ಟಿ.ಎಂ.ಸಿ. ಸರ್‌ಪ್ಲಸ್ ವಾಟರ್‌ನಲ್ಲಿ ನಮ್ಮ ರಾಜ್ಯಕ್ಕೆ 50 ಭಾಗ ಬರಬೇಕು. ಇದರಲ್ಲಿ ಮಹಾರಾಷ್ಟ್ರಕ್ಕೆ 25 ಭಾಗ ಮತ್ತು ಆಂಧ್ರಪ್ರದೇಶಕ್ಕೆ 25 ಭಾಗ ಹೋಗುತ್ತದೆ. ನಾನು ಈಗಾಗಲೆ ಹೇಳಿದಂತೆ ಸರ್‌ಪ್ಲಸ್ ವಾಟರ್‌ನಲ್ಲಿ 50 ಪರ್ಸೆಂಟ್ ನಮಗೆ ಬರಬೇಕಾಗಿದೆ. ಈ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಾವು ರೆಡಿ ಮಾಡಿಕೊಳ್ಳಬೇಕಾಗಿದೆ. ಇದಕ್ಕೆ ಹಣಕಾಸಿನ ವ್ಯವಸ್ಥೆ ಏನು ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ನಮ್ಮ ನಾಯಕರು ಕೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಕೊಡಲಿ. ಒಟ್ಟಿನಲ್ಲಿ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು ದೂದ್ ಗಂಗಾ ಯೋಜನೆ ಬಗ್ಗೆ ಹೇಳುವುದಾದರೆ, ಇದಕ್ಕೆ ಮಹಾರಾಷ್ಟ್ರದಲ್ಲಿ ಅಣೆಕಟ್ಟನ್ನು ನಿರ್ಮಾಣ ಮಾಡಲಾಗಿದೆ. ಆದರೆ, ಇದರಿಂದ ನಮಗೆ 4 ಟಿ.ಎಂ.ಸಿ. ನೀರು ಬರಬೇಕು. ಮತ್ತೆ ನಮ್ಮ ಅದರ ಒಪ್ಪಿಗೆ ಪ್ರಕಾರ ಅವರು ನಮ್ಮ ಬಾರ್ಡ್‌ರ್‌ವರೆಗೆ ನೀರನ್ನು ತಂದು ಕೊಡಬೇಕು. ಆದ್ದರಿಂದ ನನ್ನ ಪ್ರಶ್ನೆ ಏನೆಂದರೆ, ದೂದ್ ಗಂಗಾ ಯೋಜನೆಯಿಂದ ನಾಲ್ಕು ಟಿ.ಎಂ.ಸಿ. ನೀರನ್ನು ಮಹಾರಾಷ್ಟ್ರದಿಂದ ನಮ್ಮ ರಾಜ್ಯಕ್ಕೆ ತರುವುದಕ್ಕೆ ಏನಾದರೂ ಪ್ರಯತ್ನ ಆಗಿದೆಯೆ ಅಥವಾ ತರುವಂಥ ಪ್ರಯತ್ನ ಮಾಡುತ್ತೀರಾ? ಒಂದೊಂದು ಹನಿ ನೀರಿಗೂ ನಾವು ಹೊಡೆದಾಡುವಂಥ ಸಂದರ್ಭದಲ್ಲಿ ಆ ಕಡೆ ತಾವು ಏನಾದರೂ ಗಮನಕೊಟ್ಟು ಅದನ್ನು ಕಾರ್ಯರೂಪಕ್ಕೆ ತರುತ್ತೀರಾ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) : ಪ್ರತಿ ವರ್ಷ ನಾಲ್ಕು ಟಿ.ಎಂ.ಸಿ. ನೀರನ್ನು ಅಲ್ಲಿಂದ ತರಲಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಿದರೆ ಒಳ್ಳೆಯದು. ಆದ್ಧರಿಂದ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಕಾಳಮೋಡಿ ಡ್ಯಾಂನಿಂದ ಪ್ರತಿ ವರ್ಷ ನಾಲ್ಕು ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ದೂದ್‌ಗಂಗಾ ನದಿಗೆ ಕಟ್ಟಿರತಕ್ಕಂತ ಕಾಳಮೋಡಿ ಡ್ಯಾಂನಿಂದ ಪ್ರತಿ ವರ್ಷ ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ಮಹಾರಾಷ್ಟ್ರ ಸರ್ಕಾರಕ್ಕೆ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ 37 ಕೋಟಿ ರೂಪಾಯಿ ಕೊಟ್ಟು ನಾಲ್ಕು ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳಲಾಗಿದೆ.

(ಗೊಂದಲ)

ಶ್ರೀ ಶಶಿಕಾಂತ್ ನಾಯಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಒಂದು ಟಿ.ಎಂ.ಸಿ. ನೀರನ್ನೂ ಸಹ ಅಲ್ಲಿಗೆ ತಂದಿಲ್ಲ. ಸರ್ಕಾರದ ವತಿಯಿಂದ ಸುಳ್ಳು ಹೇಳತಕ್ಕಂಥ ಪರಿಸ್ಥಿತಿ ಇಲ್ಲಿ ನಡೆದಿದೆ. ಅಲ್ಲಿ ನೀರು ಇಲ್ಲದೇ ಇರುವುದರಿಂದ ಸುಮಾರು ಐದಾರು ವರ್ಷಗಳಿಂದ ಅಲ್ಲಿನ ರೈತರು ಅತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪ್ರಸಂಗ ಅಲ್ಲಿ ಬಂದಿದೆ. ಮತ್ತೆ ಪ್ರತಿ ವರ್ಷ ಅಲ್ಲಿ ಸುಮಾರು 500 ರಿಂದ 600 ಕೋಟಿ ರೂಪಾಯಿನಷ್ಟು ಕಬ್ಬಿನ ಬೆಳೆ

ಹಾಳಾಗುತ್ತಿದೆ. ಇಲ್ಲಿ ಸುಮಾರು 10 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಸರ್ಕಾರ ಖರ್ಚು ಮಾಡುತ್ತಿದೆ. ಆದರೆ, ದೂದಗಂಗಾ ನದಿಯ ಕಾಳಮೋಡಿ ಡ್ಯಾಂನಿಂದ ನಾಲ್ಕು ಟಿ.ಎಂ.ಸಿ. ನೀರನ್ನು ಯಾವಾಗ ಎಲ್ಲಿಗೆ ಬಿಟ್ಟರು ಎನ್ನತಕ್ಕಂಥ ಉತ್ತರವನ್ನು ಸರ್ಕಾರ ಈಗ ಕೊಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಸದಸ್ಯರು ಕೇಳತಕ್ಕಂಥ ಪ್ರಶ್ನೆಗೆ ಇವತ್ತು ಸಾಯಂಕಾಲದೊಳಗೆ ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನಾಲ್ಕು ಟಿ.ಎಂ.ಸಿ. ನೀರನ್ನು ತೆಗೆದುಕೊಂಡಿದ್ದೇವೆ. ನಾನು ಹೇಳುವತನಕ ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ಸರ್ಕಾರ ಸುಳ್ಳು ಉತ್ತರ ಕೊಡುತ್ತದೆ ಎಂದು ಅವರು ಹೇಳಿದರೆ ನಾನು ಅವರು ಹೇಳತಕ್ಕಂಥದ್ದನ್ನು ಒಪ್ಪಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೆ? ಕಾಳಮೋಡಿ ಡ್ಯಾಂನಿಂದ ಆಕ್ಟೋಬರ್ ತಿಂಗಳಿಂದ ಯಾವಾಗ ಯಾವಾಗ ನಾಲ್ಕು ಟಿ.ಎಂ.ಸಿ. ನೀರು ಬಿಟ್ಟಿದ್ದಾರೆ ಎನ್ನತಕ್ಕಂಥ ಉತ್ತರ ನಾನು ಹೇಳುತ್ತಿದ್ದೇನೆ. ಏಕೆಂದರೆ ಇದು ನನ್ನ ಜಿಲ್ಲೆಗೆ ಬರುವುದರಿಂದ ನಾನೇ ಉತ್ತರ ಹೇಳಬೇಕಾಗಿದೆ. ಅವರು ನೀರೇ ಬಿಟ್ಟಿಲ್ಲವೆಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಮಧ್ಯದಲ್ಲಿ ಯೀಲ್ಡ್ ಆಗಬೇಡಿ.

(ಗೊಂದಲ)

ಅಧ್ಯಕ್ಷರು : ಈಗ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದೇನೆಂದರೆ, ಮಹಾರಾಷ್ಟ್ರ ಸರ್ಕಾರಕ್ಕೆ 37 ಕೋಟಿ ರೂಪಾಯಿ ಹಣವನ್ನು ಕೊಟ್ಟು ದೂದ್ ಗಂಗಾ ನದಿಯ ಕಾಳಮೋಡಿ ಡ್ಯಾಂನಿಂದ ಪ್ರತಿವರ್ಷ ನಾಲ್ಕು ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ಕಳೆದ ವರ್ಷ 3.97 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ನಾನು ಅವರಿಗೆ ಕೊಡುತ್ತೇನೆ. ಆದರೆ ಈ ನೀರು ಕೃಷ್ಣ ನದಿಗೆ ಹೋಗಿಲ್ಲ. ಆದ್ದರಿಂದ ಅವರು ಹೇಳತಕ್ಕಂಥ ಮಾತು ಬೇರೆ.

ಶ್ರೀ ಶಶಿಕಾಂತ್ ನಾಯಕ್ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಕೃಷ್ಣ ನದಿ ಕಣಿವೆಯಿಂದ ಬಂದವನು. ಸುಮಾರು ಐದಾರು ವರ್ಷಗಳಿಂದ ಒಂದು ಹನಿ ನೀರು ಸಹ ನಮ್ಮ ಕೃಷ್ಣ ನದಿ ಕಣಿವೆ ಭಾಗಕ್ಕೆ ಬಂದಿಲ್ಲ. ಸುಮಾರು ಆರೇಳು ವರ್ಷಗಳಿಂದ ಅಲ್ಲಿರತಕ್ಕಂಥ ರೈತರ ಕಬ್ಬಿನ ಬೆಳೆ ಹಾಳಾಗಿ ರೈತರೆಲ್ಲರೂ ಸಾಲಗಾರರಾಗಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪ್ರಸಂಗ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಇವತ್ತಿನದಿವಸ ಅಲ್ಲಿನ ರೈತರು ನೀರಿಗಾಗಿ ವಿಲಿವಿಲಿ ಒದ್ದಾಡುವಂಥ ಪರಿಸ್ಥಿತಿ ಇದ್ದರೂ ಸಹ ನಮ್ಮ ಸರ್ಕಾರ ಮತ್ತು ನಮ್ಮಲ್ಲಿರತಕ್ಕಂಥ ಅಧಿಕಾರಿಗಳು ನಮ್ಮ ಪಾಲಿನ ನೀರನ್ನು ತೆಗೆದುಕೊಳ್ಳುವಂಥ ಪ್ರಯತ್ನ ಮಾಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಾಗಿರತಕ್ಕಂಥ ಶ್ರೀ ಪ್ರಕಾಶ್ ಹುಕ್ಕೇರಿಯವರು

ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ನಿಮಿಷ ಯೀಲ್ಡ್ ಆಗಿ ಅಥವಾ ನನಗೆ ಮತನಾಡುವುದಕ್ಕೆ ಅವಕಾಶ ಕೊಡಿ ಎಂದು ತಮಗೂ ಸಹ ಕೇಳದೆ ಈ ರೀತಿ ಮಧ್ಯೆ ಎದ್ದು ನಿಂತು ಕೊಂಡು ಸಭೆಯಲ್ಲಿ ಮಾತನಾಡುತ್ತಿದ್ದರೆ ನಾವು ಇಲ್ಲಿ ಕುಳಿತು ಕೊಳ್ಳಬೇಕೋ ಅಥವಾ ಬೇಡವೋ? ಸೌಜನ್ಯಕ್ಕಾದರೂ ಅವರು ಯೀಲ್ಡ್ ಆಗಿ ಎಂದು ಕೇಳಿಕೊಂಡು ಮಾತನಾಡಬೇಕು. ಅದನ್ನು ಬಿಟ್ಟು ಅವರಷ್ಟೇ ಅವರು ಎದ್ದು ನಿಂತುಕೊಂಡು ಮತ್ತು ಬೇರೊಬ್ಬರು ನಿಂತುಕೊಂಡು ಮಾತನಾಡುವುದಾದರೆ ನಾವೇಕೆ ಇಲ್ಲಿ ಕುಳಿತುಕೊಳ್ಳಬೇಕು? ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿ ಎಂದು ತಾವು ಹೇಳಿದ್ದೀರಿ. ಸೌಜನ್ಯದಿಂದ ತಾವು ಯೀಲ್ಡ್ ಆಗಿ ಎಂದು ಹೇಳಿ ತಾವು ಮಾತನಾಡಿ. ಆದರೆ, ಅವರೂ ಮಾತನಾಡುತ್ತಿರುತ್ತಾರೆ ಮತ್ತೆ ನೀವೂ ಮಾತನಾಡುತ್ತಿರುತ್ತಿರಿ. ಈ ರೀತಿಯಾದರೆ ಹೇಗೆ? ಈಗ ನೀವು ಮಿನಿಸ್ಟರ್ ಆಗಿದ್ದೀರಿ. You are the part of the Government.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಅವರು ನೀರು ಬಿಟ್ಟಿಲ್ಲವೆಂದು ಹೇಳುತ್ತಿರುವಾಗ ನಾನು ಸುಮ್ಮನೆ ಇರಬೇಕೇ? ನಾನು ಜಿಲ್ಲೆಯ ಮಂತ್ರಿಯಾಗಿ ಮಾತನಾಡಬಾರದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಮಾತನಾಡಬೇಡಿ ಎಂದು ನಾವ್ಯಾರೂ ಹೇಳಲಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನಾನು ಮಂತ್ರಿಯಾಗಿ ಏನೂ ಮಾತನಾಡಬಾರದೆ? ಅವರು ಏನು ಆರೋಪ ಮಾಡುತ್ತಾರೆ ಅದನ್ನು ಕೇಳಿಕೊಂಡು ಸುಮ್ಮನೆ ಇರಬೇಕೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಮತನಾಡಬೇಡಿ ಎಂದು ನಾವು ಹೇಳಿಲ್ಲ' ನಾನು ಮಾತನಾಡುತ್ತೇನೆ ತಾವು ಒಂದು ನಿಮಿಷ ಯೀಲ್ಡ್ ಆಗಿ ಎಂದು ಕೇಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನೀವು ಮಂತ್ರಿಯಾಗಿದ್ದೀರಿ ಆದ್ದರಿಂದ ಮಾತನಾಡಬೇಡಿ ಸುಮ್ಮನೆ ಇರಿ ಎನ್ನುವ ರೀತಿಯಾಯಿತು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಮಂತ್ರಿಯಾಗಿದ್ದೀರಿ. ಆದ್ದರಿಂದ ತಾವು ಮತನಾಡುವಾಗ ಸ್ವಲ್ಪ ಯೀಲ್ಡ್ ಆಗಿ ಎಂದಾದರೂ ಕೇಳಿ ಅಥವಾ ಅಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ಏಕೆಂದರೆ, ನೀವು ಸರ್ಕಾರ ನಡೆಸುವವರು. ಅವರನ್ನು ಕೇಳಿ ಯೋಲ್ಡ್ ಮಾಡಿಕೊಂಡು ತಾವೂ ಕೂಡ ಮಾತನಾಡಿ. Whatever the case may be.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ದೂದ್‌ಗಂಗಾ ಇಷ್ಯೂಸ್ ಬಗ್ಗೆ..

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ರೀತಿ ಮಾತನಾಡುತ್ತಾ ಹೋದರೆ ಸಭೆ ನಡೆಸುವುದಕ್ಕೆ ಹೇಗೆ?

Sri Shivannada S. Patil : He is the District Minister. He has to clarify.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನಾನು ಜಿಲ್ಲಾ ಮಂತ್ರಿಯಾಗಿದ್ದು ಇದು ನನ್ನ ಏರಿಯಾದಲ್ಲಿಯೇ ಬರುತ್ತದೆ.

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾತನಾಡುವುದಕ್ಕೂ ಕೂಡ ನಿಯಮಾವಳಿ ಇದೆಯೆಂದು ಹೇಳುತ್ತಿದ್ದೇವಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾತನಾಡಬೇಡಿ ಎಂದು ನಾವು ಯಾರಿಗೂ ಹೇಳಿಲ್ಲ.

ಅಧ್ಯಕ್ಷರು : ಈಗ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 70 ಪರ್ಸೆಂಟ್‌ಗಿಂತ ಹೆಚ್ಚು ರೈತರು ಮಳೆ ಮತ್ತು ಕೆರೆ ಆಶ್ರಯದಿಂದ ಅವಲಂಭಿತರಾಗಿದ್ದಾರೆ. ಅಂದರೆ, ಇವರು ನೀರಾವರಿ ಇಲ್ಲದೇ ಇರುವಂಥ ಕಡೆ ಜೀವನ ಮಾಡುತ್ತಿದ್ದಾರೆ. ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ನೀರಾವರಿ ಅನುಕೂಲ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪರ್ಸೆಂಟ್ ಇದೆ ಎನ್ನತಕ್ಕಂಥ ಆ್ಯವರೇಜ್ ತೆಗೆದುಕೊಳ್ಳಿ. ಮತ್ತೆ ಯಾವ ತಾಲ್ಲೂಕಿನಲ್ಲಿ ಬಹಳ ಕಡಿಮೆ ಇರತಕ್ಕಂಥ ಆ್ಯವರೇಜ್ ಕೂಡ ತೆಗೆದುಕೊಳ್ಳಿ. ಇವತ್ತಿನದಿವಸ ಯಾವ ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯ ಜಾಸ್ತಿಯಿರುವ ಕಡೆ ಸ್ವಲ್ಪ ಅಭಿವೃದ್ಧಿ ಕೂಡ ಜಾಸ್ತಿಯಿರುತ್ತದೆ. ಅದರೆ, ಯಾವ ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯ ಇಲ್ಲದೆ ಇರತಕ್ಕಂಥವರು ಅಂದರೆ ಖುಷ್ಕಿ ಭೂಮಿಯಲ್ಲಿ ಕೆರೆ ಮತ್ತು ಮಳೆ ಆಶ್ರಯ ಮಾಡಿಕೊಂಡು ಬದುಕುತ್ತಿರುವ ಜನ ಇವತ್ತಿನದಿವಸ ಉಸಿರು ಕಟ್ಟತಕ್ಕಂಥ ಸ್ಥಿತಿಯಲ್ಲಿದ್ದಾರೆ. ನನ್ನ 20 ವರ್ಷಗಳ ಅನುಭವದ ಪ್ರಕಾರ ಹೇಳುವುದಾದರೆ, ಮಳೆ ಮತ್ತು ಕೆರೆ ಆಶ್ರಯದಲ್ಲಿರತಕ್ಕಂಥ ಸಾಮಾನ್ಯ ರೈತ ಬರಗಾಲಕ್ಕೆ ಸಿಕ್ಕಿ ತತ್ತರಿಸಿ ಹೋಗುತ್ತಾನೆ. ಆದರೆ, ಈ ರೈತನ ಬಗ್ಗೆ ನಾವು ಎಂದೂ ಕೂಡ ಚರ್ಚೆ ಮಾಡಿಲ್ಲ. ಇದಕ್ಕೊಂದು ಹಣವನ್ನೂ ತೆಗೆದಿಡಲಿಲ್ಲ ಮತ್ತು ಒಂದು ಪ್ಯಾಕೇಜ್‌ನ್ನೂ ಕೂಡ ಘೋಷಣೆ ಮಾಡಲಿಲ್ಲ. ಇವರನ್ನು ನಾವು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿಕೊಂಡು ಬಂದಿದ್ದೇವೆ. ಅವರ ಮಕ್ಕಳು ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ವಿನಃ ಶಿಕ್ಷಣವೂ ಮಾಡಲಿಲ್ಲ ಮತ್ತು ಯಾರೊಬ್ಬರೂ ಸಹ ಗ್ರಾಜುಯೇಟ್ ಕೂಡ ಆಗಲಿಲ್ಲ ಮತ್ತು ಮುಂದೆ ಕೂಡ ಬರಲಿಲ್ಲ.

5.10 ಪಿಎಂ

ನಿಮ್ಮ ಕಾಲದಲ್ಲಿಯಾದರೂ ಇದರ ಬಗ್ಗೆ ಒಂದು ಸರ್ವೆ ಮಾಡಿಸಿ, ನೀರಾವರಿ ಪ್ರದೇಶ ಯಾವ ತಾಲ್ಲೂಕಿನಲ್ಲಿ ಎಷ್ಟು ಇದೆ, ನೀರಾವರಿ ಪ್ರದೇಶ ಇಲ್ಲದೆ ಇರುವುದು ಯಾವುದು ಇದೆ, ಒಂದು ಅವರೇಜ್‌ನ್ನು ತೆಗೆದುಕೊಂಡು ಅನುಕೂಲ ಇಲ್ಲದಿರುವಂಥ ರೈತನನ್ನು ನೀವು ಉಳಿಸುವುದಕ್ಕೆ ತಾವು ಏನಾದರೂ ಒಂದು ಸಮಗ್ರವಾದಂಥ ಒಂದು ಕಾರ್ಯಕ್ರಮ ನಾವು ಚಿಂತನೆಯನ್ನು ಮಾಡದೆ ಇದ್ದರೆ ದೊಡ್ಡ ಅಪರಾಧ ಮಾಡಿದಂತಾಗುತ್ತದೆ, ಅವರ ಭವಿಷ್ಯಕ್ಕೆ ಹಾಗೂ ಅಭಿವೃದ್ಧಿಗೆ ಧಕ್ಕೆಯಾದಂತಾಗುತ್ತದೆ. ಇದಕ್ಕೆ ಏನಾದರೂ ಒಂದು ವಿಶೇಷವಾಗಿ ಯಾರಿಗೆ ನೀರಾವರಿ ವ್ಯವಸ್ಥೆ ಇಲ್ಲ ಏನಾದರೂ ಅನುಕೂಲವಾಗುವಂಥ ಕಾರ್ಯಕ್ರಮವನ್ನು ತಾವು ರೂಪಿಸಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಸ್ವಾಮಿ, ಆಶ್ಚರ್ಯವೆಂದರೆ, ಮಾನ್ಯ ಸಿದ್ದರಾಮಯ್ಯನವರು,

ದೇವೇಗೌಡರು, ಪಕ್ಕದಲ್ಲಿರುವಂಥ ಶ್ರೀ ಮಹದೇವಪ್ಪನವರು ಜೆಡಿ(ಎಸ್)ನಲ್ಲಿದ್ದವರು ನಿಮಗೆ ಅನುಭವ ಇದೆ, ಎಂದಾದರೂ ಕೇಳಿದ್ದೀರಾ ಸ್ವಾಮಿ, ಈ ಬೋರ್‌ವೆಲ್‌ನ್ನು ಯಾವ ರೈತ ಹಾಕಿಸುತ್ತಾನೆ, ಸಾಮಾನ್ಯವಾಗಿ ನೀರಾವರಿ ಇಲ್ಲದ ಪ್ರದೇಶದಲ್ಲಿ ಬೋರ್‌ವೆಲ್ ಹಾಕಿಸುತ್ತಾರೆ. ಇವತ್ತಿನ ಸಂದರ್ಭದಲ್ಲಿ ಒಂದು ಬೋರ್‌ವೆಲ್ 300 ರಿಂದ 400 ಅಡಿಯವರೆಗೆ ಹಾಕಿಸಿದರೆ ಕನಿಷ್ಟ ಒಂದು ಲಕ್ಷ ರೂಪಾಯಿಗಳು ಬೇಕು. ಅದರಿಂದ ಅವನಿಗೆ ಒಂದು ಲಕ್ಷ ರೂಪಾಯಿಗಳವರೆಗೆ ಸಾಲವಾಗುತ್ತದೆ. ಒಂದೊಂದು ಸಲ ಸಾವಿರ ಅಡಿ ಕೂಡ ಹೋಗುತ್ತದೆ. ಇವತ್ತು ನಿಮ್ಮ ಕೆಪಿಟಿಸಿಎಲ್ ನವರು ಏನು ಮಾಡಿದ್ದಾರೆಂದರೆ, OYT ಎನ್ನುವ ಒಂದು ಪ್ರೋಗ್ರಾಮ್‌ಅನ್ನು ಮಾಡಿ 2 ರಿಂದ 5 ಹೆಚ್‌ಪಿ ಮೋಟಾರ್‌ಗಳು ಇವೆ, ಒಂದೂ ಇಂಚ್ ನೀರು ಬಿದ್ದಿಲ್ಲ, ಎಂದು ತಿಳಿದುಕೊಳ್ಳಿ, ಅದರಿಂದ ಒಂದು ಕುಟುಂಬಕ್ಕಾಗುವಷ್ಟು ತರಕಾರಿಯನ್ನೂ ಬೆಳೆಯುವುದಕ್ಕಾಗುವುದಿಲ್ಲ. ಅವನು ಬೋರ್‌ವೆಲ್‌ನ್ನು ತೆಗೆದುಬಿಟ್ಟ, ಒಂದು ಲಕ್ಷ ರೂಪಾಯಿಗಳ ಬ್ಯಾಂಕಿನಲ್ಲಿ ಸಾಲವನ್ನು ಮಾಡಿದಂತಾಯಿತು. ತಾವು ಡಿಟೇಲ್ಸ್‌ಗೆ ಹೋದರೆ ತಾವು ಗಾಬರಿಯನ್ನು ಪಡುತ್ತೀರಿ, ಅಂತಹ ಬೋರ್‌ವೆಲ್‌ಗಳಿಗೆ ವಿದ್ಯುತ್ ಕನೆಕ್ಷನ್ ಬೇಕು ಎಂದು ಹೇಳಿದ , 25,000 ರೂಪಾಯಿಗಳನ್ನು ಕಟ್ಟಬೇಕು, ಒಟ್ಟಾರೆ ಅವನಿಗೆ 43,000 ರೂಪಾಯಿಗಳವರೆಗೆ ಖರ್ಚಾಗುತ್ತದೆ. ಅಂದರೆ ಅರ್ಥ ಏನು? ಅವನ ಗತಿ ಏನು ಅವನು ಎಲ್ಲಿಗೆ ಹೋಗಬೇಕು. ಯಾರಾದರೂ ಇವತ್ತು ಈ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿರುವಂಥ ರೈತ, ಮಳೆ ಇಲ್ಲದಿರುವಂಥ ಈ ಸಂದರ್ಭದಲ್ಲಿ ಒಂದು ಬೋರ್‌ವೆಲ್‌ನ್ನು ಹಾಕಿಕೊಂಡು ಒಂದಷ್ಟು ತರಕಾರಿಯನ್ನು ಬೆಳೆದು ಒಂದು ಎಕರೆಗೆ ಅನುಕೂಲ ಮಾಡಿಕೊಂಡು, ತನ್ನ ಹೆಂಡತಿ ಮಕ್ಕಳನ್ನು ಸಾಕಬೇಕೆಂದರೆ ಇದರಿಂದ ಸಾಧ್ಯವಿದೆಯೇ? ಮಾನವೀಯತೆಯಿಂದ ರೈತರ ಬಗ್ಗೆ ಕಳಕಳಿ ಇರುವಂಥ ಯಾವುದಾದರೂ ಸರ್ಕಾರ ಈ ರೀತಿಯಾದ ಭಾರವನ್ನು ಅವನ ಮೇಲೆ ಹೇರಬಹುದಾ? ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ, ತಾವು ಏನು ಮಾಡುತ್ತೀರೊ ಗೊತ್ತಿಲ್ಲ, ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಅದರ ಬಗ್ಗೆ ಸಮಾಲೋಚನೆ ಮಾಡಿ ಇದನ್ನು ವಿಥ್‌ಡ್ರಾ ಮಾಡಿಕೊಂಡು ಬರುವಂಥ ದಿವಸಗಳಲ್ಲಿ ಒಣಬೇಸಾಯ ಇರುವಂಥ ಕಡೆಗಳಲ್ಲಿ ಯಾರ್‍ಯಾರು ಬೋರ್‌ವೆಲ್ ಹಾಕಿ ನೀರು ಬರುವ ಕಡೆ ಅವನು ಬದುಕುವುದಕ್ಕೆ ನೀವು ವ್ಯವಸ್ಥೆಯನ್ನು ಎಲ್ಲಾ ರೀತಿಯಿಂದ ನೆರವನ್ನು ಕೊಡುವುದಕ್ಕೆ ನೀವು ಮುಂದೆ ಬಂದು ಮಾಡಬೇಕಾಗಿದೆ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅದರ ಬಗ್ಗೆ ತಾವು ಅನುಕೂಲವನ್ನು ಮಾಡಿಕೊಡಬೇಕು, ಸ್ವಾಮಿ ಸರ್ಕಾರ ಬಹಳ ಪ್ಯಾಕೇಜ್‌ಗಳನ್ನು ಘೋಷಣೆ ಮಾಡಿದೆ. ರೈತರಿಗೆ 850 ಕೋಟಿ ರೂಪಾಯಿಗಳ ಪ್ಯಾಕೇಜ್, ನೇಕಾರರಿಗೆ 180 ಕೋಟಿ ರೂಪಾಯಿಗಳ ಪ್ಯಾಕೇಜ್, ಸಣ್ಣ ಕೈಗಾರಿಕೆಗಳಿಗೆ ವಿಶೇಷ ನೆರವು, ಮಾನ್ಯ ಸಿಂಧ್ಯಾರವರು ಇಲ್ಲ, ಕೊಡಗಿನ ಅಭಿವೃದ್ಧಿಗೆ 107 ಕೋಟಿ ರೂಪಾಯಿಗಳ ಪ್ಯಾಕೇಜ್, ಅರಣ್ಯವಾಸಿಗಳಿಗೆ 60 ಕೋಟಿ ರೂಪಾಯಿಗಳ ಪ್ಯಾಕೇಜ್, ಬಳ್ಳಾರಿ ಜಿಲ್ಲೆಗೆ 1500 ಕೋಟಿ ರೂಪಾಯಿಗಳ ಪ್ಯಾಕೇಜ್, ಬಾಗಲಕೋಟೆ ನವನಗರವನ್ನು ಉದ್ಧಾರ ಮಾಡುತ್ತೇವೆಂದು 635 ಕೋಟಿ ರೂಪಾಯಿಗಳ ಪ್ಯಾಕೇಜ್, ಇದನ್ನು ಸರ್ಕಾರ ಅಧಿಕಾರದಲ್ಲಿ ಇದ್ದಂಥ ಒಂದು ಸಂದರ್ಭದಲ್ಲಿ ಈ ಸದನದ ಒಳಗಡೆ ಮತ್ತು ಹೊರಗಡೆ, ಕಾರ್ಯಕ್ರಮಗಳನ್ನು ಉದ್ಘಾಟನೆ ಮಾಡುವಂಥ ಸಂದರ್ಭದಲ್ಲಿ ಹೇಳಿರುವಂಥ ಪ್ಯಾಕೇಜ್‌ಗಳು ಕಾರ್ಯಕ್ರಮಗಳಾಗಿವೆ. ಇದರಲ್ಲಿ

ಒಂದು ಶಬ್ದವನ್ನೂ ನೀವು ಮಾಡಲಿಲ್ಲ. ಇದರಲ್ಲಿ ಸ್ವಲ್ಪ ಕಾಸು ಸಿಗುತ್ತದೆಂದು ನಾಳೆ ಕೆಲಸವನ್ನು ಮಾಡೋಣವೆಂದರೆ, ಹೈದ್ರಾಬಾದ್–ಕರ್ನಾಟಕ ಎರಡಕ್ಕೂ ಸೇರಿ ನೀವು ಅಲೋಕೇಷನ್ ಮಾಡಿರುವ ದುಡ್ಡು ಎಷ್ಟು ಸ್ವಾಮಿ, 160 ಕೋಟಿ ರೂಪಾಯಿಗಳಾದರೂ ಬೇಡವೆ? ನೀವು 75 ಕೋಟಿ ರೂಪಾಯಿಗಳನ್ನು ಏನೋ ಮಾಡಿದ್ದೀರಿ. ಆದ್ದರಿಂದ ದಯಮಾಡಿ ಈ ಒಂದು ಡೆವಲಪ್‌ಮೆಂಟ್ ಬೋರ್ಡ್‌ಗಳನ್ನು ಮಾಡಿ, ಅದರಿಂದ ಬೇರೆ ಬೇರೆ ಕಾರಣಗಳಿಗೆ ಅನಾನುಕೂಲವಾಯಿತು. ಆ ಕಡೆ ತಾವು ವಿಶೇಷವಾದ ಗಮನವನ್ನು ಕೊಡಬೇಕು. ಇವತ್ತು ಬೆಂಗಳೂರಿನವರು ಬಂದಿದ್ದರು. ಬೆಂಗಳೂರಿನ ಸುತ್ತಮುತ್ತಲೂ ಇರುವಂಥ ನಾಗರೀಕರಿಗೆ ಈ ಕಾವೇರಿ ನೀರು ಸರಬರಾಜಿಗೆ ಮುಂಗಡವಾಗಿ 10,000 ರೂಪಾಯಿಗಳನ್ನು ಕಟ್ಟಬೇಕು, ಇದು ದಿನಾಂಕ: 30–7–2004 ರೊಳಗಾಗಿ, ಈ ದಿನಾಂಕದೊಳಗಾಗಿ ಹಣವನ್ನು ಕಟ್ಟದಿದ್ದರೆ, 5,000 ರೂಪಾಯಿಗಳ ದಂಡ, ನಾಗರೀಕ ಸರ್ಕಾರ, ನಗರದ ಬಗ್ಗೆ ಕಳಕಳಿ ಇರುವಂಥ ಸರ್ಕಾರ ಈ ರೀತಿ ತಲೆಗಂದಾಯ ಹಾಕುವುದಿಲ್ಲ. ದಯಮಾಡಿ ಇದನ್ನು ನೋಡಿ 10 ಸಾವಿರ ರೂ ಇರುವುದನ್ನು 5 ಸಾವಿರ ರೂಪಾಯಿಗಳೆಂದು ಮಾಡಬೇಕು. ನಾನು ಬಹಳ ಸ್ಪಷ್ಟವಾಗಿ ನಿಮಗೆ ಒತ್ತಾಯ ಮಾಡುವಂಥದ್ದು, ರೈತರ ಇವತ್ತಿನ ಈ ದಯಾನೀಯ ಪರಿಸ್ಥಿತಿಯಲ್ಲಿ ಮೂರು ವರ್ಷಗಳ ಕಾಲ ಬರಗಾಲವನ್ನು ಎದುರಿಸಿ ನಾಲ್ಕನೆಯ ವರ್ಷಕ್ಕೆ ಕಾಲಿಡುವಂಥ ಈ ಸಂದರ್ಭದಲ್ಲಿ ಒಂದು ಭಾರಿ ಈ ನಾಡಿನ ಜನ ಮತ್ತೊಮ್ಮೆ ಶ್ರೀ ಸಿದ್ದರಾಮಯ್ಯನವರನ್ನು ಹಣಕಾಸಿನ ಸಚಿವರನ್ನಾಗಿ ಕೂಡಿಸಿರುವಂಥ ಈ ಸಂದರ್ಭದಲ್ಲಿ ಆ ರೈತನ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿ, ಅವನು ನೆಮ್ಮದಿಯಿಂದ ನಿಟ್ಟುಸಿರು ಬಿಡುವುದಕ್ಕೆ ನೀವು ಎಲ್ಲಿಂದ ಸಾಲವನ್ನು ತರುತ್ತೀರಿ ಹೇಳಿ, ಎಲ್ಲರೂ ಒಟ್ಟಿಗೆ ಹೋಗಿ ತರೋಣ. ನಾಲ್ಕೈದು ಪ್ರಮುಖವಾದ ಕಾರ್ಯಕ್ರಮಗಳನ್ನು ಒಂದು ವರ್ಷ ನೀವು ಕೈಬಿಡಿ, ಏನು ಮಾಡುವುದು ಬೇಡ. ಒನ್ ಟೈಮ್, ಆ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ತಾವು ಮುಂದೆ ಬರಬೇಕು, ಆ ರೀತಿ ಕಾರ್ಯಕ್ರಮವನ್ನು ರೂಪಿಸಬೇಕು, ನಮ್ಮ ಶಾಸಕರು ಗೌರವದಿಂದ ಅವರ ಕ್ಷೇತ್ರದಲ್ಲಿ ಓಡಾಡಿ ಏನಾದರೂ ಸಣ್ಣಪುಟ್ಟ ಕೆಲಸಗಳನ್ನು ಮಾಡಬೇಕು ಎನ್ನುವುದು ಇದ್ದರೆ, ಆ ಪ್ರಾದೇಶಿಕ ನಿಧಿ 50 ಲಕ್ಷ ರೂಪಾಯಿಗಳನ್ನು ಯಾವುದೇ ಷರತ್ತನ್ನು ಹಾಕದೆ ನಮ್ಮ ಶಾಸಕರುಗಳಿಗೆ ಕೊಡಿ ಆಡಳಿತ ಪಕ್ಷದ ಶಾಸಕರಿಗೆ ಬೇಡವೆ? ಏಕೆ ಮೇಜು ಕುಟ್ಟಿ ಸಂತಸ ವ್ಯಕ್ತಪಡಿಸುತ್ತಿಲ್ಲವಲ್ಲಾ? ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನ ಮಾಡಿ ಚರ್ಚೆ ಮಾಡಿ, ನನಗೆ ಬೆಂಬಲವನ್ನು ಕೊಡಿ ಎಂದು ನಾನು ಹೇಳುವುದಿಲ್ಲ, ಎಲ್ಲಾ ಶಾಸಕರ ದೃಷ್ಟಿಯಿಂದ ತಾವು ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನೀವು ಚೆನ್ನಾಗಿ ಮಾತನಾಡಿದಿರಿ ಎಂದು ನಾವು ಹೇಳುವವರು ಇದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಥ್ಯಾಂಕ್ಸ್, ತಾವು ಈ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಾ, ಈ ಬಜೆಟ್‌ನಲ್ಲಿಯೆ ರೈತರಿಗಾಗಲಿ, ಕೃಷಿ ಕಾರ್ಮಿಕರಿಗಾಗಲಿ, ಹರಿಜನ ಗಿರಿಜನ ಬಂಧುಗಳಿಗಾಗಲಿ, ಸಣ್ಣಪುಟ್ಟ ಕೈಗಾರಿಕೆಗಳಿಗಾಗಲಿ, ಯಾವ ಒಂದು ಅನುಕೂಲವಾದಂಥ ನಮ್ಮ ನಿರೀಕ್ಷೆ ಹಣವನ್ನು ತಾವು ತೆಗೆದು ಇಟ್ಟಿಲ್ಲ. ಆದರೂ ಕೂಡ ತಾವು ಆ ಕುರ್ಚಿಯಲ್ಲಿ ಅಂಟಿಕೊಂಡು ಕುಳಿತಿದ್ದೀರಿ? ಆದಷ್ಟು ಬೇಗ ಜೆಡಿ(ಎಸ್) ನವರು ನೀವು ಸ್ವತಂತ್ರವಾಗಿ

ಕುಳಿತುಕೊಳ್ಳಲು ಪ್ರಯತ್ನವನ್ನು ಮಾಡಿ. ಇಲ್ಲದಿದ್ದರೆ ಈ ಸ್ಥಾನ ಬೇಡವೆಂದು ನೀವು ಹೊರಗಡೆ ಬನ್ನಿ, ಇಲ್ಲದಿದ್ದರೆ ನೀವು ಈ ಬೇಡಿಕೆಗಳನ್ನು ಈಡೇರಿಸಬೇಕು. ಒಂದು ಗಂಟೆ ಇಂತಹ ಬಜೆಟ್‌ನ ದಪ್ಪ ಪುಸ್ತಕವನ್ನು ನಿಮಗೆ ಶಕ್ತಿ ಇತ್ತು ನೀವು ಓದಿದಿರಿ, ಆದರೆ ಇದರಿಂದ ನಿಮಗೆ ಏನು ಪ್ರಚಾರ ಸಿಕ್ಕಿದೆ, ಅದಕ್ಕೆ ಅನುಗುಣವಾದಂಥ ಯಾವುದೇ ಕಾರ್ಯಕ್ರಮಗಳಿಲ್ಲದ ಬಜೆಟ್ ಇದು ಎಂದು ನಾನು ವಿರೋಧವನ್ನು ಮಾಡಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

6. ಪ್ರಕಟಣೆ

ಅಧ್ಯಕ್ಷರು : ದಿನಾಂಕ 21ನೇ ಜುಲೈ, 2004ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 23ನೇ ಜುಲೈ, 2004ರಿಂದ ಪ್ರತಿದಿನ ಬೆಳಿಗ್ಗೆ 10–00 ಗಂಟೆಗೆ ಅಧಿವೇಶನ ಸಮಾವೇಶಗೊಳ್ಳುವುದು.

2. ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.	ಜುಲೈ 23 ರಿಂದ 27 ರವರೆಗೆ
3. ಬೇಡಿಕೆಗಳ ಮೇಲಿನ ಚರ್ಚೆ, ಸರ್ಕಾರದಿಂದ ಉತ್ತರ ಹಾಗೂ ಅಂಗೀಕರಿಸುವುದು	ಜುಲೈ 28 ಹಾಗೂ 29 ರಂದು

4. ದಿನಾಂಕ 6ನೇ ಆಗಸ್ಟ್, 2004ರವರೆಗೆ ಪ್ರಸ್ತುತ ಅಧಿವೇಶನವನ್ನು ನಡೆಸಲು ತೀರ್ಮಾನಿಸಲಾಗಿದೆ.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ. ಈಗ ಸದನವನ್ನು ನಾಳೆ ದಿನಾಂಕ: 23–7–04ರಂದು ಬೆಳಿಗ್ಗೆ: 10 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಾಯಂಕಾಲ 5 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 23–7–2004 ರಂದು ಬೆಳಿಗ್ಗೆ: 10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

7. ಅನುಬಂಧ I

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

41 (312): ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನಲ್ಲಿ ರೈತ ಗ್ರಾಹಕರು ವಿದ್ಯುತ್ ಬಾಕಿ ಪಾವತಿಸಿದ ಮೊತ್ತ ಎಷ್ಟು;

ಆ) ನೀರಾವರಿ ಪಂಪ್ ಸೆಟ್ ಬಳಕೆದಾರರ ಬಾಕಿ ಮೊತ್ತವನ್ನು ಈ ಹಿಂದಿನ ಸರ್ಕಾರ ಮನ್ನಾಮಾಡಿರುವುದು ನಿಜವೆ;

ಇ) ಅಂತಹ ನೀರಾವರಿ ಪಂಪು ಸೆಟ್ ಬಳಕೆದಾರರ ಸಂಖ್ಯೆ ಎಷ್ಟು;